
ಸಂಪುಟ 22 ಸಂಚಿಕೆ 25 ಜೂನ್ 14-20, 1999 ರೂ 3.00 ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ಕಾರ್ಗಿಲ್‌ನಲ್ಲಿ ಬಣ್ಣ ಬಯಲಾಗುವ ಭಯವೇ ಸರಕಾರಕ್ಕೆ?



ಸುಂದರ ಹೆಂಚಿಗೆ ಬಂದಿದೆ ಕುತ್ತು!

ಕಳಪೆ ಕಾರ್ಗಿಲ್ ಬೀಜಕ್ಕೆ ರೈತರ ದಂಡ

ದ.ಆಫ್ರಿಕಾದ ದುಡಿವ ಜನರ ಬೆಂಬಲದಿಂದ

ಎ.ಎನ್.ಸಿ. ಜಯಭೇರಿ



ಬಿಜೆಪಿಗೆ ಗೋವಾದಲ್ಲಿ 'ಸಹಾನುಭೂತಿಯ ಅಲೆ' ಏಳಲೇ ಇಲ್ಲ

ಸಂಪಾದಕೀಯ

ದಳದಲ್ಲಿ ಬಿನ್ನಮತವೆಂಬ ತಳಮಳ

ಒಗ್ಗಟ್ಟು, ಬಿಕ್ಕಟ್ಟುಗಳು ರಾಜ್ಯ ಜನತಾದಳದಲ್ಲಿ ಸದಾ ಉರುಳುತ್ತಿರುವ ಚಕ್ರಗಳು ಎಂಬ ಭಾವನೆಯನ್ನು ಸದ್ಯದ ಬೆಳವಣಿಗೆಗಳು ತೋರುತ್ತಿವೆ.

ರಾಜ್ಯದಲ್ಲಿ ಕೋಮುವಾದಿ ಬಿಜೆಪಿ, ಭ್ರಷ್ಟ ಜನವಿರೋಧಿ ಕಾಂಗ್ರೆಸ್‌ಗಳೆರಡನ್ನೂ ಎದುರಿಸುವ ರಾಜಕೀಯ ತೀರ್ಮಾನದ ನಂತರ ಅಂತರಂಗದಲ್ಲಿನ ಅನೇಕ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಐಕ್ಯತೆಯ ದ್ಯೋತಕವಾಗಿ ರಾಜ್ಯದಲ್ಲೆಲ್ಲಾ ಜನತಾದಳ ಮುಖಂಡರು ಪ್ರವಾಸ ನಡೆಸಿದರು. ನಿರೀಕ್ಷಿತ ಚುನಾವಣೆಯ ಅಂಗಳದಲ್ಲಿ ನಡೆದ ತಾಲೀಮು ಇದಾದರೂ ಸದಾ ಕೋಮುವಾದದ ವಿರುದ್ಧ ನಿಲುವು ತಾಳುತ್ತಾ ಬಂದ ದಳ ಪೂರ್ಣ ನಿಶ್ಶಕ್ತವಂತೂ ಅಲ್ಲ ಎಂಬುದನ್ನೂ ತೋರಿಸಿತು. ಆದರೆ ಮತ್ತೆ ಈಗ ಕೆಲವು ಸಚಿವರು ಭಿನ್ನಾಭಿಪ್ರಾಯದ ಕೂಗು ಎಬ್ಬಿಸಿದ್ದಾರೆ.

ಸಚಿವ ಎಂ.ಎಸ್. ಪಾಟೀಲರು ಬಹಿರಂಗವಾಗಿ ಪ್ರದೇಶ ಜನತಾದಳದ ಅಧ್ಯಕ್ಷರಾದಾಗ್ಯೂ ಸಿದ್ಧರಾಮಯ್ಯನವರನ್ನು ಬದಲಾಯಿಸಿ ಉತ್ತರ ಕರ್ನಾಟಕದ ಒಬ್ಬರನ್ನು ಆ ಸ್ಥಾನಕ್ಕೆ ಆಯ್ಕೆ ಮಾಡಬೇಕೆಂದಿದ್ದಾರೆ.

ಪಟೇಲರ ಬಣದವರೆಂದೇ ಗುರುತಿಸಿಕೊಳ್ಳುತ್ತಿರುವ ಪಾಟೀಲರು ಮುಖ್ಯಮಂತ್ರಿಗಳ ಸೂಚನೆಯಂತೆ ತಾತ್ಕಾಲಿಕವಾಗಿ ಸುಮ್ಮನಿರುವುದಾಗಿಯೂ ಹೇಳಿದ್ದಾರೆ. ಭಿನ್ನ ಮತೀಯರಿಗೆ ಪಟೇಲರು ಚುರುಕಿನ ನಿರಾಕರಣೆಯ ಉತ್ತರ ನೀಡಿದ ಬಳಿಕವೂ ಭಿನ್ನಮತ ಬಹಿರಂಗಕ್ಕೆ ಹರಿಯುವುದು ಹಲವು ಪ್ರಶ್ನೆಗಳನ್ನು ಹುಟ್ಟಿಸುತ್ತಿದೆ.

ಚುನಾವಣೆಗಳು ಹತ್ತಿರವಾಗುತ್ತಿರುವಂತೆ ಜನತಾದಳ ಗೆಲ್ಲುವುದೇ? ಅಥವಾ ತಮ್ಮ ಕಾರ್ಯ ವಿಧಾನಗಳ ಭಾರದಿಂದ ಗೆಲ್ಲಬಹುದೇ ಎಂಬ ಅನುಮಾನ ಹಲವು ಹಾಲೀ ಸಚಿವರು, ಶಾಸಕರನ್ನು ಕಾಡುತ್ತಿದೆ. ಹೀಗಾಗಿ ಗೆಲ್ಲಬಹುದಾದ ಬೇರೆ ಪಕ್ಷಗಳಿಗೆ 'ವಲಸೆ ಹೋಗಲು' ದಳದ ಸಚಿವರ ಒಂದು ತಂಡ ಅಹೋರಾತ್ರವಾಗಿ ಗುಪ್ತ ಯತ್ನಗಳನ್ನು ನಡೆಸಿರುವುದು ಬಯಲಾಗುತ್ತಿದೆ. ಹಾಗೋ ಹೀಗೋ ಉಳಿದುಕೊಳ್ಳುವ ಉತ್ತರಕರ್ನಾಟಕವನ್ನೋ ಅಥವಾ ತೀವ್ರವಾಗಿರುವ 'ಜಾತಿ' ಅಂಶಗಳನ್ನೋ ಬಳಸುವ ಪ್ರಯತ್ನಗಳು ನಡೆದಿವೆ. ಉತ್ತರ ಕರ್ನಾಟಕ ವೀಗ ಬಿಜೆಪಿಗೆ, ಕಾಂಗ್ರೆಸ್‌ಗೆ, ಭಿನ್ನಮತೀಯ ದಳದವರಿಗೆ ಅನೇಕ ಹೊಸ ಆಶೆ ಚಿಗುರಿಸಿದೆ. ಇದರಲ್ಲಿ ಮೇಲ್ಜಾತಿ ಭೂಮಾಲೀಕ ನಾಯಕರುಗಳ ಪಾತ್ರ ಗಮನಾರ್ಹವಿದೆ. ಈ ತೆರೆ-ಮರೆಯ ತಳ್ಳಾಟಗಳು ಚುನಾವಣೆಯವರೆಗೂ ಮುಂದುವರಿಯಬಹುದು. ಈ ನಡುವೆ ದಳದ ಶಾಸಕರನ್ನು, ಉತ್ತರ ಕರ್ನಾಟಕದ ನಾಯಕರನ್ನು ಸೆಳೆಯುವ ಬಗ್ಗೆ ಹೆಗಡೆ ಮೇಲೆ ವಿಶ್ವಾಸವಿರಿಸಿದ್ದ ಬಿಜೆಪಿ, ಹೆಗಡೆ ನಿರಾಸಕ್ತಿ ಅಥವಾ ಅಸಮರ್ಥತೆ ಅಥವಾ ಒಟ್ಟಾರೆ ಏನೂ ತೋಚದ ಹೆಗಡೆ ಸ್ಥಿತಿಯಿಂದಾಗಿ ಬಿಜೆಪಿ ತಾನೇ ಯತ್ನಕ್ಕೆ ಇಳಿದಂತಿದೆ. ಜನತಾದಳದ ಶಾಸಕರಿಗೆ ಪ್ರವೇಶವಿಲ್ಲವೆಂದೇ ಸ್ಪಷ್ಟವಾಗಿ ಸಾರಿದ್ದ ಯಡಿಯೂರಪ್ಪನವರು ಈಗ ದಳದ ಅಥವಾ ಇತರೆ ಯಾರಾದರೂ ಬಿಜೆಪಿಗೆ ಬರಲು ಮುಕ್ತ ಅವಕಾಶವಿದೆ ಎಂದು ಆಹ್ವಾನ ಪತ್ರ ಹಿಡಿದು ಹೊಸ್ತಿಲಲ್ಲಿ ನಿಂತಿರುವುದು ವಿಶೇಷ ಬೆಳವಣಿಗೆ. ಈ ಅಂಶಗಳತ್ತ ಧರ್ಮನಿರಪೇಕ್ಷಿತ ಶಕ್ತಿಗಳು ಹಾಗೂ ನಾಯಕರು ಗಮನಹರಿಸಬೇಕು. ಇಲ್ಲವಾದರೆ ಈ ಸ್ವಾರ್ಥದ ಆಟಗಳಿಗೆ ಜನತೆ ಪಾಠ ಕಲಿಸಿಯಾರು.

4500 ಕೋಟಿ ರೂ. ಬಾಕಿಯಿಟ್ಟುಕೊಂಡವರೆದುರು ಮಂಡಿಯೂರಿದ ಉಸ್ತುವಾರಿ ಸರಕಾರ

ಉಸ್ತುವಾರಿ ವಾಜಪೇಯಿ ಸರಕಾರ ಜೂನ್ 9 ರಂದು ಮಾಡಿದ ಸಂಪುಟ ಬದಲಾವಣೆ ಒಂದು ಸಾಮಾನ್ಯ ಬದಲಾವಣೆಯಲ್ಲ. ಸಂಪರ್ಕಮಂತ್ರಿ ಜಗಮೋಹನ್‌ರ ಖಾತೆ ಬದಲಾವಣೆ ಮಾಡಿದ್ದು ಸರಕಾರಕ್ಕೆ 4500 ಕೋಟಿ ರೂ. ಬಾಕಿಯಿಟ್ಟುಕೊಂಡಿರುವ ದೊಡ್ಡ ಬಂಡವಾಳಶಾಹಿಗಳ ಒತ್ತಡದಿಂದ ಎಂಬುದು ಈಗ ಜನಜನಿತವಾದ ಸಂಗತಿ. ಸೆಲ್ಯುಲರ್ ಫೋನ್, ಮೂಲ ಟೆಲಿಫೋನ್ ಮತ್ತಿತರ ಲೈಸೆನ್ಸ್ ಶುಲ್ಕಗಳ ಬಾಕಿ ಮೊತ್ತವಿದು. ಜಗಮೋಹನ್‌ರ ಅಡಿಯಲ್ಲಿ ಸಂಪರ್ಕ ಇಲಾಖೆ ಈ ಖಾಸಗೀ ಟೆಲಿಫೋನ್ ಕಂಪನಿಗಳವರು ತಾವು ಕೊಡುತ್ತೇವೆಂದು ಕಾಂಟ್ರಾಕ್ಟ್ ಮಾಡಿಕೊಂಡ ಈ ಶುಲ್ಕಗಳನ್ನು ಸರಕಾರಕ್ಕೆ ತೆರಬೇಕು, ಇಲ್ಲವಾದರೆ ಅವರು ಕೊಟ್ಟ ಬ್ಯಾಂಕ್ ಗ್ಯಾರಂಟಿಗಳಿಂದ ಅದನ್ನು ವಸೂಲು ಮಾಡಲಾಗುವುದು ಎಂದು ಆಗ್ರಹಪಡಿಸಿತ್ತು. ಇದು ಸರಿಯಾದ ಕ್ರಮವಾಗಿತ್ತು. ಇದರಿಂದ ಇದುವರೆಗೆ 1000 ಕೋಟಿ ರೂ. ಬಾಕಿ ವಸೂಲು ಕೂಡಾ ಆಗಿತ್ತು. ಆದರೆ ಈಗ ಅವರ ಖಾತೆ ಬದಲಾವಣೆ ಮಾಡಿ ಪ್ರಧಾನ ಮಂತ್ರಿಗಳು ದೊಡ್ಡ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ರೀತಿಯನ್ನು ಬಿಡಬೇಕೆಂಬ ಖಾಸಗಿ ಟೆಲಿಫೋನ್ ಮಾಲಕರ ಒತ್ತಡಕ್ಕೆ ತಲೆಬಾಗಿದ್ದಾರೆ. ಆ ಮೂಲಕ ತಮ್ಮ ಪ್ರತಿಷ್ಠೆಗೆ ಮಸಿ ಬಳಿದುಕೊಂಡಿದ್ದಾರೆ.

ಒಂದೆಡೆ ಕಾರ್ಗಿಲ್ ವ್ಯವಹಾರಗಳಲ್ಲಿ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್‌ರ ಅಸಮರ್ಥನೀಯ ನಿಲುವನ್ನು ಸಮರ್ಥಿಸಿಕೊಳ್ಳುವ ಈ ಬಿಜೆಪಿ ನೇತೃತ್ವದ ಸರಕಾರ ಎಷ್ಟು ಚುರುಕಾಗಿ ಖಾಸಗಿ ಹಿತಾಸಕ್ತಿಗಳಿಗೆ ಬಲಿಯಾಗುತ್ತಿದೆ ಎಂಬ ನಾಚಿಕೆಗೇಡಿನ ಸಂಗತಿಯನ್ನು ದೇಶದ ಜನತೆ ಗಮನಿಸುತ್ತಿದ್ದಾರೆ ಎಂದು ಈ ಬಗ್ಗೆ ಪ್ರತಿಕ್ರಿಯಿಸುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಖಾತೆ ಬದಲಾವಣೆ ಪ್ರಧಾನ ಮಂತ್ರಿಗಳ ಅಧಿಕಾರ ವ್ಯಾಪ್ತಿಯ ವಿಷಯ ಎಂದು ಈ ಅತ್ಯಂತ ಅನುಚಿತ ನಾಚಿಕೆಗೇಡಿನ ಕ್ರಮವನ್ನು ಸಮರ್ಥಿಸಿಕೊಳ್ಳಲು ಬಿಜೆಪಿ ಪ್ರಯತ್ನಿಸಿದೆ. ಆದರೆ ಬಾಕಿಯಿಟ್ಟುಕೊಂಡ ಟೆಲಿಫೋನ್ ಕಂಪನಿಗಳಿಂದ ಬಾಕಿ ವಸೂಲಿ ಮಾಡುವ ಸಂಪರ್ಕ ಇಲಾಖೆಯ ನಿರ್ಣಯಗಳನ್ನು ಯಾವುದೇ ರೀತಿಯಲ್ಲಿ ಬದಲಿಸುವ ಹಕ್ಕು ಪ್ರಧಾನಮಂತ್ರಿಗಳ ಕಚೇರಿಗಿದೆಯೇ? ಒಂದು ಉಸ್ತುವಾರಿ ಸರಕಾರ ಯಾವುದೇ ಅಂಗೀಕೃತ ಧೋರಣೆಯನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದ್ದರೆ ಅದು ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುತ್ತಿರುವ ಭ್ರಷ್ಟ - ಆಚರಣೆಯೆಂದೇ ಅರ್ಥವಾಗುತ್ತದೆ. ಪ್ರಧಾನ ಮಂತ್ರಿಗಳ ಕಚೇರಿ ಬಾಕಿ ಮಾಡಿಕೊಂಡ ಕಂಪನಿಗಳನ್ನು ರಕ್ಷಿಸಲಿಕ್ಕಾಗಿ , ಅವುಗಳಿಗೆ ಲಾಭಮಾಡಿಕೊಡಲಿಕ್ಕಾಗಿ ಈ ರೀತಿ ಒಂದು ಧೋರಣೆಯಲ್ಲಿ ಕ್ರಿಯಾಡಿಸಲು ಬಿಡಬಾರದು ಎಂಬ ಆಶಯದಿಂದ ದೇಶದ

ಪುಟ 8 ಕ್ಕೆ

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಕಮ್ಯೂನಿಸ್ಟ್ ಪಕ್ಷದಲ್ಲಿ ಬ್ರಾಹ್ಮಣರೇ ನಾಯಕರು ಎಂಬ ಭಾವನೆ ಸಾಮಾನ್ಯ ಜನರಲ್ಲಿ ಆಳವಾಗಿ ಬೇರೂರಿದೆಯಲ್ಲಾ ನಿಜವೆ?

-ಬಿ. ರಾಜಶೇಖರಮೂರ್ತಿ

ಇಂಥದೊಂದು ಭಾವನೆ ಜನ ಸಾಮಾನ್ಯರಲ್ಲಿ ಇದೆ ಎಂಬುದು ಆಗಾಗ್ಗೆ ನಮ್ಮ ಗಮನಕ್ಕೆ ಬಂದಿದೆ. ಆದರೆ ನಿಜಸ್ಥಿತಿ ಇದಕ್ಕೆ ಪೂರ್ತಿ ವಿರುದ್ಧವಾಗಿದೆ. ರಾಷ್ಟ್ರ ಮಟ್ಟದಲ್ಲಿ ನಾಯಕತ್ವವೆಂದರೆ ನಮ್ಮ ಪ್ರಧಾನ ಕಾರ್ಯದರ್ಶಿ ಹಾಗೂ ಪಾಲಿಟ್ ಬ್ಯೂರೋ. ಅದರಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷಕ್ಕೆ ನಾಯಕತ್ವ ನೀಡಿದವರಲ್ಲಿ ಇ.ಎಂ.ಎಸ್. ನಂಬೂದರಿ ಪಾದ್ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದವರು. ಅವರಿಗಿಂತ ಮೊದಲು ಪ್ರಧಾನ ಕಾರ್ಯದರ್ಶಿಯಾಗಿದ್ದ ಪಿ. ಸುಂದರಯ್ಯನವರು ಹಾಗೂ ಈಗಿನ ಪ್ರಧಾನ ಕಾರ್ಯದರ್ಶಿಯಾಗಿರುವ ಹರ್‌ಕಿಷನ್ ಸಿಂಗ್ ಸುರ್ಜಿತ್‌ರವರಿಬ್ಬರೂ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದವರಲ್ಲ. ಹಾಗೆಯೇ ನಮ್ಮ ಪಾಲಿಟ್ ಬ್ಯೂರೋದಲ್ಲಿರುವ ಹದಿನೈದು ಜನರಲ್ಲಿ ಒಬ್ಬಿಬರು ಬಿಟ್ಟರೆ ಇನ್ನುಳಿದವರೆಲ್ಲಾ ಬ್ರಾಹ್ಮಣರೇತರ ಕುಟುಂಬಗಳಿಂದ ಬಂದವರಾಗಿರುತ್ತಾರೆ.

ಹಾಗೆಯೇ ರಾಜ್ಯ ನಾಯಕತ್ವವೆಂದರೆ ರಾಜ್ಯ ಕಾರ್ಯದರ್ಶಿ ಹಾಗೂ 12 ರಾಜ್ಯ ಕಾರ್ಯದರ್ಶಿ ಮಂಡಳಿ. ರಾಜ್ಯ ಕಾರ್ಯದರ್ಶಿಯಾಗಿ ಇಲ್ಲಿಯವರೆಗೆ ಇದ್ದ ಹಾಗೂ ಇರುವ 5 ಜನರಲ್ಲಿ ಒಬ್ಬರನ್ನುಳಿದು ಇನ್ನುಳಿದ ನಾಲ್ಕು ಜನ ಬ್ರಾಹ್ಮಣ ಕುಟುಂಬದಿಂದ ಬಂದವರು. ಕಾರ್ಯದರ್ಶಿ ಮಂಡಳಿಯಲ್ಲಿ ಈಗ ಇರುವ ಹತ್ತು ಜನರಲ್ಲಿ ಕಾರ್ಯದರ್ಶಿಯೊಬ್ಬರನ್ನುಳಿದು ಇನ್ನುಳಿದವರೆಲ್ಲಾ ಬ್ರಾಹ್ಮಣೇತರ ಕುಟುಂಬಗಳಿಂದ ಬಂದವರು. ಹಿಂದಿನ ಕಾರ್ಯದರ್ಶಿ ಮಂಡಳಿಗಳಲ್ಲಿ ಕೂಡ ಹೆಚ್ಚೆಂದರೆ ಒಂದು ಸಮಯದಲ್ಲಿ ಮೂರು ಜನ ಮಾತ್ರ ಬ್ರಾಹ್ಮಣ ಮೂಲದವರು ಇದ್ದರು. ಇನ್ನು ರಾಜ್ಯ ಸಮಿತಿ, ಕೇಂದ್ರ ಸಮಿತಿಗಳಲ್ಲಂತೂ ಶೇಕಡ ಒಂದೆರಡರಷ್ಟು ಮಾತ್ರ ಬ್ರಾಹ್ಮಣ ಮೂಲದವರು ಎಂದ ಮೇಲೆ ಜನ ಸಾಮಾನ್ಯರಲ್ಲಿರುವ ಈ ಕಲ್ಪನೆ ಎಷ್ಟು ತಪ್ಪು ಎಂಬುದನ್ನು ತಾವಾಗಿಯೇ ತಿಳಿದುಕೊಳ್ಳಬಹುದು.

ಮೇಲೆ ಹೇಳಿದ ಮಾತುಗಳೆಲ್ಲಲ್ಲಾ ಒಂದು ವಿಷಯವನ್ನು ನೀವು ಗಮನಿಸಿರಬಹುದು. ಏನೆಂದರೆ ಇಲ್ಲಿ ಯಾರನ್ನೂ ಬ್ರಾಹ್ಮಣರೆಂದು ಅಥವಾ ಬ್ರಾಹ್ಮಣೇತರರೆಂದು ಕರೆದಿಲ್ಲ. ಕೇವಲ ಅವರು ಹುಟ್ಟಿದ ಕುಟುಂಬಗಳ ಜಾತಿಯನ್ನು ಮಾತ್ರ ಸೂಚಿಸಲಾಗಿದೆ. ಏಕೆಂದರೆ ಎಲ್ಲಾ ಕಮ್ಯುನಿಸ್ಟ್‌ರು ಜಾತಿಯನ್ನು ತೊರೆದವರು. ಕಮ್ಯುನಿಸ್ಟ್‌ರ ನಡುವೆ ಹಲವು ದಶಕಗಳಿಂದ ಪರಸ್ಪರ ಪರಿಚಿತರಾದವರಿಗೂ ಅಥವಾ ಆತ್ಮೀಯ ಮಿತ್ರರಾದವರಿಗೂ ಕೂಡ ತಮ್ಮ ಮಿತ್ರ ಕಮ್ಯುನಿಸ್ಟ್‌ರ ಜಾತಿ ಎಷ್ಟೋ ವೇಳೆ ಅವರ ಹೆಸರುಗಳಲ್ಲಿಯೇ ಸೂಚಿತವಾದ ಹೊರತು ತಿಳಿದಿರುವುದೇ ಇಲ್ಲ. ನನ್ನ ವೈಯಕ್ತಿಕ ಅನುಭವದಲ್ಲಿಯೇ ಹಲವು ಸಂಗಾತಿಗಳಿಗೆ ನನ್ನ ಜಾತಿ ಹಾಗೂ ನನಗೆ ಹಲವು ಸಂಗಾತಿಗಳ ಜಾತಿ ನಮ್ಮ ಪರಿಚಯವಾದ ಎಷ್ಟೋ ವರ್ಷಗಳ ನಂತರ, ಕೆಲವೊಮ್ಮೆ ದಶಕಗಳ ನಂತರ ಗೊತ್ತಾಗಿದೆ. ಇನ್ನೂ ಎಷ್ಟೋ ಸಂಗಾತಿಗಳಿಗೆ ಈಗಲೂ ತಿಳಿದಿಲ್ಲ.

ಸಾಮಾನ್ಯವಾಗಿ ನಮ್ಮ ಜಾತಿ ಬದ್ಧ ಸಮಾಜದಲ್ಲಿ ತಮ್ಮ ಜೊತೆ ಮೊದಲ ಬಾರಿ ಮಾತನಾಡುತ್ತಿರುವಾಗಲಾದರೂ ಸರಿ ಅವರ ಜಾತಿಯನ್ನು ತಿಳಿದುಕೊಂಡಲ್ಲದೆ ಮನಸ್ಸಿಗೆ ಸಮಾಧಾನವೇ ಇರುವುದಿಲ್ಲ. ಅವರ ಜೊತೆ ವ್ಯವಹರಿಸುವುದೇ ಕಷ್ಟವಾಗುತ್ತದೆ. ಜಾತಿಯನ್ನು ತಿಳಿದುಕೊಂಡ ಮೇಲೆ ನಿರ್ಭಿಡೆಯಿಂದ ಮಾತನಾಡಬಹುದು. ಅಥವ ಮಾತನ್ನು ನಿಯಂತ್ರಿಸಿಕೊಳ್ಳಬಹುದು. ಒಬ್ಬರ ಜಾತಿ ತಿಳಿದ ಮೇಲೆ ಅದಕ್ಕೆ ತಕ್ಕಂತೆ ಆ ಜಾತಿಯ ಬಗ್ಗೆ ಸಮಾಜದಲ್ಲಿರುವ ಎಲ್ಲಾ ಪೂರ್ವಾಗ್ರಹಗಳನ್ನು ಆ ವ್ಯಕ್ತಿಯ ಮೇಲೆ ಆರೋಪಿಸಿ ಅವರನ್ನು ಒಂದು ಚೌಕಟ್ಟಿನಲ್ಲಿರಿಸಿದಾಗ ಮಾತ್ರ ವ್ಯವಹಾರ ಸಾಧ್ಯವಾಗುತ್ತದೆ. ಇಂತಹ ವಾತಾವರಣದಲ್ಲಿ ಕಮ್ಯುನಿಸ್ಟ್‌ರ ಈ ರೀತಿಯ ನಡವಳಿಕೆಯನ್ನು ನಂಬಲು ಅರ್ಥ ಮಾಡಿಕೊಳ್ಳಲು ಕಷ್ಟ. ಆದರೂ ನಿಜ.

ಮತ್ತೊಂದು ಉದಾಹರಣೆಯನ್ನು ಹೇಳಬಹುದು. ಪ.ಬಂಗಾಳ ಎಡರಂಗ ಸರ್ಕಾರದಲ್ಲಿ 18 ವರ್ಷಗಳಿಂದ ಶಿಕ್ಷಣ ಸಚಿವರಾಗಿರುವ ಕಾಂತಿ ಬಿಸ್ವಾಸ್ ರವರೊಡನೆ ಅವರ ಪರಿಚಯವಾದ 10 ವರ್ಷಗಳಲ್ಲಿ ಹಲವು ಬಾರಿ ಗಂಟೆಗಟ್ಟಲೆ ಚರ್ಚಿಸಿದ್ದರೂ ಅವರ ಜಾತಿ ನನಗೆ ಗೊತ್ತಿರಲೇ ಇಲ್ಲ. ನನಗೆ ಗೊತ್ತಾದದ್ದು ಕೂಡ ಒಂದು ವಿಶೇಷ ಸಂದರ್ಭದಲ್ಲಿ. ಕೇರಳದಲ್ಲಿ ನಡೆದ ಕೃಷಿ ಕೂಲಿಕಾರರ ರಾಷ್ಟ್ರಮಟ್ಟದ ಶಿಬಿರವೊಂದರಲ್ಲಿ ಪಾಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಉಪನ್ಯಾಸಮಾಡುತ್ತಾ "ಕಾನ್ಷಿರಾಂರವರು ಬಹಿರಂಗ ಸಭೆಯೊಂದರಲ್ಲಿ ಪ. ಬಂಗಾಳದ ಸರ್ಕಾರದಲ್ಲಿ ಒಬ್ಬರೂ ದಲಿತ ಸಚಿವರಿಲ್ಲ ಮೀಸಲು ವಿಧಾನಸಭಾ ಹಾಗೂ ಲೋಕಸಭಾ ಸ್ಥಾನಗಳಲ್ಲಿ ಸಿಪಿಐ(ಎಂ) ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವುದೇ ಇಲ್ಲ ಎಂದು ಆರೋಪಿಸಿದರು. ಆಗ ಅಲ್ಲಿಯ ರಾಜ್ಯ ಸಮಿತಿಯಿಂದ ವಿವರ ಪಡೆದಾಗ ನನಗೊಂದು ಅಚ್ಚರಿ ಕಾದಿತ್ತು ಎಷ್ಟೊಂದು ಸಚಿವರು, ಶಾಸಕರು ದಲಿತ ಮೂಲದವರಾಗಿದ್ದರು! ಅದರಲ್ಲಿ ನನಗೆ ಪಕ್ಷಕ್ಕೆ ಸೇರಿದಂದಿನಿಂದಲೂ ಪರಿಚಿತರಾದ ಕಾಂತಿ ಬಿಸ್ವಾಸ್‌ರವರು ದಲಿತ ಮೂಲದವರು ಎಂದು ತಿಳಿಯಿತು" ಎಂದರು. ಪಾಲಿಟ್ ಬ್ಯೂರೋದಲ್ಲಿದ್ದು ಕಾಂತಿ ಬಿಸ್ವಾಸ್‌ರವರೊಡನೆ ಹತ್ತಿರದಿಂದ ವ್ಯವಹರಿಸಿದ ಯೆಚೂರಿಯವರಿಗೇ ತಿಳಿದಿರಲಿಲ್ಲ, ನನಗೆ ತಿಳಿಯದ್ದೇನೂ ಆಶ್ಚರ್ಯವಿಲ್ಲ ಎಂದುಕೊಂಡೆ.

ನಂತರ ಕೆಲವು ದಿನಗಳಲ್ಲಿ ಕಾಂ. ಕಾಂತಿ ಬಿಸ್ವಾಸ್ ರವರನ್ನು ಭೇಟಿಯಾದಾಗ ಈ ವಿಷಯ ಹೇಳಿದೆ. ಅವರು ಮನಸಾರೆ ನಕ್ಕರು. ತಮ್ಮ ರಾಜ್ಯದ ಉಳಿದ ಸಂಗಾತಿಗಳನ್ನೆಲ್ಲಾ ಕರೆದು ತಿಳಿಸಿ ಅವರೊಂದಿಗೆ ಕೂಡಿ ಮತ್ತೊಮ್ಮೆ ನಕ್ಕರು. ಆಗ ಅವರಿಂದ ಮತ್ತೊಂದು ಸಂಗತಿ ತಿಳಿಯಿತು. ವಿಧಾನಸಭೆ, ಲೋಕ ಸಭೆಯ ಮೀಸಲು ಸ್ಥಾನಗಳಲ್ಲಿ ಶೇ. 90 ರಷ್ಟು ಸ್ಥಾನವನ್ನು ಸಿಪಿಐ(ಎಂ) ಗೆಲ್ಲುವುದಲ್ಲದೆ ಸುಮಾರು 10 ಸಾಮಾನ್ಯ ಸ್ಥಾನಗಳಿಂದಲೂ ದಲಿತ ಮೂಲದವರು ಸಿಪಿಐ(ಎಂ) ಅಭ್ಯರ್ಥಿಗಳಾಗಿ ಬೇರೆ ಪಕ್ಷಗಳ ಮೇಲು ಜಾತಿಯ ಅಭ್ಯರ್ಥಿಗಳೊಂದಿಗೆ ಹಣಾಹಣಿ ಸ್ಪರ್ಧೆಯಲ್ಲಿ ಗೆದ್ದು ಬರುತ್ತಾರೆ. ಹಾಗೆ ಗೆದ್ದವರಲ್ಲಿ ಕಾಂತಿ ಬಿಸ್ವಾಸ್‌ರವರೂ ಒಬ್ಬರು. ಇದು ದೇಶದಲ್ಲಿ ಎಡ ಶಕ್ತಿಗಳು ಪ್ರಬಲವಾಗಿರದ ಬೇರೆ ಯಾವ ರಾಜ್ಯದಲ್ಲಿಯೂ ಊಹಿಸಲಾಗದ ಮಾತು ಎಂಬುದು.

ನಂತರ ಕಮ್ಯುನಿಸ್ಟ್‌ರಾದ ನಮಗೆ ನಮ್ಮ ನಮ್ಮ ಜಾತಿಗಳು ಹಲವು ವರ್ಷಗಳ ಕಾಲ, ಕೆಲವೊಮ್ಮೆ ದಶಕಗಳ ಕಾಲ ಏಕೆ ತಿಳಿಯುವುದಿಲ್ಲ ಎಂಬ ಪ್ರಶ್ನೆ ನನ್ನನ್ನು ಕಾಡಿತು. ಇದಕ್ಕೆ ಪರಿಹಾರವಾಗಿ ನನಗೆ ಹೊಳೆದದ್ದೆಂದರೆ ನಮ್ಮ ಯಾವ ನಡವಳಿಕೆಯಲ್ಲಿಯೂ ಜಾತಿ ವ್ಯಕ್ತವಾಗುವುದೇ ಇಲ್ಲ. ಊಟ, ವ್ಯವಹಾರ ವಿರಲಿ ಮಾತಿನಲ್ಲಿಯೂ ಸ್ವ ಜಾತಿಯವರನ್ನು, ಸ್ವ ಜಾತಿಯ ರಾಜಕೀಯ ನಾಯಕರನ್ನು ಹೊಗಳುವುದು, ವಹಿಸಿ ಕೊಂಡು ಮಾತನಾಡುವುದು ಪರಜಾತಿ ಯವರನ್ನು ನಿಂದಿಸುವುದು, ಅವರು ಬೇರೆ ಎನ್ನುವಂತೆ ವರ್ತಿಸುವುದು ಜಾತಿಯ ಆಧಾರದಲ್ಲಿ ಗುಂಪು ಕೂಡುವುದು ಜಾತಿ ಭಾವನೆ ವ್ಯಕ್ತಗೊಳ್ಳು ವುದಿಲ್ಲವಾದ್ದರಿಂದ ಜಾತಿಯನ್ನು ಪರಸ್ಪರ ಊಹಿಸಲಾಗುವುದೇ ಇಲ್ಲ. ಸಾಮಾನ್ಯವಾಗಿ ಮತ್ತೊಬ್ಬರ ಜಾತಿ ಮೂಲ ನಮಗೆ ಗೊತ್ತಾಗುವ ಪ್ರಸಂಗವೆಂದರೆ ಅವರ ಅಥವ ಹತ್ತಿರದ ಸಂಬಂಧಿಗಳ ಮದುವೆಗೆ ಹೋದಾಗ, ಚುನಾವಣೆಗಳ ಸಂದರ್ಭದಲ್ಲಿ ಅಭ್ಯರ್ಥಿಯನ್ನು ಆರಿಸುವಾ ಗಲೂ ಕೂಡ ಎಷ್ಟೊ ಬಾರಿ ನಮಗೆ ತಿಳಿಯು ವುದು ಇವರು ಮೀಸಲು ಕ್ಷೇತ್ರದಲ್ಲಿ ನಿಲ್ಲಿಸಬಹುದಾದವರು, ಇವರು ಅಲ್ಲ ಎಂದು ಮಾತ್ರ.

ಇಂತಹ ವಾತಾವರಣವಿರುವ ಪಕ್ಷದ ಬಗ್ಗೆ ಜಾತಿವಾದೀ ಆರೋಪಗಳು, ಬ್ರಾಹಣರೆನ್ನುವ ಆರೋಪಗಳು ಬರುವುದು ಹಳದಿ ಗಾಜಿನ ಮೂಲಕ ಪ್ರಪಂಚವನ್ನು ನೋಡಿದಾಗ ಪ್ರಪಂಚವೆಲ್ಲವೂ ಹಳದಿಯಂತೆ ಕಾಣುವ ನಮ್ಮ ಸಮಾಜದ ವರ್ತನೆಯ ಪ್ರತಿಫಲವಾಗಿ ಮಾತ್ರ.

- ಜಿ.ಎನ್.ಎನ್

ನಿಮ್ಮ ಪತ್ರ

"ಒಂದೇ ಉಸಿರಿನಲ್ಲಿ ಓದಿಮುಗಿಸಿದೆ"

ಇತ್ತೀಚೆಗೆ ಮೊದಲ ಬಾರಿಗೆ ಐಕ್ಯರಂಗವನ್ನು ನಾನು ಒಂದೇ ಉಸಿರಿನಲ್ಲಿ ಒಂದು ಗಂಟೆಕಾಲ ಓದಿಮುಗಿಸಿದೆ. ಉಲ್ಲೇಖನಗಳು, ಸಂಪಾದಕೀಯ, ಸುದ್ದಿ ಸಮಾಚಾರಗಳು, ಆಸಕ್ತಿದಾಯಕವಾಗಿದ್ದುದರಿಂದ, ಯಾವುದನ್ನು ಮೊದಲು ಓದುವುದೆಂದು ತಿಳಿಯದೆ, ಜ್ಯೋತಿ ಬಸು ಅವರ ಜೀವನ ಚರಿತ್ರೆಯಿಂದ ಓದಲು ಪ್ರಾರಂಭಿಸಿದೆ. ಈ ಧಾರಾವಾಹಿ ಪ್ರಾರಂಭಿಸಿದ್ದಕ್ಕೆ ಅಭಿನಂದನೆಗಳು. ಅವರ ಹುಟ್ಟಿದ ವರ್ಷ 1914 ಇರಬೇಕು. ತಪ್ಪಾಗಿ 1941 ಎಂದು ಅಚ್ಚಾಗಿದೆ. ಆದರೆ, ಅವರು ನಿಜಕ್ಕೂ 50-60 ವರ್ಷದ ಉತ್ಸಾಹಿಯಾಗಿ ಕಾಣುತ್ತಾರೆ.

ನಮ್ಮ ಶಿಕ್ಷಣದ ದುರವಸ್ಥೆಯ ಕುರಿತಾದ ಲೇಖನಗಳು ಸಮಯೋಚಿತವಾಗಿವೆ. ಸೆನೆಟ್ ಸಿಂಡಿಕೇಟ್, ವಿಧಾನ ಪರಿಷತ್, ಮುಂತಾದ ಚುನಾವಣೆಗಳಲ್ಲಿ ಭಾರೀ ಹಣ ಖರ್ಚುಮಾಡಿ ಲಕ್ಷಗಟ್ಟಲೆಗಳಿಸುವ ದಂಧೆ ನಡೆಸುವ ಖದೀಮರು ಲಕ್ಷ್ಮಿ ಅವರ ಅನುಭವಗಳಿಂದಲಾದರೂ ಪಾಠಕಲಿಯಬೇಕು. ಇಂಡೋನೇಶಿಯಾ ಚುನಾವಣೆಗಳ ಕುರಿತು ವಿಶೇಷ ಲೇಖನ ಬಹಳ ಮಹತ್ವದ್ದಾಗಿದೆ.

ಕ್ರೀಡಾ ಅಂಕಣ ವಿಶ್ವಕಪ್ ಕ್ರಿಕೆಟ್ ನಿಂದಲೇ ಪ್ರಾರಂಭವಾಗಿದೆ, ಸ್ವಾಗತ. ಆದರೆ ಈ ಕ್ರಿಕೆಟ್ ಆಟಗಳ ಹಿಂದೆ ಬಹುರಾಷ್ಟ್ರೀಯ ಕಂಪನಿಗಳಾದ ಪೆಪ್ಸಿ, ಕೋಕೋ ಕೋಲಾ, ವಿಲ್ಸ್, ಭಾರಿ ಸಂಪನ್ಮೂಲಗಳನ್ನು ಪಾನೀಯಗಳ ಹಾಗೂ ಸಿಗರೇಟುಗಳ ಜಾಹೀರಾತುಗಳಿಗೆ ಖರ್ಚುಮಾಡುವುದು ನಮ್ಮ ಆಟಗಾರರೂ ಸೇರಿದಂತೆ ಕ್ರಿಕೆಟ್‌ನವರು ವೈಯಕ್ತಿಕವಾಗಿಯೂ ಈ ಜಾಹಿರಾತುಗಳಲ್ಲಿ ಭಾಗವಹಿಸಿ ಕೋಟಿಗಟ್ಟಲೆ ಹಣ ಗಳಿಸುವರು. ಆಟಗಳ ಸೋಲು ಗೆಲುವುಗಳ ಕುರಿತು ದೇಶ ವಿದೇಶಗಳಲ್ಲಿ ಸಟ್ಟಾ-ಹಣದ ಆಟಗಳನ್ನು ನಡೆಸಿ ಆಟಗಳಿಗೆ ಮೊದಲು ಆಟಗಾರರಿಗೆ ಲಂಚ ಕೊಡಲಾಗುತ್ತಿದೆ. ಇತರ ಆಟಗಳಿಗೆ ಶಾಲೆ-ಕಾಲೇಜುಗಳಲ್ಲಿ ಪ್ರೋತ್ಸಾಹ ನೀಡಲಾಗುತ್ತಿಲ್ಲ. ಇವುಗಳ ಕುರಿತು ಐಕ್ಯರಂಗದಲ್ಲಿ ವಿಮರ್ಶಾತ್ಮಕ ಲೇಖನಗಳು ಬರಬೇಕೆಂದು ನಿರೀಕ್ಷಿಸುತ್ತೇನೆ.

ಸಿ.ಆರ್. ಭಟ್.
ಧಾರವಾಡ

ಕಾರ್ಗಿಲ್ ಪರಿಸ್ಥಿತಿ: ಕಗ್ಗತ್ತಲಿನಲ್ಲಿ ಜನರನ್ನಿಡಲು ಸರ್ಕಾರದ ಯತ್ನ

ಕಾರ್ಗಿಲ್‌ನಲ್ಲಿ ಪರಿಸ್ಥಿತಿತೀವ್ರಗೊಳ್ಳುತ್ತಿದೆ. ಅತಿಕ್ರಮಣಕೋರರನ್ನು ನಿಯಂತ್ರಣ ರೇಖೆಯಾಚೆಗೆ ಹೊರದಬ್ಬಲು ಭಾರತೀಯ ಸೈನಿಕರು ವಿರಾವೇಶದಿಂದ ಹೋರಾಡುತ್ತಿದ್ದಾರೆ. ಈ ಯುದ್ಧದಲ್ಲಿ ಪ್ರಾಣ ಕಳೆದುಕೊಂಡಿರುವ ಭಾರತದ ಸೈನಿಕರ ಶವಗಳು ಹುಟ್ಟೂರು ತಲುಪುತ್ತಿವೆ. ತಮ್ಮ ಕರುಳಬಳ್ಳಿಯನ್ನು ಕಳೆದುಕೊಂಡ ತಂದೆ-ತಾಯಂದರೂ, ಇನ್ನಿಲ್ಲವಾದ ಜೀವನ ಸಂಗಾತಿಯೆದುರು ರೋಧಿಸುವ ಪತ್ನಿಯರು, ಮಕ್ಕಳು, ಬಂಧುಗಳ ಆಕ್ರಂದನ ಹೇಳಲಾಗದ್ದು. ಇನ್ನೊಂದೆಡೆ ಸೆರೆ ಸಿಕ್ಕವರನ್ನು, ಮಡಿದ ಯೋಧರನ್ನು ಗೌರವಯುತವಾಗಿ ಹಿಂತಿರುಗಿಸಬೇಕೆಂಬ ಜಿನೇವಾ ನಿರ್ಣಯವನ್ನು ಧಿಕ್ಕರಿಸಿ ದೇಹಗಳನ್ನು ವಿಕೃತಗೊಳಿಸಿ ಭಾರತಕ್ಕೆ ವಾಪಾಸು ಕಳಿಸಲಾಗುತ್ತಿದೆ ಎಂಬ ವರದಿಗಳು ಬರುತ್ತಿವೆ. ದೇಶದ ಜನತೆಯಲ್ಲಿ ರೋಷ ಉಕ್ಕಿಸುತ್ತಿವೆ.

ಕಾರ್ಗಿಲ್‌ನ್ನು ದಾಟಿ ಮುಂದೆ ನುಗ್ಗಿದ್ದ ಅತಿಕ್ರಮಣಕೋರರನ್ನು ಭಾರತೀಯ ಸೈನ್ಯ ಹಿಂದಕ್ಕೆ ತಳ್ಳುತ್ತಿದೆ. ಕೆಲವು ಆಕ್ರಮಿತ ಪ್ರದೇಶಗಳನ್ನು ತೆರವು ಮಾಡಿಸಲಾಗಿದೆ. ಓಡಿಹೋದ ಅಥವಾ ಪರ್ವತದ ಮೇಲೆ ನೆಲೆ ನಿಂತಿರುವ ಅತಿಕ್ರಮಣಕೋರರನ್ನು ಓಡಿಸಬೇಕಿದೆ. ಇದು ಅತ್ಯಂತ ನಿರ್ಣಾಯಕವಾದ ಹಂತದ ಹೋರಾಟ. ಅತಿಕ್ರಮಣಕೋರರು ಅಡಗಿರುವುದು ಅತ್ಯಂತ ಎತ್ತರದ ಪರ್ವತದ ತುದಿಯಲ್ಲಿ ಅಂದರೆ ನೆಲದಿಂದ 18 ಸಾವಿರ ಅಡಿಗಳ ಎತ್ತರದಲ್ಲಿ. ಅವರು ಸುಸಜ್ಜಿತ ಸಿಮೆಂಟ್‌ನ ರಕ್ಷಣಕೋಟೆಗಳ ಮರೆಯಿಂದ ಧಾಳಿ ನಡೆಸುತ್ತಿದ್ದಾರೆ. ಪಾಕಿಸ್ತಾನದ ಕಡೆಯಿಂದ ನಿರಂತರವಾದ ರಕ್ಷಣಾ ಸಾಮಗ್ರಿ, ಸಂಪರ್ಕಗಳಿವೆ. ಕಾರ್ಗಿಲ್ ಪ್ರದೇಶದ ಬೆಟ್ಟಗಳೇ ಅತಿ ದುರ್ಗಮವಾಗಿವೆ. ಈಗ ನಮ್ಮ ನೆಲದಿಂದ ಮುಗಿಲಿನತ್ತ ಮುನ್ನುಗ್ಗಬೇಕಾದ ಹೋರಾಟ, ಇಂತಹ ಭೀಕರ ಸ್ಥಿತಿಯಲ್ಲೂ ಭಾರತೀಯ ಸೈನಿಕರು ಕೆಚ್ಚೆದೆಯಿಂದ ಹೋರಾಡುತ್ತಿದ್ದಾರೆ. ಹೀಗಿರುವಾಗ ಅತಿಕ್ರಮಣಕೋರರು ತಪ್ಪಿಸಿಕೊಳ್ಳಲು ಸುರಕ್ಷಿತ ಜಾಗ ಮಾಡಿಕೊಡಲಾಗುವುದು ಎಂಬ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್ ರ ಹೇಳಿಕೆಯ ಹಿಂದಿನ ಉದ್ದೇಶವಾದರೂ ಏನು? ಹೋರಾಡುತ್ತಿರುವ ಸೈನಿಕರಿಗೆ ಎಲ್ಲಾ ಬೆಂಬಲ, ಪ್ರೋತ್ಸಾಹ ನೀಡಬೇಕಲ್ಲದೆ ನಿರಾಶಭಾವ ಸೃಷ್ಟಿಸುವುದಲ್ಲ.



ಡ್ರಾಸ್ ಮತ್ತು ಕಾರ್ಗಿಲ್‌ನಲ್ಲಿ ದೇಶದ ಗಡಿ ರಕ್ಷಣೆಗೆ ಹೋರಾಡಿ ಮಡಿದ ವೀರಯೋಧರಲ್ಲಿ ಇಬ್ಬರ ಶವಗಳು ಕರ್ನಾಟಕವನ್ನು ತಲುಪಿವೆ. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಎಸ್.ಕೆ.ಮೇದಪ್ಪ (ಸುಬೇದಾರ್ ರ್‍ಯಾಂಕ್) ಹಾಗೂ ವಿಜಾಪುರ ಜಿಲ್ಲೆಯ ಶಿವಬಸಯ್ಯ ಕುಲಕರ್ಣಿ ಇನ್ನೊಬ್ಬರು. ಇಬ್ಬರ ಶವಗಳು ಹುಟ್ಟೂರಿಗೆ ಮರಳುತ್ತಿದ್ದಂತೆ ಜನರಲ್ಲಿ ದುಃಖ ತುಂಬಿಬಂತು ಹಾಗೂ ಅವರ ತ್ಯಾಗ, ಧೀರತೆಗಳನ್ನು ಸ್ಮರಿಸಿದರು. ಮಡಿದ ಯೋಧರಿಗೆ ಸರ್ಕಾರಿ ಮರ್ಯಾದೆಗಳೊಂದಿಗೆ ಶವಸಂಸ್ಕಾರ ನಡೆಸಲಾಯಿತು. ಮತ್ತು ಅವರ ಕುಟುಂಬಗಳಿಗೆ ಸರಕಾರದಿಂದ ಒಂದು ಲಕ್ಷ ರೂ. ಧನ ನೀಡಿಕೆ ಘೋಷಿಸಿದೆ. ಯೋಧರ ಅಗಲಿಕೆಯ ದುಃಖದಲ್ಲಿ ಭಾಗಿಯಾಗಿರುವ ಕೊಡಗು ಜಿಲ್ಲೆಯ ಸಿಪಿಐ(ಎಂ) ಪಕ್ಷವು ತಲಾ ಕುಟುಂಬಗಳಿಗೆ 5 ಲಕ್ಷ ಹಾಗೂ ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗ ಕೊಡಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಕೇರಳದ ಎಲ್‌ಡಿಎಫ್ ಸರ್ಕಾರ 5 ಲಕ್ಷವನ್ನು, ಉದ್ಯೋಗ ನೀಡಲು ನಿರ್ಧರಿಸಿದೆ ಎಂಬುದನ್ನು ಇಲ್ಲಿ ಗಮನಿಸಬಹುದು.



ಶಿವಬಸಯ್ಯ ಕುಲಕರ್ಣಿ

ಇದೀಗ ಮಾತುಕತೆಗಾಗಿ ಭಾರತ - ಪಾಕಿಸ್ತಾನಗಳು ಸೇರುತ್ತಿವೆ. ಈಗಿನ ಚರ್ಚೆ ಗಡಿನಿಯಂತ್ರಣ ರೇಖೆಗೆ ಹಾಲಿ ನುಗ್ಗಿದ ಅತಿಕ್ರಮಣಕೋರರ ಪ್ರಶ್ನೆಗೆ ಮಾತ್ರ ಸೀಮಿತ ಎಂದು ಭಾರತ ಪ್ರಕಟಿಸಿದೆ. ನೆರೆಹೊರೆಯ ದೇಶಗಳೊಂದಿಗೆ ಆದರಲ್ಲಿಯೂ ಗಡಿ ವಿವಾದಗಳ ಬಗ್ಗೆ ಮಾತುಕತೆಯೊಂದೇ ಪರಿಹಾರ ಮಾರ್ಗ ನಿಜ. ಆದರೆ ಈ ಸಂದರ್ಭದಲ್ಲೇ ಕಾಶ್ಮೀರದ ಪ್ರಶ್ನೆಯನ್ನು ಪಾಕಿಸ್ತಾನ ಎತ್ತುವ ಸಂಭವವೂ ಇದೆ. ಮೂರನೆಯವರ ಮಧ್ಯಪ್ರವೇಶ ಅಗತ್ಯವೆಂದು ಪಾಕಿಸ್ತಾನ ಪ್ರತಿಪಾದಿಸುತ್ತಿದೆ. ಇದರ ಸೂತ್ರಧಾರಿಯಾಗಿ ಅಂತಹ ಪಾತ್ರವಹಿಸಲು ಅಮೇರಿಕಾ ಹೊಂಚು ಹಾಕಿ ಕಾಯುತ್ತಿದೆ. ಭಾರತ ಸ್ವಾತಂತ್ರ್ಯ ಗಳಿಸಿದಂದಿನಿಂದಲೂ ಕಾಶ್ಮೀರದ ಬಗ್ಗೆ ಅಮೇರಿಕಾ, ಪಾಕಿಸ್ತಾನಗಳು ಸತತವಾಗಿ ಭಾರತದ ವಿರುದ್ಧ ಕೆಲಸ ನಿರ್ವಹಿಸುತ್ತಲೇ ಬಂದಿವೆ. ಇಬ್ಬರದೂ ವಿಭಿನ್ನ ಹಿತಾಸಕ್ತಿಗಳು. ಕಾಶ್ಮೀರ ಪೂರ್ತಿಯಾಗಿ ತನ್ನ ದೇಶದೊಳಕ್ಕೆ ಸೇರಲೇಬೇಕೆಂದು ಪಾಕಿಸ್ತಾನ ಬಯಸುತ್ತಿದ್ದರೆ, ಕಾಶ್ಮೀರ ಸ್ವತಂತ್ರವಾಗಿದ್ದು, ತನ್ನ ಅಧೀನದಲ್ಲಿ ಮಧ್ಯ ಏಶಿಯಾದ ಇಡೀ ಪ್ರದೇಶದಲ್ಲಿ ತನ್ನ ನೀಚ ಕಾರಾಸ್ಥಾನಕ್ಕೆ ನೆಲೆಯಾಗಿರಬೇಕೆಂದು ಬಯಸುತ್ತಿದೆ. ಈ ಕಾರಣಗಳಿಂದಲೇ ಜಮ್ಮು-ಕಾಶ್ಮೀರ, ಪಂಜಾಬ್‌ನ ಪ್ರತ್ಯೇಕತಾವಾದೀ ಉಗ್ರಗಾಮಿಗಳಿಗೆ ಎಲ್ಲಾ ರೀತಿಯ ತರಬೇತಿ, ನೆರವು ನೀಡಿದ್ದು, ಭಾರತವನ್ನು ಛಿದ್ರಗೊಳಿಸಬಯಸಿದ್ದು.

ಇಂತಹ ಅನೇಕ ದುರ್ಭರ ಸ್ಥಿತಿಗಳನ್ನು ಭಾರತ ಎದುರಿಸುತ್ತಾ ಬಂದಿದೆ. ಹಿಂದೆಲ್ಲಾ ಅಮೆರಿಕಾ, ಪಾಕಿಸ್ತಾನಗಳಿಂದ ಗಂಭೀರ ಬೆದರಿಕೆ ಒದಗಿದಾಗಲೆಲ್ಲಾ ಸೋವಿಯತ್ ರಶಿಯಾ ಭಾರತಕ್ಕೆ ಪೂರ್ಣ ಬೆಂಗಾವಲಾಗಿ ನಿಂತಿದೆ, ಎದುರಿಸಿದೆ. ಆದರೆ ಈಗ ಅಂತಹ ನೆಚ್ಚಿನ ಗೆಳೆಯನೆಲ್ಲಿ? ಅಮೆರಿಕಾವನ್ನು ಪ್ರತಿರೋಧಿಸುವ ಶಕ್ತಿ ಇಲ್ಲದಿರುವುದೂ ಭಾರತಕ್ಕೆ ಒಂದು ಗಂಭೀರ ಸವಾಲಿನ ಸಂದರ್ಭ.

ಸಿಮ್ಲಾ ಒಪ್ಪಂದದಂತೆ ಉಭಯ ಪಕ್ಷಗಳು ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥ ಪಡಿಸಿಕೊಳ್ಳುವುದಾಗಿ ನಿರ್ಧರಿಸಿವೆ. ಅಂದರೆ ಮೂರನೇ ಪಕ್ಷದ ಮಧ್ಯವರ್ತಿತನ ಇಲ್ಲದಿರುವುದು, ನಿಯಂತ್ರಣರೇಖೆಯ ಬಗ್ಗೆ ಪರಸ್ಪರ ಗೌರವ ಮತ್ತು ಅದನ್ನು ಅಧೀರಗೊಳಿಸದಿರುವುದು ಒಪ್ಪಂದದ ಮುಖ್ಯ ಅಂಶಗಳು. ಹಿಂದೆ ಜುಲ್ಫಿಕರ್ ಅಲಿ ಭುಟ್ಟೋ ಪ್ರಧಾನಿಯಾಗಿದ್ದಾಗ ನಿಯಂತ್ರಣ ರೇಖೆಯನ್ನು ಕಾಶ್ಮೀರವನ್ನು ವಿಭಜಿಸುವ ವಿಭಜನಾ ರೇಖೆಯೆಂದು ಒಪ್ಪಿದ್ದರು. ಆದರೆ 1971 ರ ಯುದ್ಧದ ನಂತರ ಜನರಲ್ಲಿ ಭಾವನೆಗಳು ಭಿನ್ನವಾಗಿದ್ದರಿಂದ ಕೂಡಲೇ ಅದನ್ನು ಜಾರಿಗೊಳಿಸುವ ಸ್ಥಿತಿ ಇಲ್ಲವೆಂದಿದ್ದರು. ಆದರೆ ಅವರನ್ನು ಕಿತ್ತೆಸೆದು ಮಿಲಿಟರಿ ದಂಗೆ ಮೂಲಕ ಜಿಯಾ-ಉಲ್-ಹಕ್ ಅಧಿಕಾರಕ್ಕೆ ಬಂದುದು ಪರಿಸ್ಥಿತಿ ಇನ್ನೊಂದು ದಿಕ್ಕಿಗೆ ಸಾಗುವಂತಾಯಿತು. ಅಮೆರಿಕಾ ಈ ಬಗ್ಗೆ ಒಂದು ಇತ್ಯರ್ಥಕ್ಕೆ ಬರದಿರುವಂತೆ ನೋಡಿಕೊಂಡಿತು. ಎರಡು ಬೆಕ್ಕುಗಳ ನಡುವೆ ಜಗಳವಿದ್ದರೆ ತಾನೇ ಮಂಗನಿಗೆ ಬೆಣ್ಣೆ ತಿನ್ನುವ ಲಾಭ!

ಕಾರ್ಗಿಲ್ ವಿಭಾಗದಲ್ಲಿ ಸೃಷ್ಟಿಸಲಾಗಿರುವ ಪರಿಸ್ಥಿತಿಯು ಕಾಶ್ಮೀರವು ಸದಾ ಕುದಿಯುತ್ತಾ ಇರಬೇಕೆಂಬ ಪಾಕಿಸ್ತಾನದ ತಂತ್ರದ ಭಾಗವಾಗಿದೆ. ಆದರೆ ಪಾಕಿಸ್ತಾನದಲ್ಲಿ ನವಾಜ್ ಶರೀಫರ ಜೊತೆಗಿನ ಭಾಗೀದಾರರು ಭಿನ್ನ ನಿಲುವನ್ನು ತಳೆದಿದ್ದಾರೆ. ಅವಾಮಿ ನ್ಯಾಷನಲ್ ಪಾರ್ಟಿಯ ಮುಖಂಡ ಖಾನ್ ಅಬ್ದುಲ್ ವಲೀ ಖಾನ್ ಸಮಿಶ್ರ ರಂಗದಿಂದ ಹೊರ ಬಂದಿದ್ದಾರೆ. ಮಾಜಿ ಕ್ರಿಕೆಟ್ ಪಟು ಇಮ್ರಾನ್ ಖಾನ್ ಅವರು ಧೈರ್ಯದಿಂದ ಪಾಕಿಸ್ತಾನದ ಕ್ರಮಗಳನ್ನು ಟೀಕಿಸಿದ್ದು, ಭಾರತ-ಪಾಕ್ ಸಂಬಂಧ ವೃದ್ಧಿಗೆ ಇದು ಮಾರಕ ಎಂದು ಬಹಿರಂಗವಾಗಿ ಟೀಕಿಸಿದ್ದಾರೆ.

ಕಾರ್ಗಿಲ್‌ನಲ್ಲಿ ಉದ್ಭವಿಸಿರುವ ಸಮಸ್ಯೆ ರಾಷ್ಟ್ರೀಯ ಪ್ರಶ್ನೆಯಾಗಿದೆ. ದೇಶದ ಎಲ್ಲರಿಗೂ ಸಂಬಂಧಿಸಿದ್ದು ಮತ್ತು ಗಂಭೀರವಾದದ್ದು. ಆದರೆ ವಾಜಪೇಯಿ ಸರಕಾರ ಇದನ್ನು ಎಂದಿನ ಸರ್ಕಾರದ ಕೆಲಸ ಎಂಬಂತೆ ನಡೆದುಕೊಳ್ಳುತ್ತಿದೆ. ಇಡೀ ದೇಶದ ಜನತೆಯ ಹಾಗೂ ಮುಖ್ಯವಾಗಿ ಎಲ್ಲಾ ರಾಜಕೀಯ ಶಕ್ತಿಗಳ ಪೂರ್ಣ ವಿಶ್ವಾಸದೊಂದಿಗೆ ಕೆಲಸ ನಿರ್ವಹಿಸಬೇಕು. ಇದು ಅತ್ಯಗತ್ಯ. ಆದರ ಬಿಜೆಪಿ ತನ್ನ ಪಕ್ಷದ ಕೆಲಸವೆಂದು ಭಾವಿಸಿದೆ. ದೇಶದ ಜನತೆಯನ್ನು ಕತ್ತಲಲ್ಲಿ ಇಡಲಾಗಿದೆ.

ಕಳೆದ ಜನವರಿಯಿಂದಲೇ ಅತಿಕ್ರಮಣಕೋರರು ನಿಯಂತ್ರಣ ರೇಖೆ ದಾಟಿ ನುಗ್ಗುತ್ತಿದ್ದರೂ ಏನೂ ಮಾಡದೇ ಕೈಕಟ್ಟಿ ಕುಳಿತ ವಾಜಪೇಯಿ ಸರಕಾರ, ರಕ್ಷಣಾ ಸಚಿವರ ನಿರ್ಲಕ್ಷ್ಯ(?) ಪ್ರಶ್ನಾರ್ಹ ಮಾತ್ರವಲ್ಲ ಗಂಡಾಂತರಕಾರಿಯಾದದ್ದು. ಬೆಳಗಾದರೆ ವೀರಾವೇಶದಲ್ಲಿ ಮಾತನಾಡುವ ಇವರು ದೇಶದ ಗಡಿಗಳನ್ನು, ಜನತೆಯನ್ನು ರಕ್ಷಿಸಬಲ್ಲರೇ? ಕಾರ್ಗಿಲು ಪರಿಸ್ಥಿತಿ ಇಷ್ಟೊಂದು ಗಂಭೀರ ಪರಿಣಾಮಗಳನ್ನು ಬೀರುವುದಾಗಿದ್ದು ಇಡೀ ದೇಶದ ಜನತೆಯನ್ನು, ರಾಜಕೀಯ ಪಕ್ಷ-ಶಕ್ತಿಗಳನ್ನು ವಿಶ್ವಾಸ ತೆಗೆದುಕೊಳ್ಳಬೇಕು.

ಇನ್ನಷ್ಟು ವಿಳಂಬಿಸದಂತೆ ಲೋಕಸಭೆ ವಿಸರ್ಜನೆಯಾಗಿರುವುದರಿಂದ ರಾಜ್ಯಸಭೆಯನ್ನು ಕೂಡಲೇ ಕರೆದು ವಿವರವಾಗಿ ಚರ್ಚಿಸಿ ತೀರ್ಮಾನಕ್ಕೆ ಬರಬೇಕು. ಇದು ಸೂಕ್ತವಾದ ಪ್ರಜಾಸತ್ತಾತ್ಮಕ ಕ್ರಮ. ಆದರೆ ಈ ಬಗ್ಗೆ ಸರ್ಕಾರಕ್ಕೆ ಕಿಂಚಿತ್ತೂ ಕಾಳಜಿ ಇಲ್ಲ. ಪಾರ್ಲಿಮೆಂಟ್‌ನಲ್ಲಿ ತಮ್ಮ ಬಣ್ಣ ಬಯಲಾದೀತೆಂದು ಹೆದರಿಕೆಯೊ?

ಪುಟ 8 ಕ್ಕೆ

ಗೋವಾ ಚುನಾವಣೆಗಳಲ್ಲಿ ಮಣ್ಣು ಮುಕ್ಕಿದ ಬಿಜೆಪಿ: "ಸಹಾನು ಭೂತಿಯ ಅಲೆ" ಏಳಲೇ ಇಲ್ಲ!

ಇತ್ತೀಚಿನ ಗೋವಾ ವಿಧಾನ ಸಭಾ ಚುನಾವಣೆಗಳಲ್ಲಿ ಬಿಜೆಪಿಯ ಹಾರಾಟ, ಅಬ್ಬರ ಏನೂ ನಡೆದಿಲ್ಲ. ಗೋವಾದ ಜನತೆಯ ಬೆಂಬಲ ತಮಗೆ ಈ ಬಾರಿ ಹೆಚ್ಚುತ್ತದೆ, ತಾವು ಆಳುವ ಪಕ್ಷವಾಗುತ್ತೇವೆ ಎಂದು ಅವರು ಕನಸುಕಾಣುತ್ತಿದ್ದರು. ಎಐಎಡಿಎಂಕೆ ಬೆಂಬಲ ಹಿಂದಕ್ಕೆ ಪಡೆದ್ದದ್ದರಿಂದ ವಿಶ್ವಾಸ ಮತದಲ್ಲಿ ಸೋಲಿನ ನಂತರ ವಾಜಪೇಯಿಯವರ ಬಗ್ಗೆ ಸಹಾನೂಭೂತಿಯ ಅಲೆ ಎದ್ದುಬರುತ್ತದೆ ಎಂದು ಬಿಜೆಪಿ ನಂಬಿಕೊಂಡಿತ್ತು. ಇಂತಹ ಅಲೆಯೆಂಬುದು ಇಲ್ಲವೇ ಇಲ್ಲ, ಜನ ಆಳುವ ಪಕ್ಷವಾಗಿ ಅದರ 13 ತಿಂಗಳ ಆಳ್ವಿಕೆಯ ಆಧಾರದ ಮೇಲೆ ತೀರ್ಮಾನಕ್ಕೆ ಬಂದಿದ್ದಾರೆಂಬುದು ಗೋವಾ ಚುನಾವಣೆ ತೋರಿಸಿದೆ.

ಕಾರ್ಗಿಲ್ ಪ್ರಶ್ನೆಯ ರಾಜಕೀಯ ಲಾಭ ಪಡೆಯಲು, ಕುರುಡು ದೇಶಭಕ್ತಿಯನ್ನು, ಹುಸಿ ರಾಷ್ಟ್ರೀಯವಾದವನ್ನು ಉದ್ರೇಕಿಸುವ ಅದರ ಪ್ರಯತ್ನವೂ ಈಡೇರಲಿಲ್ಲ. ಮಾತ್ರವಲ್ಲ, ಬದಲಿಗೆ ಅದೇ ತಿರುಗುಬಾಣವಾಯಿತು.

1998 ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ಮಿತ್ರರು 40 ವಿಧಾನಸಭಾ ಕ್ಷೇತ್ರಗಳಲ್ಲಿ 30 ರಲ್ಲಿ ಮುಂದಿದ್ದರು. ಈಗ ಅದು ಹದಿನೈದು ತಿಂಗಳಲ್ಲಿ 14ಕ್ಕಿಳಿದಿದೆ. (ಬಿಜೆಪಿ 10, ಎಂಜಿಪಿ 4) ಬಿಜೆಪಿಯ ಮತಗಳಿಕೆಯೂ 32% ದಿಂದ 23% ಕ್ಕಿಳಿದಿದೆ. 1998ರಲ್ಲಿ ಅದು ಇದೇ ಎಂ.ಜಿ.ಪಿ.ಯ ಬೆನ್ನ ಮೇಲೇರಿ ಲಾಭ ಗಳಿಸಿತ್ತು. ಆದರೆ ಈ ಬಾರಿ ಎಂ.ಜಿ.ಪಿ.ಯನ್ನು ಛಿದ್ರಗೊಳಿಸಿ ವಿಧಾನಸಭಾ ಚುನಾವಣೆಗಳಲ್ಲಿ ಸ್ವತಂತ್ರವಾಗಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಸಾರಿತು. ಬಿಜೆಪಿ ಸದಾ ತನ್ನ ಮಿತ್ರರನ್ನು ಛಿದ್ರಗೊಳಿಸುವ ಪಕ್ಷ ಎಂಬುದು ಗೋವಾದಲ್ಲಿ ಮತ್ತೊಮ್ಮೆ ಸಾಬೀತಾಯಿತು. ಆದರೂ ಅದರ ಈಗಿನ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (NDA) ದ ಮಿತ್ರರು ಮುಳುಗಿದ ಮೇಲೆಯೇ ಪಾಠ ಕಲಿಯಲು ಕಟಿಬದ್ಧರಾಗಿರುವಂತೆ ಕಾಣುತ್ತದೆ.

ಇರಲಿ, ಗೋವಾದ ಜನತೆ ಇಡೀ ದೇಶದ ಜನತೆಯಂತೆ ಬಿಜೆಪಿಯ ವಿನಾಶಕಾರಿ ಕೆಲಸಗಳ, ಅದರ ಆಡಳಿತ ವೈಖರಿಯ ಮೌಲ್ಯಮಾಪನ ಮಾಡಿದ್ದಾರೆ. ಕಣ್ಣಿದ್ದವರಿಗೆಲ್ಲಾ ಈ ಸತ್ಯ ಕಾಣುತ್ತದೆ. ಭಾರತದ ಜನತೆ ಬಿಜೆಪಿಯ ಧೋರಣೆಗಳನ್ನಾಗಲೀ, ಅದರ ಆಡಳಿತ ವೈಖರಿಯನ್ನಾಗಲಿ ಒಪ್ಪುವುದಿಲ್ಲ ಎಂದು ಸ್ಪಷ್ಟವಾಗಿದೆ.

ಈ ಕಟುವಾಸ್ತವತೆಯನ್ನು ಅರಗಿಸಿಕೊಳ್ಳಲಾಗದ ಬಿಜೆಪಿ ಮುಖಂಡರು ತಮ್ಮ ಚುನಾವಣಾ ಸೋಲಿಗೆ ಒಂದು ದುಷ್ಟ ತರ್ಕ ಮುಂದೆ ಮಾಡುತ್ತಿದ್ದಾರೆ. ಗೋವಾದ ಮತದಾರರಲ್ಲಿ ಬಹುಮಂದಿ ಹಿಂದೂವೇತರರಾದ್ದರಿಂದ ಬಿಜೆಪಿ ಸೋತಿತು ಎನ್ನುತ್ತಿದ್ದಾರೆ. ಜನ ತಂತಮ್ಮ ಮತಧರ್ಮದ ಆಧಾರದಲ್ಲಿ ರಾಜಕೀಯದ ಆಯ್ಕೆ ಮಾಡುತ್ತಾರೆ ಎಂದು ಸೂಚಿಸುವ ಈ ದುಷ್ಟ ತರ್ಕ ಧಾರ್ಮಿಕ ಭಾವನೆಗಳನ್ನು ರಾಜಕೀಯ ಪ್ರಯೋಜನಕ್ಕಾಗಿ ದುರುಪಯೋಗಪಡಿಸಿಕೊಳ್ಳುವ ನಗ್ನ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಇದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದ ದೇಶದ ಕಾನೂನಿಗೆ ವಿರುದ್ಧವಾದ ತರ್ಕ. ಬಿಜೆಪಿಯ ಇಂತಹ ಪ್ರಯತ್ನಗಳನ್ನು ಸುಪ್ರೀಂಕೋರ್ಟ್ ಗಮನಕ್ಕೆ ತಗೊಳ್ಳಬೇಕು. ತಮ್ಮ ಕೆಲಸ, ಧೋರಣೆಗಳ ಆಧಾರದಲ್ಲಿ ಜನರ ಬೆಂಬಲ ಗಳಿಸಲು ವಿಫಲವಾದ ಆರ್.ಎಸ್.ಎಸ್. ನೇತೃತ್ವದ ಬಿಜೆಪಿ ಮತ್ತೆ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಹರಡಿಸುವ ತನ್ನ ಎಂದಿನ ವಿಷಮಯ ಅಪಪ್ರಚಾರಕ್ಕಿಳಿದಿದೆ. ತನ್ನ ರಾಜಕೀಯ ಉಳಿವಿಗೆ ಇದೇ ಏಕೈಕ ಆಧಾರ ಎಂದು ಕಂಡುಕೊಂಡಂತಿದೆ.



ಎಲೆಕ್ಟ್ರಾನಿಕ್ ಮತದಾನ ಯಂತ್ರಗಳನ್ನು ದೂಷಿಸುವಂತೆಯೂ ಇಲ್ಲ ಅವು ಯಾವುವೂ ವಿದೇಶಿಯಾಗಿರಲಿಲ್ಲ.

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿಯವರ ವ್ಯಂಗ್ಯ

ಕರ್ನಾಟಕ ರಾಜ್ಯದ ಗಮನ ಸೆಳೆಯುವಂತಹ ಪ್ರಶ್ನೆಯೊಂದು ಇತ್ತೀಚೆಗೆ ಬಳ್ಳಾರಿ ತಾಲೂಕಿನಲ್ಲಿ ಬೆಳೆದು ಬಂತು. ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಹಲವು ದಿನಗಳ ಕಾಲ ತಮ್ಮ ಶ್ರಮ ವಿನಿಯೋಗಿಸ ಬೇಕಾಯಿತು. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಕೃಷಿ ಮಂತ್ರಿಗಳು ಕಣ್ಣು ತೆರೆಯ ಬೇಕಾಯಿತು. ಬಳ್ಳಾರಿ ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರು ಸಮಸ್ಯೆಯ ಪರಿಹಾರಕ್ಕೆ ಕೆಲವು ದಿನ ತೊಡಗಬೇಕಾಗಿ ಬಂತು. ಸುಮ್ಮನೆ ಕುಳಿತಿದ್ದ ಮಾಜಿ ಮಂತ್ರಿ ಶ್ರೀಯುತ ಮುಂಡ್ಲೂರು ರಾಮಪ್ಪನವರು ಕೊನೆಗಾದರು ಎದ್ದು ಭಾಗವಹಿಸಲೇ ಬೇಕಾಯ್ತು, ಲೋಕಶಕ್ತಿಯ ಮುಖಂಡರು- ವಿಧಾನ ಪರಿಷತ್ ಸದಸ್ಯರು ಶ್ರೀ ಎನ್. ತಿಪ್ಪಣ್ಣನವರು; ಶಾಸಕರಾದ ಅಲ್ಲಂ ವೀರಭದ್ರಪ್ಪನವರು ತಲೆ ತೂರಿಸಬೇಕಾದ ಪ್ರಸಂಗ ಮೂಡಿಬಂತು.

ಕಳಪೆ ಬೀಜದ ಪ್ರಹಸನ

ಸೋಲುಂಡ ಕಾರ್ಗಿಲ್ ಕಂಪನಿ

ಯು.ಬಸವರಾಜು

ಕಳೆದ 5-6 ವರ್ಷಗಳಿಂದ ಬರಗಾಲ, ಅತಿವೃಷ್ಟಿ, ಕೃಷಿ ಸಾಮಾನಿನ ಕಳಪೆ ಕ್ರಿಮಿನಾಶಕಗಳ ಹಾವಳಿ; ಬೆಳೆಗಳ ಬೆಲೆ ಕುಸಿತ ಕೃಷಿ ಸಾಮಾನಿನ ತೀವ್ರ ಬೆಲೆ ಏರಿಕೆ ಬಳ್ಳಾರಿ ತಾಲೂಕಿನ ನೀರಾವರಿ ಪ್ರದೇಶದ ರೈತರನ್ನು ತತ್ತರಿಸುವಂತೆ ಮಾಡಿ ಸಾಲದ ಕೂಪದಲ್ಲಿ ನೂಕಿತ್ತು. ಏನಿಲ್ಲವೆಂದರೂ ಸರಾಸರಿ ಲಕ್ಷ ರೂಪಾಯಿಗೆ ಕಡಿಮೆಯಿಲ್ಲದ ಸಾಲದ ಹೊರೆ ರೈತರನ್ನು ಭಾಧಿಸುವಾಗಲೇ ಮತ್ತೊಮ್ಮೆ ಅತೀವೃಷ್ಟಿ ಮತ್ತು ಕಳಪೆ ಬೀಜ ಇವರ ಮೇಲೆ ನಗ್ನ ದಾಳಿ ಮಾಡಿತು. ತಾಲೂಕಿನ ಸಾವಿರಾರು ಎಕರೆ ಪ್ರದೇಶದಲ್ಲಿ ಬಿತ್ತನೆಯಾದ ಸಿ.71 ಜೋಳದ ಬೀಜ ಹಾಗೂ ಸವಿತಾ ಹತ್ತಿ ಬೀಜಗಳೆರಡೂ ಕೈಕೊಟ್ಟಿದ್ದರಿಂದ ಪ್ರತಿ ಎಕರೆಗೆ ಜೋಳದ ಬೆಳೆಗೆ ಪ್ರತಿ ಎಕರೆಗೆ ಕನಿಷ್ಠ 8 ಸಾವಿರ ರೂಪಾಯಿಯಷ್ಟು, ಹತ್ತಿ ಬೆಳೆಗೆ ಕನಿಷ್ಠ 10 ರಿಂದ 12 ಸಾವಿರ ರೂಪಾಯಿಗಳಷ್ಟು ಹಾಕಿದ ಹಣ ಹಾಗೂ ಶ್ರಮಗಳೆರಡೂ ಮಣ್ಣು ಪಾಲಾಗಿ ತಾಲೂಕಿನ ರೈತರಲ್ಲಿ ಮರಳಿ ಆತಂಕವನ್ನು ಉಂಟು ಮಾಡಿತು.

ಕಳೆದ ಹಲವು ವರ್ಷಗಳ ಸಾಲವನ್ನು ತೀರಿಸಿ ಋಣ ಮುಕ್ತರಾಗಿ ಹೊಸ ಬದುಕಿನೆಡೆಗೆ ಸಾಗಲು ಬಂಪರ್ ಬೆಳೆ ನೀರೀಕ್ಷೆಯಲ್ಲಿದ್ದ ರೈತನಿಗೆ ಇನ್ನಿಲ್ಲದ; ತಡೆಯಲಾಗದ ಆಶ್ಚರ್ಯ ವಾಗಿತ್ತು. ಜಿಲ್ಲಾ ಕೃಷಿಕ ಸಮಾಜ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘಗಳೆರಡರ ಮುತುವರ್ಜಿ ಹಾಗೂ ಮಧ್ಯ ಪ್ರವೇಶದಿಂದ ತಾಲೂಕಿನ ಜನತೆಗೆ ಕೊಂಚ ನೆಮ್ಮದಿ ಸಿಗುವಂತಾಯಿತು. ಜಗತ್ತಿನ ಶೇ. 25 ರಷ್ಟು ಮಾರುಕಟ್ಟೆಯ ಹಿಡಿತ ಹೊಂದಿರುವ ಬಹು ರಾಷ್ಟ್ರೀಯ ಕಾರ್ಗಿಲ್ ಕಂಪನಿ ಸೋಲೊಪ್ಪಿ ಮಣಿಯ ಬೇಕಾಯಿತು.

ಈಗ್ಗೆ ಸುಮಾರು 7 ತಿಂಗಳ ಹಿಂದೆಯೇ ಸೋಮ ಸಮುದ್ರ ಗ್ರಾಮದ ರೈತನೊಬ್ಬ ತನ್ನ ಹೊಲದಲ್ಲಿ ಬಿತ್ತಿದ ಸವಿತಾ ಹತ್ತಿ ಬೀಜ ಬೆಳೆಯಲು ಫಲನೀಡಲು ವಿಫಲವಾಗಿದ್ದು ಕಂಡು ತನಗೆ ಇದರಿಂದಾಗಿ ಎಕರೆಗೆ ಕನಿಷ್ಠ 10 ಸಾವಿರಕ್ಕಿಂತಲೂ ಹೆಚ್ಚಿನ ನಷ್ಟವಾಗಿದೆ ಯೆಂದು ತನಗೆ ನ್ಯಾಯ ದೊರಕಿಸಬೇಕೆಂದು ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷರಾದ ಶ್ರೀಯುತ ಎಂ. ಜಂಬುನಾಥ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷ, ಕೃಷಿಕ ಸಮಾಜದ ಉಪಾಧ್ಯಕ್ಷರಾದ ಕಾಂ|| ವಿ.ಎಸ್.ಎಸ್. ಶಿವಶಂಕರ್ ಅವರಲ್ಲಿಗೆ ದೂರಿದನು! ಅಂತಹದ್ದೇ ಬೀಜ ತಾಲೂಕಿನ ಹಲವೆಡೆ ವಿಫಲವಾದ ವರದಿಗಳು ಆಗಾಗ್ಗೆ ಕೇಳಿ ಬಂದಿದ್ದರಿಂದ ಕೃಷಿಕ ಸಮಾಜ ರೈತ ಸಂಘ ಜಾಗೃತಗೊಂಡು ಹೋರಾಟದ ಕಣಕ್ಕಿಳಿದವು! ತಾಲೂಕಿನ ಸಹಾಯಕ ಕೃಷಿ ಅಧಿಕಾರಿಗಳು ಹಾಗೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಮೇಲೆ ಒತ್ತಡ ಹೇರಿ ಕೃಷಿ ತಜ್ಞರೊಂದಿಗೆ ಭೂಮಿಗೆ ಭೇಟಿ ನೀಡಲು ಒತ್ತಾಯಿಸಿದವು.

ಬೀಜ ನೀಡಿದ ಸಿ.ಸಿ.ಐ. ಕಂಪೆನಿಯ ಅಧಿಕಾರಿಗಳು;- ಕೃಷಿ ತಜ್ಞರೆಂಬ ಮೇಧಾವಿಗಳು; ಕೃಷಿ ಇಲಾಖೆಯ ಅಧಿಕಾರಿಗಳು ರೈತ ಮುಖಂಡರ ಜೊತೆ ಸೇರಿ ವಿಫಲ ಬೆಳೆಯನ್ನು ಪರಿಶೀಲಿಸಿತು. ಹತ್ತಿಯ ಬೆಳೆಯ ಹೊಲದ ಬಹುಭಾಗದಲ್ಲಿ ಹಲವಾರು ಸಾಲುಗಳಲ್ಲಿ ಬೇರೆ, ಬೇರೆ ಪ್ರಮಾಣದಲ್ಲಿ ಸಸಿ ನಾಟಿತ್ತು, ಉದಾ:- ಒಂದೇ ಸಾಲಿನಲ್ಲಿ ಸಾಧಾರಣ ಒಂದೆರಡು ಮೀಟರ್ ಉದ್ದದಲ್ಲಿಯೇ ನಾಟಿಯಾದ ಹತ್ತಿ ಸಸಿಗಳಲ್ಲಿ ಕೆಲವು ಕೇವಲ 5 ಇಂಚು ಬೆಳೆದಿದ್ದರೆ ಮತ್ತೆ ಕೆಲವು 10-15 ಇಂಚು ಬೆಳೆದಿದ್ದವು. ಇನ್ನೂ ಹಲವು 20 ಇಂಚು ಬೆಳೆದಿದವು. ಹೀಗೆಯೇ ಭೂಮಿಯಲ್ಲಿ ಎಲ್ಲರಿಗೂ ಕಂಡಿತು.

ನೀಚತನ ಬಯಲಿಗೆ ಬಂತು

ಪರಿಶೀಲನೆ ಮುಗಿಸಿ ಕೃಷಿ ಇಲಾಖೆಯ ಕಛೇರಿಯಲ್ಲಿ ಸಭೆ ಸೇರುವಾಗ ರೈತ ಮುಖಂಡರಿಗೆ ನಷ್ಟ ಹೊಂದಿದ ರೈತನಿಗೆ ನಿರಾಸೆಕಾದಿತ್ತು. ಮೇಧಾವಿ ತಜ್ಞರು; ಸಿ.ಸಿ.ಐ ಕಂಪೆನಿ ಅಧಿಕಾರಿಗಳು ಕೃಷಿ ಅಧಿಕಾರಿಗಳು ಒಂದಾಗಿ ಬೆಳೆಯ ವಿಫಲತೆಗೆ ಭೂಮಿಯ ಗುಣ ಹಾಗೂ ವಾತಾವರಣ ಮತ್ತು ಸರಿಯಾದ ನಿರ್ವಹಣೆ ಇಲ್ಲದುದೇ ಕಾರಣವಾಗಿದ್ದು ಬೀಜದ್ದು ಏನೇನು ದೋಷವಿಲ್ಲವೆಂದು ಸರ್ಟಿಫಿಕೇಟ್ ನೀಡಿ ಸಾರಾ ಸಗಟಾಗಿ ತಿರಸ್ಕರಿಸಿತು.

ಪ್ರತಿಭಟಿಸಿದ ರೈತ ಮುಂದಾಳು ರಾಜ್ಯ ಸರ್ಕಾರಕ್ಕೆ ಮನವಿ ನೀಡಿ ವಿವರವನ್ನು ಪತ್ರಿಕೆಗಳಿಗೆ ಫೋಟೋ ಸಮೇತ ಬಹಿರಂಗ ಪಡಿಸಿ ರಾಜ್ಯ ಸರ್ಕಾರ ಮಧ್ಯೆ ಪ್ರವೇಶಿಸಿ ಕಳಪೆ ಬೀಜ ದಿಂದಾದ ನಷ್ಟಕ್ಕೆ ಪರಿಹಾರ ಕೊಡಿಸಲು ಮುಂದಾಗಬೇಕೆಂದು ಒತ್ತಾಯಿಸಿದರು; ಮುಂದಾಳುಗಳನ್ನು ಹೋರಾಟ ಕಣದಿಂದ ಹೊರಗಿಡಲು ಆಮಿಷ ಒಡ್ಡಲಾಯಿತು. ಆದರೆ ಪರಿಣಾಮ ಬೀರಲಿಲ್ಲ.

ಹೀಗೆ ಕಳಪೆ ಬೀಜ ಮಾರಾಟದ ಹಗರಣ ಪತ್ರಿಕೆಗಳ ಮೂಲಕ ರೈತ ಮುಖಂಡರ ಭಾಷಣಗಳ ಮೂಲಕ ಹಳ್ಳಿ-ಹಳ್ಳಿಗೆ ಬಿತ್ತರ ಗೊಂಡಿತು. ಬಿತ್ತರದ ನಡುವೆಯೇ ದೈತ್ಯ ಕಾರ್ಗಿಲ್ ಕಂಪೆನಿಯ ನೀಚ ತನವು ಬಯಲಿಗೆ ಬಂತು. ಬಳ್ಳಾರಿ ತಾಲೂಕು ಹಾಗೂ ನೆರೆಯ ಆಂದ್ರ ಪ್ರದೇಶದ ಗಡಿ ತಾಲೂಕಿನ ನೂರಾರು ರೈತಾಪಿ ಜನತೆ ಕಾರ್ಗಿಲ್ ಕಂಪೆನಿಯ ಸಿ.ಟಿ.ಐ ಜೋಳದ ಕಳಪೆ ಬೀಜದ ಕಾಲ್ತುಳಿತಕ್ಕೆ ಸಿಕ್ಕಿ ನಲುಗಿ ಹೋಗಿದ್ದರು. ಹೋರಾಟದ ಕಣ ಸೇರಲು ಅಳಿದುಳಿದ ಶಕ್ತಿಯನ್ನು ಕ್ರೋಢೀಕರಿಸಿ ಕೊಂಡು ಮುನ್ನುಗ್ಗಿ ಬಂತು.

ಪ್ರವಾಹವಾಗಿ ಬೆಳೆದ ಹೋರಾಟ

ಕಳಪೆ ಬೀಜ ಮಾರಾಟದ ವಿರುದ್ಧ ಹೋರಾಟ ಪ್ರವಾಹವಾಗಿ ಬೆಳೆಯಿತು! ದಿನ ಪತ್ರಿಕೆಗಳು ಹಲವು ದಿನಗಳ ಕಾಲ ಕಳಪೆ ಬೀಜದ ಹಿಂದಿನ ಕೊಳಕು ತನವನ್ನು ವರದಿಗೈದವು. ಕೃಷಿ ಇಲಾಖೆಯ ಬಳ್ಳಾರಿ ತಾಲೂಕಿನ ಹಾಗೂ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಮೇಲೆ ವ್ಯಾಪಕ ಒತ್ತಡವನ್ನು ಜನತೆ ಹೇರಿತು. ಪ್ರತಿದಿನ ನೂರಾರು ರೈತರು ಕೃಷಿ ಇಲಾಖೆಯ ಮುಂದೆ ಜಮಾಯಿಸಿ ತಮ್ಮ ಅಳಲಿಗೆ ಪರಿಹಾರವನ್ನು ಬೇಡುತ್ತಲೇ ಇದ್ದರು.

ಹೋರಾಟವು ಹೊಸ ಹೊಸ ಸ್ವರೂಪವನ್ನು ಪಡೆಯುತ್ತಾ ಸಾಗಿರುವಾಗ ಕಳಪೆ ಹತ್ತಿ ಬೀಜ ಮಾರಾಟ ಮಾಡಿದ ಮತ್ತೊಂದು ಕಂಪೆನಿಯು ಪ್ರತಿ ಎಕರೆಗೆ 6 ಸಾವಿರ ರೂಪಾಯಿ ನಂತೆ ನಷ್ಟ ಪರಿಹಾರ ಕೊಡಲು ಒಪ್ಪಿ ಹೋರಾಟ ನಿರತರಿಗೆ ಇಮ್ಮಡಿ ಉತ್ಸಾಹ ನೀಡಿತು. ಆದರೆ ಸಿ.ಸಿ.ಐ ಮಾತ್ರ ಪರಿಹಾರ ನೀಡಿದರೆ ತನ್ನ ಪ್ರತಿಷ್ಠೆಗೆ ಧಕ್ಕೆಯೆಂದು ಕೃಷಿ ತಜ್ಞರೆಂಬ ಭ್ರಷ್ಟರು ನೀಡಿದ ಸರ್ಟಿಫಿಕೇಟ್‌ಗೆ ಅಂಟಿಕೊಂಡು ಧಿಕ್ಕರಿಸಿತು. ನೂರಾರು ರೈತರು ಬಳಕೆದಾರರ ಜಿಲ್ಲಾ ವೇದಿಕೆಗೆ ದೂರು ನೀಡಬೇಕಾಗಿ ಬಂದಿತು.

ಪತ್ರಿಕೆಯಲ್ಲಿ ಪ್ರತಿನಿತ್ಯ ಬಿಸಿ-ಬಿಸಿಯಾಗಿ ಹರಡಿದ ಸುದ್ದಿಯಿಂದ ಹಾಗೂ ಚಳುವಳಿಯ ಒತ್ತಡದಿಂದ ಪಾರ್ಲಿಮೆಂಟ್ ಸದಸ್ಯರಾದ ಮಾನ್ಯ ಕೊಂಡಯ್ಯ ಕೆ.ಸಿ.ಯವರು ಕಾರ್ಗಿಲ್ ಕಂಪೆನಿಯ ಜೊತೆ ಮಾತನಾಡಿ ಪರಿಹಾರಕ್ಕೆ ಯತ್ನಿಸಲು ಮುಂದಾದರು.

ನುಣುಚಿಕೊಳ್ಳುವ ಪ್ರಯತ್ನ

ಅದೇ ಸಂದರ್ಭದಲ್ಲಿ ಪ್ರತಿಷ್ಠಿತ ಕಾರ್ಗಿಲ್ ಕಂಪೆನಿಯು ಕೃಷಿ ತಜ್ಞರೆಂಬ ಮೇಧಾವಿಗಳ ಬಾಯಿಗೆ ನೋಟುಗಳ ಕಂತೆಯನ್ನು ತುರುಕಿ ಅದು ಬೀಜದ ವಿಫಲತೆಯಲ್ಲವೆಂದು ಸರ್ಟಿಫಿಕೆಟ್ ಮಾಡಿಸಿಕೊಂಡಿತು. ಆದಾಗ್ಯೂ ಹೋರಾಟಕ್ಕೆ ಮಣಿದು-ಹಿಂಗಾರು ಬೆಳೆಗೆ ಬಿತ್ತ ಬೇಕಾದ ಬೀಜವನ್ನು ಮುಂಗಾರಿಗೆ ಬಿತ್ತಿದ್ದರಿಂದ ವಾತಾವರಣ ಕಾರಣದಿಂದ ಹೀಗಾಯಿತೆಂದು ನುಣುಚಿಕೊಳ್ಳಲು ಯತ್ನಿಸಿತು! ಇದೇ ಸಂದರ್ಭದಲ್ಲಿ ಕಂಪೆನಿಯನ್ನು ಜಿಲ್ಲೆಯಿಂದ ಹೊರ ಹಾಕುವಂತೆ ರೈತರಿಂದ ಅಧಿಕಾರಿಗಳ ಮೇಲೆ ಒತ್ತಡ ಬಂತು. ಕೊನೆಗೆ ಹಿಂಗಾರಿಗೆ ಮಾರಾಟ ಮಾಡ ಬೇಕಾದ ಮಾರಾಟಗಾರರು ಮುಂಗಾರಿಗೆ ಮಾರಾಟ ಮಾಡಿ ರೈತರಿಗೆ ತೊಂದರೆ ಉಂಟು ಮಾಡಿದ್ದರಿಂದ ಕಾರ್ಗಿಲ್ ಕಂಪೆನಿ ವಿಷಾಧಿಸಿ ಪ್ರತಿ ಎಕರೆಗೆ 500 ರಿಂದ 800 ರೂಪಾಯಿಗಳನ್ನು ಮಾರಾಟಗಾರರಿಂದ ಕೊಡಿಸುವುದಾಗಿ ರೈತರಿಗೆ ಗೋಸುಂಬೆ ಅನುಕಂಪ ತೋರಿಸಿತು.

ಹೋರಾಟ ಮತ್ತೊಂದು ಹಂತಕ್ಕೆ ಸಾಗುವುದೆಂದು ತಿಳಿದಾಗ ಜಿಲ್ಲಾಧಿಕಾರಿಗಳು ಮಧ್ಯೆ ಪ್ರವೇಶಿಸಿ ಹಲವು ಸುತ್ತಿನ ತ್ರಿಪಕ್ಷೀಯ ಮಾತುಕತೆಗೆ ಮುಂದಾದರು, ತಿಂಗಳು ಗಟ್ಟಲೇ ಈ ಪ್ರಹಸನ ಮುಂದುವರೆದು ಕೊನೆಯಲ್ಲಿ ಅಂತಿಮವಾಗಿ ತಲಾ ಎಕರೆಗೆ 3 ಸಾವಿರ ರೂಪಾಯಿಯಂತೆ ನಷ್ಟ ಪರಿಹಾರ ನೀಡಲು ತ್ರಿಪಕ್ಷೀಯ ಸಭೆಯಲ್ಲಿ ನಿರ್ಣಯಿಸಲಾಯಿತು.

ಕಾರ್ಗಿಲ್ ಕಂಪೆನಿಯು ಬಿದ್ದರೂ ಮೀಸೆ ಮಣ್ಣಾಗಲಿಲ್ಲ ವೆಂಬಂತೆ ಪ್ರತಿ ಎಕರೆಗೆ 3 ಸಾವಿರ ನಷ್ಟ ಪರಿಹಾರ ನೀಡಲು ಒಪ್ಪಿದರೂ ಪತ್ರಕರ್ತರು ಕಳಪೆ ಬೀಜದ ಕುರಿತು ಕೇಳಿದ ಪ್ರಶ್ನೆಗೆ ಬೀಜದ ವಿಫಲತೆಗಾಗಿಯಲ್ಲ, ಆದರೆ ರೈತರ ನಷ್ಟಕ್ಕಾಗಿ ಅನುಕಂಪದಿಂದ ವ್ಯಾಪಾರಸ್ಥರಿಂದ ಕೊಡಿಸುವುದಾಗಿ ಬಿಂಕ ಮಾಡಿತು. ಅದೇ ಸಂದರ್ಭದಲ್ಲಿ ಈಗಾಗಲೇ ಕೆಲ ರೈತರು ಜಿಲ್ಲಾ ಗ್ರಾಹಕರ ವೇದಿಕೆಗೆ ಹೋಗಿದ್ದು, ಅವರು ಕೇಸ್ ವಾಪಸು ಪಡೆದಲ್ಲಿ ಮಾತ್ರ ಅವರಿಗೆ ಪರಿಹಾರವೆಂಬ ಷರತ್ತು ವಿಧಿಸಿತ್ತು.

ಮತ್ತೊಂದು ಅಂಕ

ಕಳೆದ 3-4 ತಿಂಗಳಿನಿಂದ ಸತತವಾಗಿ ನಡೆದ ಚಳುವಳಿಯ ಕೊನೆಯ ಸುತ್ತಿನ ಮಾತುಕತೆಯಲ್ಲಿ ಜಿಲ್ಲಾಧಿಕಾರಿಗಳು ಪೋಲೀಸ್ ವರಿಷ್ಠಾಧಿಕಾರಿಗಳು, ಎಂ.ಪಿ. ... ಮಾಜಿ ಮಂತ್ರಿಗಳು ಕೃಷಿ ಸಮಾಜದ ಮುಂದಾಳುಗಳು ಸಿಪಿಐ(ಎಂ) ಮುಂದಾಳುಗಳು ಪ್ರಾಂತ ರೈತ ಸಂಘದ ಮುಂದಾಳುಗಳು, ಭಾಗವಹಿಸಿದ್ದರು. ಇನ್ನೇನು ಮುಗಿಯಿತೆಂದುಕೊಳ್ಳುವಾಗ ಮತ್ತೊಂದು ಅಂಕ ತೆರೆದು ಕೊಂಡಿತು.

ಕಾರ್ಗಿಲ್ ಕಂಪೆನಿಯು ಕನಿಷ್ಠ 20 ಸಾವಿರ ನಷ್ಟ ಪರಿಹಾರ ಈಗ ನೀಡದಿದ್ದಲ್ಲಿ ಕೋರ್ಟ್‌ಗೆ ಕೇಸು ದಾಖಲಿಸಿ ಕೊಡಿಸುವುದಾಗಿ ರಾಜ್ಯ ರೈತ ಸಂಘದ ಮುಂದಾಳುಗಳು ಘೋಷಿಸಿದರು.

ಈ ದೈತ್ಯ ಕಂಪೆನಿ ಎದುರು ಎಷ್ಟು ಕೋರ್ಟ್‌ಗಳಿಗೆ ಎಷ್ಟು ವರುಷ ತಿರುಗಬೇಕು! ಎಷ್ಟು ಲಾಯರುಗಳಿಗೆ ಕೇಸ್ ನೀಡಬೇಕು! ಬರುವ ಪರಿಹಾರಕ್ಕೆ ಕಲ್ಲು ಬಿದ್ದ ಹಾಗೇನೇ ಎಂದು ಪರಿತಪಿಸುವಂತಾಯಿತು. ನಂತರ ಕೆಲವು ದಿನ ಧರಣಿ ಸತ್ಯಾಗ್ರಹ ನಡೆಸಿದರು.


ಇದನ್ನೆಲ್ಲಾ ನೆಪವಾಗಿಸಿ ಕಾರ್ಗಿಲ್ ಕಂಪೆನಿ ಪರಿಹಾರ ನೀಡಿಕೆಯಿಂದ ನುಣುಚಿಕೊಳ್ಳಲು ಪ್ರಯತ್ನಿಸಿತು.

ಈ ಎಲ್ಲಾ ಬೆಳವಣಿಗೆಗಳಿಂದ ರಾಜ್ಯ ರೈತ ಸಂಘದ ಬೇಡಿಕೆ ಅವ್ಯಾವಹಾರಿಕ ವೆಂದು ರೈತರಿಗೆ ಮನದಟ್ಟಾಯಿತು. ಹೀಗಾಗಿ ಅವರು ಸಾಮಾನ್ಯ ರೈತರ ಬೆಂಬಲ ಕಳೆದುಕೊಂಡರು. ಈಗಾಗಲೆ ತೀರ್ಮಾನವಾಗಿದ್ದ ಪರಿಹಾರಕ್ಕಾಗಿ ಒತ್ತಾಯ ಮಾಡಿ ಯಶಸ್ವಿಯಾದರು. ಆದರಿಂದಾಗಿ ಕರ್ನಾಟಕದ ಇತ್ತೀಚಿನ ಇತಿಹಾಸದಲ್ಲಿ ಕಾರ್ಗಿಲ್ ನಂತಹ ಬೃಹತ್ ಬಹುರಾಷ್ಟ್ರೀಯ ಕಂಪನಿ ಯೊಂದು ತನ್ನ ಬೀಜ ಕಳಪೆ ಆದ್ದರಿಂದ ರೈತರು ನಷ್ಟಕ್ಕೊಳಗಾಗಿದ್ದಾರೆ ಎಂದು ಒಪ್ಪಿ ಗಣನೀಯವಾಗಿ ಪರಿಹಾರ ಕೊಡಲು ಮುಂದಾದಾಗ ಆ ಹಂತದಲ್ಲಿ ಇದ್ದಕ್ಕಿದ್ದಂತೆ ರಾಜ್ಯ ರೈತ ಸಂಘ ಮಧ್ಯ ಪ್ರವೇಶಿಸಿ ಹೋರಾಟದಲ್ಲಿದ್ದ ರೈತರ ಮನೋಭಾವವನ್ನು ಅರ್ಥಮಾಡಿ ಕೊಂಡು ನಡೆಯುತ್ತಿದ್ದ ಹೋರಾಟಕ್ಕೆ ಬೆಂಬಲಿಸುವುದಕ್ಕೆ ಬದಲಾಗಿ ಇದ್ದಕ್ಕಿದ್ದಂತೆ ಪರಿಹಾರ ಧನ 20,000 ರೂ ಕೊಡಬೇಕೆಂದು ಅವ್ಯಾವಾಹಾರಿಕವಾದ ಬೇಡಿಕೆಯಿಟ್ಟರು. ಆದರೆ ಇನ್ನೇನು ಚೆಕ್ ವಿತರಣೆಯಾಗುವುದೆಂದು ಆಸೆ ಹೊತ್ತು ಹೋದ ನೊಂದ ರೈತರಿಗೆ ನಿರಾಸೆ ಯೊಂದು ಕಾದಿತ್ತು. ಕಳೆದ 3-4 ತಿಂಗಳಿಂದ ಕಳಪೆ ಬೀಜ ದಿಂದ ನಷ್ಟ ವಾದ ರೈತರು ನೀಡಿದ ಅರ್ಜಿಗಳನ್ನು ಆದ್ಯತೆ ಮೇಲೆ ಪರಿಗಣಿಸಿ ಪರಿಹಾರ ನೀಡಬೇಕಾದ ಇಲ್ಲವೇ ಕೊಡಿಸಬೇಕಾದ ತಾಲೂಕಿನ ಕೃಷಿ ಸಹಾಯಕ ನಿರ್ದೇಶಕರು ಮಾರಾಟದ ಅಂಗಡಿ ಹಾಗೂ ಕೆಲವು ಭ್ರಷ್ಟ ರೈತರ ಜೊತೆ ಶಾಮೀಲಾಗಿ ನಿಜವಾದ ಪರಿಹಾರ ಸಿಗುವ ರೈತರಿಗೆ ವಂಚಿಸಿದರು.

ಮಾಜಿ ತಾಲೂಕಾ ಪಂಚಾಯಿತ್ ಅಧ್ಯಕ್ಷರ ಸಂಬಂಧಿಗಳಿಗೆ ನೂರಾರು ಎಕರೆ ಪ್ರದೇಶದಲ್ಲಿ ಸದರಿ ಬೀಜ ಬಿತ್ತದೇ ಲಕ್ಷಾಂತರ ಪರಿಹಾರ ಕೊಡುವಲ್ಲಿ ಸಹಕರಿಸಿದುದು ನಿಜವೆಂದು ಅಲ್ಲಿ ಆ ಭೂಮಿಯಲ್ಲಿ ಕಳಪೆ ಬೀಜ ಬಿತ್ತನೆ ಯಾಗಿಲ್ಲವೆಂದು ಆದರಿಂದಾಗಿ ಆ ರೈತರು ನಷ್ಟವಾಗಿಲ್ಲ ವೆಂದು ಮತ್ತೊಂದು ಹೋರಾಟಕ್ಕೆ ತಲೆ ಬಾಗಿ ತನಿಖೆ ನಡೆಸಿದ ಜಿಲ್ಲಾ ಪಂಚಾಯತ್ ಅಧಿಕಾರಿಗಳು ತಿಳಿಸಿದ್ದಾರೆಂದು ವರದಿಯಾಗಿದೆ.

600 ಎಕರೆ ಪ್ರದೇಶಕ್ಕೆ ಪರಿಹಾರ ನೀಡಿದ ಕಾರ್ಗಿಲ್ ಕಂಪೆನಿಯ ಹಣದಲ್ಲಿ ಭ್ರಷ್ಟಾಚಾರಕ್ಕೆ 150 ಕ್ಕೂ ಹೆಚ್ಚು ಎಕರೆ ಹೋಗಿ ನೂರಾರು ರೈತರು ಪರಿಹಾರವಿಲ್ಲದೇ ಅನಿವಾರ್ಯವಾಗಿ ಜಿಲ್ಲಾ ಗ್ರಾಹಕರ ವೇದಿಕೆಗೆ ತೆರಳುವಂತಾಯಿತು. ಭ್ರಷ್ಟಾಚಾರದ ವಿರುದ್ಧದ ಮತ್ತೊಂದು ಹೋರಾಟದ ಅಂಕ ಮುಂದೆ ಬಂದಿತು.


ಒಟ್ಟಾರೆ ಕಳಪೆ ಬೀಜ ಹಾಗೂ ಅದರ ವಿರುದ್ಧದ್ಧ ಹೋರಾಟದಲ್ಲಿ ಎದ್ದು ಕಂಡು ಬಂದ ಅಂಶವೆಂದರೆ ರಾಜ್ಯ ಸರ್ಕಾರದ ವಿಫಲತೆ. ಮತ್ತೊಂದು ಅಂಶವೆಂದರೆ ಕೇಂದ್ರದ ಬೀಜ ಸಮಿತಿಯು ನೋಟಿಫೈ ಮಾಡದೆಯೇ ಬೀಜ ಮಾರುಕಟ್ಟೆಗೆ ಬಿಟ್ಟು ರೈತರನ್ನು ಗೋಣು ಕೊಯ್ಯುವ ಬಹುರಾಷ್ಟ್ರೀಯ ಸಂಸ್ಥೆಗಳ ನೀಚ ಬುದ್ಧಿ. ಕಳಪೆ ಬೀಜ ಗೊಬ್ಬರ ಕ್ರಿಮಿನಾಶಕ ಮಾರಾಟಗಾರರ ಮೇಲೆ ಕಠಿಣ ಕ್ರಮ ರೈತರಿಗೆ ಸೂಕ್ತ ರಕ್ಷಣೆ ಪರಿಹಾರ ನೀಡುವ ರಾಜಕೀಯ ನಿರ್ಣಯದ ಅಭಾವ. ಹೋರಾಟದ ಮುಂಚೂಣಿಯಲ್ಲಿದ್ದ ಇತರ ಮುಂದಾಳುಗಳು ಕಟ್ಟಿಮನೆ ಶಿವರಾಮಪ್ಪ, ಕೆ. ಗಾದೀಲಿಂಗಪ್ಪ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು.



ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿಯಿಂದ ಪ್ರತಿಭಟನೆ

ಮಾಸದ ನೆನಪುಗಳು

(ಒಂದು ರಾಜಕೀಯ ಆತ್ಮ ಕಥನ)



ದುಡಿಯುವ ಜನರ ಅಪ್ರತಿಮ ನೇತಾರನ ಐದು ದಶಕಗಳಿಗೂ ಮೀರಿದ 'ಮಾಸದ ನೆನಪು' ಗಳಲ್ಲಿ ಬಾಲ್ಯದ ನೆನಪುಗಳನ್ನು ಈ ವರೆಗೆ ಓದಿದ್ದೀರಿ - ರಾಷ್ಟ್ರೀಯ ಚಳುವಳಿಯ ಗಾಳಿ, ತಾಯಿ ಕ್ರಾಂತಿಕಾರಿಯೊಬ್ಬರ ಪಿಸ್ತೂಲನ್ನು ಬಚ್ಚಿಟ್ಟದ್ದು, ಗಾಂಧೀಜಿ ಉಪವಾಸ ಮಾಡಿದಾಗ ಶಾಲೆಗೆ ಹೋಗದ್ದು, ನೇತಾಜಿಯವರ ಸಭೆಗೆ ಹೋಗಿ ಮೊದಲ ಬಾರಿ ಲಾಟಿಯೇಟು ತಿಂದದ್ದು, ಕ್ರಾಂತಿಕಾರಿಗಳ ಬಗ್ಗೆ ತನಿಖೆಗೆ ಒಪ್ಪದ ದೊಡ್ಡಪ್ಪನಿಗೇ ಬೆದರಿಕೆ ಪತ್ರ ಬರೆದದ್ದು ಇತ್ಯಾದಿ.

ಮುಂದಿನ ಹಂತದ ಬೆಳವಣಿಗೆಯ ಬಗ್ಗೆ ಈಗ ಓದಿ.........

ಲಂಡನ್‌ನಲ್ಲಿ ಅಂತರ್ರಾಷ್ಟ್ರೀಯ ರಾಜಕೀಯ ಪರಿಚಯ

ನಾನು 1935ರಲ್ಲಿ ಪ್ರೆಸಿಡೆನ್ಸಿ ಕಾಲೇಜಿನಿಂದ ಆರ್ಟ್ಸ್ (ಆನರ್ಸ್) ಪದವಿ ಪಡೆದೆ. ನಾನು ಬ್ರಿಟನ್ನಿಗೆ ತೆರಳಿ ಬ್ಯಾರಿಸ್ಟರ್ ಆಗಿ ಮರಳಬೇಕೆಂದು ಆಗಲೇ ನಿರ್ಧರಿಸಲಾಗಿತ್ತು. ಆ ಯೋಚನೆಯನ್ನು ನಾನು ವಿರೋಧಿಸಲಿಲ್ಲ. ನಾನು ಬ್ರಿಟನ್‌ಗೆ ಹೋಗಲಿರುವುದರಿಂದ ಐಸಿಎಸ್ ಪರೀಕ್ಷೆಗೆ ಕೂಡ ಕುಳಿತುಕೊಳ್ಳಬಹುದೆಂದು ತಂದೆ ಸಲಹೆ ಮಾಡಿದರು. 1935ರಲ್ಲಿ ನನ್ನ ಪದವಿ ಫಲಿತಾಂಶ ಹೊರಬಿದ್ದ ಕೂಡಲೇ ಬ್ರಿಟನ್‌ಗೆ ತೆರಳಲು ನಾನು ಸಿದ್ಧನಾದೆ. ಆ ವರ್ಷದ ಕೊನೆಯಲ್ಲಿ ಆ ದೇಶದ ತೀರವನ್ನು ತಲುಪಿದೆ.

ನನ್ನ ಜೀವನದಲ್ಲಿ ಏನೋ ಮಹತ್ವದ್ದು ನಡೆಯಲಿದೆ ಎಂಬುದು ನನ್ನ ಅರಿವಿಗೆ ಬರಲಿಲ್ಲ. ನನ್ನ ಕಾನೂನು ಅಧ್ಯಯನಕ್ಕೂ ಮೀರಿದ ವಿದ್ಯಮಾನಗಳು ಘಟಿಸಿದವು.

ನಾನು ಲಂಡನ್ ತಲುಪಿದೆ. ಬ್ಯಾರಿಸ್ಟರ್ ಆಗಲು ನಾನು ಪೂರ್ಣ ಸಜ್ಜುಗೊಂಡಿದ್ದೆ. ತಂದೆಯ ಸಲಹೆ ಮೇರೆಗೆ ಮರುವರ್ಷ ಐಸಿಎಸ್ ಪರೀಕ್ಷೆಗೆ ಕುಳಿತೆ. ಆದರೆ ಅದರಲ್ಲಿ ಪಾಸಾಗಲಿಲ್ಲ. ಕಾನೂನು ಅಧ್ಯಯನ ಮುಂದುವರಿಯಿತು.

ಲಂಡನ್‌ನಲ್ಲಿ ನನಗೆ ಅಂತರ್‌ರಾಷ್ಟ್ರೀಯ ರಾಜಕೀಯದ ಪರಿಚಯವಾಯಿತು. ಇಡೀ ಯುರೋಪ್ ಪ್ರಕ್ಷುಬ್ಧಗೊಂಡಿತ್ತು. ಫ್ಯಾಸಿಸ್ಟ್ ಮುಸಲೋನಿ ಇಟಲಿಯಲ್ಲಿ ಅಧಿಕಾರವನ್ನು ಕಸಿದುಕೊಂಡಿದ್ದ. ನಾನು ಲಂಡನ್ ತಲುಪಿದ ಒಂದು ವರ್ಷದೊಳಗೆ ಆತ ಅಬಿಸಿನಿಯಾವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದ್ದ. ಜರ್ಮನಿಯಲ್ಲಿ ಅಧಿಕಾರದ ಮೇಲೆ ನಿಯಂತ್ರಣ ಸಾಧಿಸಿದ ಹಿಟ್ಲರ್ ಇಡೀ ಜಗತ್ತಿನ ಮೇಲೆ ದುರಾಸೆಯ ಕಂಗಣ್ಣು ಬೀರಿದ್ದ. ಇನ್ನೊಂದೆಡೆ ಸಮಾಜವಾದಿ ಸೋವಿಯತ್ ರಷ್ಯಾ ತನ್ನ ಆರ್ಥಿಕ ನೀತಿಗಳನ್ನು ಫ್ಯಾಸಿಸಂ ಜತೆ ತರಲು ಪ್ರಯತ್ನಿಸುತ್ತಿತ್ತು.

ಇಂಗ್ಲೆಂಡ್‌ನ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ರಾಜಕೀಯ ಬಿಸಿ ಬಿಸಿ ಚರ್ಚೆಯ ವಿಷಯವಾಗಿತ್ತು. ಪ್ರೊಫೆಸರ್ ಹೆರಾಲ್ಡ್ ಲಸ್ಕಿ ಅವರ ಫ್ಯಾಸಿಸ್ಟ್ ವಿರೋಧಿ ಉಪನ್ಯಾಸಗಳನ್ನು ಆಲಿಸಲು ಜನರು ಮುಗಿಬೀಳುತ್ತಿದ್ದರು. ಪ್ರಗತಿಪರ ಶಕ್ತಿಗಳ ಜತೆ ನಾನೂ ಒಬ್ಬನಾದೆ. ಫ್ಯಾಸಿಸಂ ವಿಚಾರವಾಗಿ ತುಂಬಾ ಓದುತ್ತಿದ್ದೆ. ಅದೇ ಹೊತ್ತಿಗೆ ನಾವು ಭಾರತೀಯ ವಿದ್ಯಾರ್ಥಿಗಳು ನಮ್ಮ ದೇಶದ ಚಳುವಳಿ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ಪ್ರಯತ್ನಿಸುತ್ತಿದ್ದವು. ಕೃಷ್ಣ ಮೆನನ್ ಇಂಡಿಯಾ ಲೀಗ್‌ನ ನಾಯಕರಾಗಿದ್ದರು. ಸ್ವತಂತ್ರ ಭಾರತದಲ್ಲಿ ಅವರು ಬಹಳ ಕಾಲ ನೆಹರೂ ಸಂಪುಟದಲ್ಲಿ ಮಂತ್ರಿಯಾಗಿದ್ದರು. ಮೆನನ್ ನೇತೃತ್ವದಲ್ಲಿ ನಾವು ನಮ್ಮ ಚಳುವಳಿಯನ್ನು ಲಂಡನ್‌ಗೆ ಒಯ್ದೆವು. ಅನಂತರ ಅವರ ಜತೆಗಿನ ನನ್ನ ವೈಯಕ್ತಿಕ ಸಂಬಂಧ ಗಾಢವಾಯಿತು. ಎಲ್ಲಾ ಭಾರತೀಯ ವಿದ್ಯಾರ್ಥಿಗಳು ಯಾವುದೇ ಆಕ್ಷೇಪಗಳಿಲ್ಲದೆ ಅವರ ಜತೆ ಸಹಕರಿಸಿದರು.

1936ರಲ್ಲಿ ಭೂಪೇಶ್‌ಗುಪ್ತಾ ಅಧ್ಯಯನಕ್ಕಾಗಿ ಲಂಡನ್‌ಗೆ ಬಂದರು. ಬಹ್ರಾಂಪುರ ಜೈಲಿನಲ್ಲಿದ್ದಾಗಲೇ ಅವರು ಆರ್ಟ್ಸ್ ಪದವಿ ಪಡೆದಿದ್ದರು. ಗುಪ್ತಾ ಅಷ್ಟೊಂದು ಬುದ್ಧಿವಂತರಾಗಿದ್ದರು. ಅವರು ಕೂಡ ಕಾನೂನು ಕಲಿಯಲು ಲಂಡನ್‌ಗೆ ಬಂದರು.

ಲಂಡನ್‌ನ ಒಂದು ಮನೆಯಲ್ಲಿ ನಾನು ಭೂಪೇಶರನ್ನು ಭೇಟಿಯಾದೆ. ಅವರ ಉತ್ಸಾಹ ಬೇರೆಯವರನ್ನೂ ಆವರಿಸಿಕೊಳ್ಳುವಂತಿತ್ತು. ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷಕ್ಕೆ ಬರೆಯಲಾಗಿದ್ದ ಪತ್ರವೊಂದನ್ನು ಭೂಪೇಶ್ ತಂದಿದ್ದರು. ಬ್ರಿಟನ್ನಿನ ಉನ್ನತ ಕಮ್ಯೂನಿಸ್ಟ್ ನಾಯಕರಾದ ಹ್ಯಾರಿ ಪಾಲಿಟ್, ರಜನಿ ಪಾಮೆ ದತ್ತ, ಬೆನ್ ಬ್ರಾಡ್ಲಿ ಮೊದಲಾದವರನ್ನು ನಾವು ಭೇಟಿಯಾದೆವು. ಇಂಡಿಯಾ ಲೀಗ್ ಮತ್ತು ಭಾರತೀಯ ವಿದ್ಯಾರ್ಥಿಗಳಿಗೆ ಬ್ರಿಟಿಷ್ ಕಮ್ಯುನಿಸ್ಟ್ ನಾಯಕರು ಸಕ್ರಿಯ ನೆರವು ನೀಡಿದರು.

ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಇಬ್ಬರು ಧುರೀಣರ ಪಾತ್ರವನ್ನು ನಾನು ಇಲ್ಲಿ ಉಲ್ಲೇಖಿಸಲು ಬಯಸುತ್ತೇನೆ, ಬ್ರಾಡ್ಲಿ ಮತ್ತು ಮೈಕೆಲ್ ಕ್ಯಾರಿಟ್. ಬ್ರಾಡ್ಲಿ ಭಾರತದ ಕಮ್ಯೂನಿಸ್ಟ್ ಆಂದೋಳನಕ್ಕೆ ನೆರವು ನೀಡಲು ಭಾರತಕ್ಕೂ ಬಂದರು. ಕಾರ್ಮಿಕ ಚಳುವಳಿಯಲ್ಲಿ ಅವರು ಮಹತ್ವದ ಪಾತ್ರ ನಿರ್ವಹಿಸುತ್ತಿದ್ದರು. ಅವರು ಇಂಗ್ಲೆಂಡಿನವರಾಗಿದ್ದರೂ ಮೀರತ್ ಪಿತೂರಿ ಮೊಕದ್ದಮೆ ಸಂಬಂಧ ಅವರು ಕೆಲ ಕಾಲ ಭಾರತದಲ್ಲಿ ಸೆರೆಮನೆ ಅನುಭವಿಸಬೇಕಾಯಿತು. ಭಾರತದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಇಲ್ಲಿ ಸಮಾಜವಾದವನ್ನು ಪ್ರಸಾರ ಮಾಡುವಲ್ಲಿ ಈ ಆಂಗ್ಲವ್ಯಕ್ತಿ ನಿರ್ವಹಿಸಿದ ಪಾತ್ರವನ್ನು ನಾವು ಮರೆಯುವಂತೆಯೂ ಇಲ್ಲ, ಅಲಕ್ಷಿಸುವಂಥದೂ ಅಲ್ಲ. ಇನ್ನೊಂದೆಡೆ ಕ್ಯಾರಿಟ್ ಬ್ರಿಟಿಷ್ ಸಾಮ್ರಾಜ್ಯದ ಒಬ್ಬ ಉನ್ನತ ನಾಗರಿಕ ಸೇವಾ ಅಧಿಕಾರಿ. ಅವರು ಕೆಲಕಾಲ ಅವಿಭಜಿತ ಬಂಗಾಳದ ರಾಜ್ಯಪಾಲರ ಕಾರ್ಯದರ್ಶಿಯೂ ಆಗಿದ್ದರು. ತಮ್ಮ ರಾಜಕೀಯ ಒಲವು ಬಹಿರಂಗಗೊಳ್ಳುತ್ತಲೇ ಅಂದು ಉದ್ಯೋಗಕ್ಕೆ ರಾಜಿನಾಮೆ ನೀಡಿದರು. 'More in the Gown' ಇದು ಕ್ಯಾರಿಟ್ ಬರೆದಿರುವ ಪುಸ್ತಕ. ಭಾರತದ ಕಮ್ಯುನಿಸ್ಟ್ ಚಳುವಳಿಗೆ ಕ್ಯಾರಿಟ್ ಅವರ ಕೊಡುಗೆ ಏನೆಂಬುದನ್ನು ಈ ಪುಸ್ತಕದಿಂದ ತಿಳಿಯಬಹುದಾಗಿದೆ. ಇವರಂಥ ನಾಯಕರು ನಮಗೆ ಪೂರ್ಣ ಬೆಂಬಲ ನೀಡಿದರು.

ಈ ನಡುವೆ ಹಿರೇನ್ ಮುಖರ್ಜಿ, ಸಜ್ಜಾದ್ ಝಹೀರ್, ಡಾ. ಝುಡ್-ಎ-ಅಹಮದ್ ಮತ್ತು ನಿಹರೇಂದು ದತ್ತ ಮಜುಂದಾರ್ ಬ್ರಿಟನ್ ಬಿಟ್ಟು ಭಾರತಕ್ಕೆ ಹೋದರು. ಅವರ ಅನುಪಸ್ಥಿತಿ ನಮ್ಮನ್ನು ಬಹುವಾಗಿ ಕಾಡಿತು. ವಾಸ್ತವವಾಗಿ ನಮ್ಮ ಉತ್ಸಾಹ ಸ್ವಲ್ಪ ಕುಗ್ಗಿತು ಎಂದರೂ ಅಡ್ಡಿಯಿಲ್ಲ. ಆದರೆ ಈ ಶೂನ್ಯವನ್ನು ತುಂಬಬೇಕೆಂದು ನಮಗೆ ಮನವರಿಕೆಯಾಯಿತು. ಲಂಡನ್, ಕೇಂಬ್ರಿಡ್ಜ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಗಳ ಭಾರತೀಯ ವಿದ್ಯಾರ್ಥಿಗಳು ಅವರದೇ ಕಮ್ಯುನಿಸ್ಟ್ ಗುಂಪುಗಳನ್ನು ರಚಿಸಿಕೊಂಡರು. ಭಾರತದಲ್ಲಿನ ಬ್ರಿಟಿಷ್ ಆಡಳಿತ ಕಮ್ಯುನಿಸ್ಟ್ ಪಕ್ಷವನ್ನು ಆಗಲೇ ನಿಷೇಧಿಸಿರುವುದರಿಂದ ಬಹಿರಂಗ ಸಭೆಗಳನ್ನು ನಡೆಸದಂತೆ ಬ್ರಿಟಿಷ್ ನಾಯಕತ್ವ ನಮಗೆ ಸಲಹೆ ನೀಡಿತು. ನಾವು ಮಾರ್ಕ್ಸ್‌ವಾದಿ ಅಧ್ಯಯನ ವೃತ್ತಗಳಿಗೆ ಹಾಜರಾಗಲು ಆರಂಭಿಸಿದೆವು. ಹ್ಯಾರಿ ಪಾಲಿಟ್, ರಜನಿ ಪಾಮೆ ದತ್ತ, ಕ್ಲೆಮೆನ್ಸ್ ದತ್ತ ಮತ್ತು ಬ್ರಾಡ್ಲಿ ನಮ್ಮ ಶಿಕ್ಷಕರಾಗಿದ್ದರು.

ಆ ವೇಳೆಗೆ ಇಡೀ ಜಗತ್ತು ತುಮುಲದಲ್ಲಿತ್ತು. ಸ್ಪೇನ್‌ನಲ್ಲಿ ಅಂತಃಕಲಹ ನಡೆಯುತ್ತಿತ್ತು. ಫ್ರಾಂಕೋನ ಸರ್ವಾಧಿಕಾರಿ ಆಡಳಿತದ ವಿರುದ್ಧವಾಗಿ ಎಲ್ಲಾ ಪ್ರಗತಿಪರ ಶಕ್ತಿಗಳು ಒಂದಾಗುತ್ತಿದ್ದವು. ಫ್ರಾಂಕೊನ ಫ್ಯಾಸಿಸ್ಟ್ ವರ್ತನೆಯ ವಿರುದ್ಧ ಹೋರಾಡಲು ಅಂತರ್ ರಾಷ್ಟ್ರೀಯ ತಂಡ (International Brigade) ವೊಂದನ್ನು ರಚಿಸಲಾಯಿತು. ರಾಲ್ಫ್ ಫ್ಯಾಕ್ಸ್, ಕ್ರಿಸ್ಟೋಫರ್ ಕಾಡ್‌ವೆಲ್ ಮೊದಲಾದ ಹೆಸರಾಂತ ಕಮ್ಯುನಿಸ್ಟ್ ಬುದ್ಧಿಜೀವಿಗಳು ಸ್ಪೇನ್‌ಗೆ ಹೋಗತೊಡಗಿದರು. ಅರ್ನೆಸ್ಟ್ ಹೆಮಿಂಗ್ವೆ ಅವರ 'For whom the Bell Tolls' ಈ ಹೋರಾಟವನ್ನು ಆಧರಿಸಿದ್ದಾಗಿತ್ತು.

ನಾನು ತುಂಬಾ ಹೆಚ್ಚಾಗಿ, ಇನ್ನೂ ಗಾಢವಾಗಿ ಒಳಗೊಳ್ಳುತ್ತಿದ್ದೆ. ಪ್ರತಿಯೊಂದು ಬದಲಾಗುತ್ತಿದೆ ಎಂಬುದು ನನಗೆ ಮನವರಿಕೆಯಾಗುತ್ತಿತ್ತು. ಮಾರ್ಕ್ಸ್‌ವಾದಿ ಸಾಹಿತ್ಯ ಮತ್ತು ಜಗತ್ತಿನ ಸಮಕಾಲೀನ ರಾಜಕೀಯ ವಿದ್ಯಮಾನಗಳು ನನ್ನನ್ನು ರಾಜಕೀಯದ ಮುಖ್ಯವಾಹಿನಿಗೆ ವೇಗವಾಗಿ ಸೆಳೆದುಕೊಳ್ಳುತ್ತಿದ್ದವು.

(ಮುಂದುವರಿಯುವುದು)



ಬಾಗೇಪಲ್ಲಿ ಭೂ ಅಭಿವೃದ್ಧಿ ಬ್ಯಾಂಕ್ ಚುನಾವಣೆ: ಸಿಪಿಐ(ಎಂ)ಗೆ 3 ಸ್ಥಾನ

ಬಾಗೇಪಲ್ಲಿ ಕೇಂದ್ರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಚುನಾವಣೆಯಲ್ಲಿ ಮೊದಲ ಬಾರಿಗೆ ಮೂರು ಸ್ಥಾನಗಳಲ್ಲಿ ಸಿಪಿಐ(ಎಂ) ಗೆದ್ದು ಬಂದಿದೆ. 1967 ರಿಂದ ಈ ವರೆಗೆ ಎಂದೂ ಬ್ಯಾಂಕು ಮೆಟ್ಟಿಲೇರದ ಸಿಪಿಐ(ಎಂ) ಮೇ. 30 ರಂದು ನಡೆದ ಚುನಾವಣೆಯಲ್ಲಿ 6 ಸ್ಥಾನಗಳಿಗೆ ಸ್ಪರ್ಧಿಸಿ 3 ಸ್ಥಾನಗಳನ್ನು ಪಡೆದಿರುವುದು ಕಾಂಗ್ರೆಸ್‌ನಲ್ಲಿ ತಳಮಳ ಹುಟ್ಟಿಸಿದೆ. 1967 ರ ಹಿಂದೆ ಅವಿಭಜಿತ ಪಕ್ಷದ ಅಡಿಯಲ್ಲಿ ಕಮ್ಯುನಿಷ್ಟರು ಸ್ಪರ್ಧಿಸಿ ಗೆದ್ದಿರುವುದು ಬಿಟ್ಟರೆ, ನಿಜವಾಗಿ ಸಿಪಿಐ(ಎಂ) ಅಭ್ಯರ್ಥಿಗಳು ಗೆದ್ದು ಬ್ಯಾಂಕನ್ನು ಪ್ರತಿನಿಧಿಸಿರುವುದು ಇದೇ ಮೊದಲು.



ಚೇಳೂರು ಕ್ಷೇತ್ರದ ನರಸಿಂಹಪ್ಪನವರು

ಸಾಲಗಾರ ಕ್ಷೇತ್ರ

ಸಹಕಾರಿ ಕ್ಷೇತ್ರದಲ್ಲಿ ಕೇಂದ್ರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಪ್ರಮುಖ ಪಾತ್ರ ವನ್ನು ವಹಿಸುತ್ತದೆ. ಆದರೆ, ಅದು ಕೇವಲ ದೊಡ್ಡ ರೈತರ ಗುತ್ತಿಗೆಯಾಗಿ ವರ್ತಿಸುತ್ತಿರುವುದು ವಿಪರ್ಯಾಸ. ಮೊದಲು ಕೇವಲ ದೊಡ್ಡ ರೈತರ ಪರವಾಗಿ ಟ್ರಾಕ್ಟರ್, ದೊಡ್ಡಮೊತ್ತದ ಕೋಳಿಫಾರಂ ನಂತಹ ಸಾಲಗಳು ಕೊಡುತ್ತಿದ್ದು ಈಗೀಗ ಸಣ್ಣ ರೈತರಿಗಾಗಿ ರೇಷ್ಮೆ ಹುಳು ಸಾಕಾಣಿಕೆಗೆ, ಹಸು, ಎತ್ತು ಗಾಡಿ ಮುಂತಾದುವುಗಳಿಗೆ ಕೊಡುತ್ತಿದ್ದಾರೆ. ಬ್ಯಾಂಕು ದುಡಿಯುವ ಜನರ ಪರವಾಗಿ ಕೆಲಸ ಮಾಡಬೇಕಾಗಿದೆ. ಸಾಮಾನ್ಯವಾಗಿ ಬ್ಯಾಂಕಿನಲ್ಲಿ ಷೇರುದಾರರಾಗಿ ದೊಡ್ಡ ರೈತರೇ ಹೆಚ್ಚಾಗಿದ್ದು ಅಲ್ಲೊಬ್ಬ ಇಲ್ಲೊಬ್ಬ ಸಣ್ಣ ರೈತ ಸಾಲ ಪಡೆದಿದ್ದರೆ, ಅದನ್ನು ಹಿಂತಿರುಗಿಸಲು ಸಾಧ್ಯವಾಗದೇ ಇರುವ ಪರಿಸ್ಥಿತಿ ಅವರನ್ನು ಕಾಡುತ್ತಿದೆ. ಸಾಮಾನ್ಯ ವಾಗಿ ಬ್ಯಾಂಕಿನ ಚುನಾವಣೆಗಳಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ, 1994 ರ ವಿಧಾನ ಸಭಾ ಚುನಾವಣೆಗಳ ನಂತರ ಕ್ಷೇತ್ರ ಅಭಿವೃದ್ಧಿ ಕಾರ್ಯಗಳಿಂದ ದೊಡ್ಡ ರೈತರಿಗೂ ಕೂಡಾ ಪಕ್ಷದ ಮೇಲೆ ಸದಭಿಪ್ರಾಯ ಮೂಡಿರುವುದು ಈ ಚುನಾವಣೆಗಳಲ್ಲಿ ಎದ್ದು ಕಾಣಿಸುತ್ತಿದೆ.

ಈ ಮೊದಲು ನಾಮಕರಣ ಸದಸ್ಯರ ಸಹಕಾರದಿಂದ ಜನತಾದಳ ಅಧ್ಯಕ್ಷ ಗಾದಿ ಹಿಡಿದಿತ್ತು. ಅವರಿಗಿಂತ ಮೊದಲು ಕಾಂಗ್ರೆಸ್ ಭದ್ರ ಕೋಟೆ ಆಗಿತ್ತು. ಹಿಂದಿನ ಅಧ್ಯಕ್ಷರುಗಳು ದುಡಿಯುವ ಜನರ ಪರವಾಗಿ ಕೆಲಸ ಮಾಡುವ ಬದಲು ದೊಡ್ಡ ರೈತರ ಪರ ಕೆಲಸ ಮಾಡಿರುವುದು ಸ್ಪಷ್ಟವಾಗಿದೆ. ಅವರ ಕಾರ್ಯವೈಖರಿ ಅವರ ಸ್ಥಾನಗಳನ್ನು ಮಾತ್ರ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಅವರ ಬೆಂಬಲಿತ ಸ್ಥಾನಗಳು ಅವರಿಗೆ ದಕ್ಕದೇ ಇರುವುದು ಎರಡೂ ಪಕ್ಷಗಳಲ್ಲಿ ತಳಮಳ ಹುಟ್ಟಿಸಿವೆ.

ಒಂದು ವಿಚಿತ್ರ ಅಪವಿತ್ರ ಮೈತ್ರಿ ಈ ಚುನಾವಣೆಗಳಲ್ಲಿ ಮೂಡಿತ್ತು. ಜನತಾದಳ ಮತ್ತು ಕಾಂಗ್ರೆಸ್ಸಿನ ಮಧ್ಯ ಮೈತ್ರಿ ಏರ್ಪಟ್ಟು ಸಿಪಿಐ(ಎಂ)ನ ವಿರುದ್ಧ ಸ್ಪರ್ಧಿಸಿದ್ದವು. ಜನತಾದಳ ತಾಲ್ಲೂಕು ಅಧ್ಯಕ್ಷರಾದ ನರಸಿಂಹಾರೆಡ್ಡಿ ಚಾಕವೇಲು ಸಾಲ ಪಡೆದವರ ಕ್ಷೇತ್ರದಿಂದ ಸ್ಪರ್ಧಿಸಿ ಚೇಳೂರು ಕ್ಷೇತ್ರ ಕಾಂಗ್ರೆಗೆ ಬಿಟ್ಟುಕೊಡುವುದು ಎಂಬುದು ಒಂದು ಏರ್ಪಾಡು, ಬಾಗೇಪಲ್ಲಿ ಸಾಲಪಡೆದವರ ಕ್ಷೇತ್ರದಲ್ಲಿ ಜನತಾದಳ ಅಭ್ಯರ್ಥಿ ಕಾಂಗ್ರೆ ಅಭ್ಯರ್ಥಿ ಎಂದು ಘೋಷಿಸಿದರೆ, ಕಾಂಗ್ರೆ ನವರು ಹಿಂದಕ್ಕೆ ಪಡೆಯುವುದೆಂದು ಅದರಂತೆ ಅಲ್ಲಿ ಜನತಾದಳ ಅಭ್ಯರ್ಥಿ ಕ್ಷಣಗಳಲ್ಲಿ ಕಾಂಗ್ರೆ ಅಭ್ಯರ್ಥಿಯಾದರು. ಮಿಕ್ಕೆಲ್ಲಾ ಕಡೆ ಕಾಂಗ್ರೆ ಅಭ್ಯರ್ಥಿಗಳಿಗೆ ಜನತಾದಳದ ಬೆಂಬಲ. ಒಂದು ಕ್ಷೇತ್ರ ಮಾತ್ರ ಜನತಾದಳ ಸ್ಪರ್ಧಿಸುವುದೆಂದು ಅದರಂತೆ ಪೋಲನಾಯಕ ನಲ್ಲಿ ಸಾಲಪಡೆದವರ ಕ್ಷೇತ್ರದಿಂದ ಮಾತ್ರ ಜನತಾದಳ ಅಭ್ಯರ್ಥಿ ಸ್ಪರ್ಧಿಸಿದ್ದರು. ಏನಾದರೂ ಮಾಡಿ ಸಿಪಿಐ(ಎಂ) ಅಭ್ಯರ್ಥಿಗಳನ್ನು ಸೋಲಿಸಬೇಕೆಂಬುದು ಎರಡೂ ಪಕ್ಷಗಳ ಹಠ. ನೀರಿನಂತೆ ಹಣ ಮತ್ತು ಮದ್ಯ ಹರಿಸಿದರು. ಅವರ ಜೊತೆ ಕೋಟಿಗಟ್ಟಲೆ ವಿದೇಶಿ ಹಣವನ್ನು ಸ್ವಯಂ ಸೇವಾ ಸಂಸ್ಥೆಯಾದ ADATS ಎಂಬ ಸಂಸ್ಥೆ ಖರ್ಚುಮಾಡಿತ್ತು. ಅವರ ಜೊತೆಯಲ್ಲಿ ಜಿಲ್ಲೆಯ ಸಚಿವ ರೊಬ್ಬರ ತಮ್ಮ ಕೂಡ ಸೋಲಿಸಲು ತುಂಬಾ ಶ್ರಮವಹಿಸಿದರು. ಇಷ್ಟೆಲ್ಲಾ ಸರ್ಕಸ್ ಮಾಡಿದರೂ ಮೂರು ಸ್ಥಾನಗಳಲ್ಲಿ ಸಿಪಿಐ(ಎಂ) ಗೆಲುವನ್ನು ತಪ್ಪಿಸಲು ಸಾಧ್ಯವಾಗಲಿಲ್ಲ.

85 ಮತಗಳ ಕ್ಷೇತ್ರವಾದ ಜಿ. ಮದ್ದೇಪಲ್ಲಿ ಸಾಲಪಡೆದವರ ಕ್ಷೇತ್ರದಲ್ಲಿ ಕಾಂ|| ನಾರಾಯಣ ಸ್ವಾಮಿ 28 ಮತಗಳ ಅಂತರದಿಂದ, ಬಿಳ್ಳೂರು ಸಾಲಪಡೆದವರ ಕ್ಷೇತ್ರದಿಂದ ಕಾಂ|| ಶ್ರೀರಾಮಪ್ಪ 10 ಮತಗಳ ಅಂತರದಿಂದ, ಚೇಳೂರು ಸಾಲಪಡೆದವರ ಕ್ಷೇತ್ರದಿಂದ ನರಸಿಂಹಪ್ಪರವರು 34 ಮತಗಳ ಅಂತರದಲ್ಲಿ ಗೆದ್ದು ಬಂದು ಎರಡೂ ಪಕ್ಷಗಳಿಗೆ ತಳಮಳ ಉಂಟುಮಾಡಿದ್ದಾರೆ. ಬ್ಯಾಂಕ್ ಮಂಡಳಿಯ 11 ಸ್ಥಾನಗಳಲ್ಲಿ ಸಿ.ಪಿ.ಐ. (ಎಂ) 3 ಸ್ಥಾನಗಳಲ್ಲಿ ಕಾಂಗ್ರೆ 5 ಸ್ಥಾನಗಳಲ್ಲಿ ಜನತಾದಳ 2 ಸ್ಥಾನಗಳಲ್ಲಿ ಒಂದು ಸ್ಥಾನ ಸ್ವತಂತ್ರ ಅಭ್ಯರ್ಥಿ ಗೆದ್ದು ಬಂದಿದ್ದು, ಸಿಪಿಐ(ಎಂ) ಪರವಾಗಿ ಆರಿಸಲ್ಪಟ್ಟ ನಿರ್ದೇಶಕರು ಅಧ್ಯಕ್ಷ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರವಹಿಸುವ ಶಕ್ತಿ ಹೊಂದಿದ್ದಾರೆ. ದುಡಿಯುವ ಜನರ ಪರ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಕೆಲಸ ಮಾಡಲು ಸಿಪಿಐ(ಎಂ) ಪರವಾಗಿ ಆಯ್ಕೆಯಾದ ನಿರ್ದೇಶಕರು ದುಡಿಯುವರೆಂದು ಪಕ್ಷದ ಕಾರ್ಯದರ್ಶಿ ಕಾಂ|| ವಿ. ವೆಂಕಟ ಸ್ವಾಮಿರೆಡ್ಡಿ 'ಐಕ್ಯರಂಗ' ಕ್ಕೆ ತಿಳಿಸಿದ್ದಾರೆ.

ಹಂಚು ಉದ್ಯಮ: ಅಂದು - ಇಂ



ಕರಾವಳಿ ಕರ್ನಾಟಕದ ಉದ್ದಕ್ಕೆ ಪ್ರಯಾಣ ಮಾಡಿದರೆ ನಮ್ಮ ಕಣ್ಣುಗಳಿಗೆ ಮುದ ನೀಡುವ ಭತ್ತದ ಗದ್ದೆಗಳು, ತೆಂಗಿನ ತೋಪುಗಳು, ಅರಬೀ ಸಮುದ್ರದ ಭೋರ್ಗರೆತ, ತುಂಬಿದ ನದಿಗಳು ಮತ್ತು ಅವುಗಳ ಪ್ರಶಾಂತ ಹಿನ್ನೀರು, ಇವುಗಳಿಗೆಲ್ಲಾ ಕಳಶವಿಟ್ಟಂತೆ ನಮಗೆ ಕಾಣುವುದು ಹಂಚು ಕಾರ್ಖಾನೆಗಳ ಬಾನೆತ್ತರದ ಹೊಗೆ ಕೊಳವೆಗಳು. ಕರಾವಳಿಯ, ವಿಶೇಷವಾಗಿ ಮಂಗಳೂರಿನ ಚಿತ್ರಣ ನಮ್ಮ ಮನಸ್ಸಿನಲ್ಲಿ ಮೂಡಿ ಬರುವಾಗ ಹಂಚು ಕಾರ್ಖಾನೆಯ ಚಿಮಣಿಯೇ ಅದರ ಪ್ರಧಾನ ಆಕರ್ಷಣೆಯಾಗುವುದು ಅನಿವಾರ್ಯ. ಈ ಚಿಮಿಣಿಗಳಿಂದ ನಿಧಾನವಾಗಿ, ಕಲಾತ್ಮಕವಾಗಿ ಹೊರಸೂಸುವ ಹೊಗೆ ಕೂಡಾ ಪರಿಸರ ವಿರೋಧಿಯಲ್ಲ. ಯಾಕೆಂದರೆ ಅದು ಶುದ್ಧ, ಒಣ ಕಟ್ಟಿಗೆಯ ಜ್ವಾಲೆಯಿಂದ ಬರುವ ಮಿತವಾದ ಹೊಗೆ.

ಹಂಚು ಒಂದು ಅದ್ಭುತವಾದ ಉತ್ಪನ್ನ. ಆವೆ ಮಣ್ಣಿನಿಂದ ತಯಾರಿಸಲ್ಪಡುವ ವಸ್ತುವಾದರೂ, ಬಿದ್ದಲ್ಲಿ ಪುಡಿಯಾಗುವ ಮಡಕೆಯಂತೆ ಇದೊಂದು ದುರ್ಬಲ ಸರಕಲ್ಲ. ಕಬ್ಬಿಣದ ಸರಳಿನಲ್ಲಿ ತಟ್ಟಿದರೆ ಠಣ್ ಠಣ ಎಂದು ಗಂಟೆಯಂತೆ ಧ್ವನಿಗೊಡುವ ಹಂಚು ಮಣ್ಣಿನಿಂದ ಮೈತಳೆದ ವಾಸ್ತು ಶಿಲ್ಪ. ಬ್ರಿಟಿಷರ ಕಾಲದಲ್ಲಿ ದೊರೆಗಳ ಬಂಗಲೆಗಳ, ಆಳರಸರ ಅರಮನೆಗಳ, ಭೂ ಮಾಲಿಕರ ಮತ್ತು ಶ್ರೀಮಂತರ ಮನೆಗಳ ಹಾಗೂ ಸರಕಾರಿ ಕಟ್ಟಡಗಳ ಮಾಡುಗಳನ್ನು ಅಲಂಕರಿಸಿ, ವೈಭವದ ಸ್ಥಾನ ಪಡೆದಿದ್ದ ಹಂಚು, ಬಡವರ ಪಾಲಿಗೆ ಗಗನ ಕುಸುಮವಾಗಿತ್ತು. ಅಂದು ಬಡವರ ಮನೆಗಳ ಸೂರುಗಳ ಮೇಲೆ ಮುಳಿಹುಲ್ಲಿನದ್ದೇ ವೈಭವ. ಹಂಚು ಛಾವಣಿಯ ಮನೆಯನ್ನು ಹೊಂದಿರುವುದು ಎಷ್ಟೊಂದು ಗೌರವದ ಸಂಕೇತವಾಗಿತ್ತೆಂದರೆ ಉತ್ತರ ಕರ್ನಾಟಕದಲ್ಲಿ ಈಗಲೂ 'ಹಂಚಿನ ಮನಿ' ಎಂಬ ಉಪನಾಮವನ್ನು ಹೊಂದಿರುವ ಜನರಿದ್ದಾರೆ.

ಉರಿ ಬಿಸಿಲನ್ನೂ ಜಡಿ ಮಳೆಯನ್ನೂ ಏಕ ಪ್ರಕಾರವಾಗಿ ತಾಳಿಕೊಂಡು ಕಟ್ಟಡಕ್ಕೆ ರಕ್ಷಣೆ ಮತ್ತು ಹಿತವಾದ ಹವೆಯನ್ನು ಖಾತ್ರಿ ಗೊಳಿಸಬಲ್ಲ ವಿಶಿಷ್ಟ ಸಾಧನವಾದ ಹಂಚು ನೋಡುವುದಕ್ಕೂ ಸುಂದರ ಮಾತ್ರವಲ್ಲದೆ ಕಲಾತ್ಮಕವೂ ಆಗಿರುತ್ತದೆ. ಮಂಗಳೂರಿನಲ್ಲಿ ಇನ್ನೂರು ವರ್ಷಗಳ ಹಿಂದೆ ಕಟ್ಟಲ್ಪಟ್ಟ ಸರಕಾರಿ ಕಟ್ಟಡಗಳ ಮತ್ತು ಬಂಗಲೆಗಳ ಹಂಚಿನ ಮಾಡುಗಳು ಇಂದಿಗೂ ಸುಭದ್ರವಾಗಿವೆ. ಇದಕ್ಕೆ ವ್ಯತಿರಿಕ್ತವಾಗಿ, ಇತ್ತೀಚಿನ ವರ್ಷಗಳಲ್ಲಿ ಕಟ್ಟಲ್ಪಟ್ಟ ಅನೇಕ ಕಾಂಕ್ರೀಟ್ ಕಟ್ಟಡಗಳ ಮಾಡುಗಳು ಬಿರುಕು ಬಿಟ್ಟು, ಅವುಗಳೊಳಗಿನ ಸರಳುಗಳೂ, ಜಲ್ಲಿ ಕಲ್ಲುಗಳೂ ಶಿಥಿಲವಾಗಿ ಹೊರಗೆ ಬರುವುದನ್ನು ಕಾಣಬಹುದು.

ಹಂಚಿನ ಕಾರ್ಖಾನೆಗಳು ಹೆಚ್ಚಾದಂತೆ ಹಾಗೂ ಯಾಂತ್ರೀಕರಣದಿಂದಾಗಿ ಉತ್ಪಾದನೆ ಹೆಚ್ಚಾದಂತೆ ಬಡವರ ಮನೆಗಳ ಮಾಡುಗಳಿಗೂ ಹಂಚು ವ್ಯಾಪಿಸಿತು. ಮಂಗಳೂರಿನಲ್ಲಿ ಹುಟ್ಟಿ, 'ಮಂಗಳೂರು ಹಂಚು' ಎಂದೇ ಪ್ರಸಿದ್ಧವಾದ ಈ ಉದ್ಯಮವು ರಾಜ್ಯದ ಮತ್ತು ದೇಶದ ಇತರ ಅನೇಕ ಭಾಗಗಳಿಗೂ ಹರಡಿತು. ಆಧುನಿಕ ಸಮಾಜದಲ್ಲಿ ಕಾಂಕ್ರೀಟ್ ಕಟ್ಟಡಗಳ ಫ್ಯಾಶನ್ ಸರ್ವವ್ಯಾಪಿಯಾದ ನಂತರವೂ, ಬಡವರಿಗಾಗಿ ಮನೆಕಟ್ಟಿಸಲು ಕೆಲವು ರಾಜ್ಯ ಸರಕಾರಗಳು ಯೋಜನೆಗಳನ್ನು ರೂಪಿಸಿದ ಪರಿಣಾಮವಾಗಿ ಹಂಚಿನ ಮಾರುಕಟ್ಟೆ ಸ್ಥಿರವಾಗಿ ಉಳಿಯಿತು.

ಆದರೆ ಇತ್ತೀಚೆಗೆ ಹಂಚುಗಳಿಗೆ ಬೇಡಿಕೆ ಕಡಿಮೆಯಾಗಿದೆ. ಈ ವರ್ಷ ಮಂಗಳೂರಿನ ಕೆಲವು ಕಾರ್ಖಾನೆಗಳಲ್ಲಿ ಹಂಚು ಸ್ಟಾಕ್ ಮಾಡಿಡುವ ಜಾಗವೆಲ್ಲಾ ಭರ್ತಿಯಾದುದರಿಂದಾಗಿ ಉತ್ಪಾದನೆ ಸ್ಥಗಿತಗೊಳಿಸಿ, ಕಾರ್ಮಿಕರಿಗೆ ವಾರಗಟ್ಟಲೆ ಲೇ ಆಫ್ ನೀಡಲಾಯಿತು. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಹೆಚ್ಚಿನ ಕಾರ್ಖಾನೆಗಳಲ್ಲಿ ಹಂಚುಗಳ ಸ್ಟಾಕ್ ತುಂಬಿ ತುಳುಕಿತು. ಕೆಲವು ಮಾಲಿಕರು ಹತಾಶರಾಗಿ ಹಂಚಿನ ಮಾರಾಟದ ಬೆಲೆಗಳನ್ನು ವಿಪರೀತವಾಗಿ ಇಳಿಸಿದರು. ಇಲ್ಲದ ಮಾರುಕಟ್ಟೆಗೆ ಸಲ್ಲದ ಸ್ಪರ್ಧೆ! ಈ ಸ್ಪರ್ಧೆಗಳಿಂದಾಗಿ ಇಡೀ ಕೈಗಾರಿಕೆಗೆ ನಷ್ಟವಾಯಿತು. ಆದರ ಲಾಭವಾದದ್ದು ಗ್ರಾಹಕರಿಗಲ್ಲ, ಕೆಲವು ಮಧ್ಯವರ್ತಿ ದಲ್ಲಾಳಿಗಳು ಲಾಭ ಮಾಡಿಕೊಂಡರು. ಕಳೆದ ಎರಡು ತಿಂಗಳುಗಳಲ್ಲಿ ಹಂಚಿನ ಮಾರುಕಟ್ಟೆ ಸ್ವಲ್ಪ ಚೇತರಿಸಿದೆ. ಆದರೆ ಈ ಕೈಗಾರಿಕೆಯ ಭವಿಷ್ಯವು ಇನ್ನೂ ಆತಂಕಕಾರಿಯಾಗಿದೆ.

ಸರಕಾರದ ನೀತಿಗಳ ಪರಿಣಾಮ

ಹಂಚು ಉದ್ಯಮದ ಅವನತಿಯಲ್ಲಿ ಸರಕಾರದ ಪಾತ್ರ ಎದ್ದು ಕಾಣುತ್ತಿದೆ. ಹಂಚು ತಯಾರಿಕೆಗೆ ಮೂಲ ಕಚ್ಚಾ ಮಾಲು ಆವೆ ಮಣ್ಣು. ಆವೆ ಮಣ್ಣಿನ ನಿಕ್ಷೇಪಗಳು ಸಮೃದ್ಧವಾಗಿರುವ ವಿಶಾಲ ಭೂಮಿಯನ್ನು ಸರಕಾರದ ಉದಾರೀಕರಣದ ನೀತಿಯಿಂದಾಗಿ ಬಹುರಾಷ್ಟ್ರೀಯ ಸಂಸ್ಥೆಗಳು ಖರೀದಿಸುತ್ತಿವೆ. ಈ ಪ್ರದೇಶಗಳಲ್ಲಿ ಅವರು ಬೃಹತ್ ಕಟ್ಟಡಗಳನ್ನು ಕಟ್ಟಿಸುತ್ತಾರೆ. ಇದರಿಂದಾಗಿ ಆವೆ ಮಣ್ಣಿನ ನಿಕ್ಷೇಪಗಳು ಮಾಯವಾಗುವುದರಿಂದ ಮುಂದಿನ ದಿನಗಳಲ್ಲಿ ಹಂಚು ಉದ್ಯಮವು ತೀವ್ರ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ. ರಾಜ್ಯ ಸರಕಾರವು ಆವೆಮಣ್ಣಿನ ನಿಕ್ಷೇಪಗಳಿರುವ ಪ್ರದೇಶಗಳನ್ನು ಹಂಚು ಉದ್ಯಮಕ್ಕಾಗಿ ಮೀಸಲಿಡಲು

ಮಂಗಳೂರಿನಲ್ಲಿ ಹುಟ್ಟಿ, 'ಮಂಗಳೂರು ಹಂಚು' ಉತ್ಪನ್ನ. ಹಂಚಿನ ಕಾರ್ಖಾನೆ ಕರಾವಳಿ ಕರ್ನಾಟ ಹೌದು. ಆದರೆ ಈ ಉದ್ಯಮ ಈಗ ಗಂಭೀ ಕಾರ್ಮಿಕರ ಕಠಿಣಜೀವನ ಇನ್ನಷ್ಟು ಕಠಿಣಗೊ ಪರಿಹಾರಗಳು ಇವೆಯೇ? ಮಂಗಳೂರಿನ ಹ ಮುಖಂಡ, ಸಿಐಟಿಯು ಮುಂದಾಳು ಬಿ.ಮಾ ಜತೆಗೆ ಕರ್ನಾಟಕದ ಕಾರ್ಮಿಕ ಆಂದೋಲ ಸೇರಿಸಿದ ಹಂಚಿನ ಕಾರ್ಮಿಕರ ಆಂದೋಲ ಕೊಟ್ಟಿದ್ದಾರೆ.

ಹಂಚಿನ ಕಾರ್ಮಿಕರ ಸಮರಶೀಲ ಹೋರಾಟಗಳ ಪರಂಪ

ಮಂಗಳೂರಿನ ಹಂಚು ಕಾರ್ಮಿಕರು 1944ರಲ್ಲಿ ತಮ್ಮ ಸಂಘವನ್ನು ಸ್ಥಾಪಿಸಿದರು. 1946ರ ಫೆಬ್ರವರಿ 7 ರಿಂದ ಮಂಗಳೂರಿನ ಹಂಚಿನ ಕಾರ್ಮಿಕರು ಬೋನಸ್ ಮತ್ತು ತುಟ್ಟಿಭತ್ತೆಗಾಗಿ ನಡೆಸಿದ 5 ದಿನಗಳ ಮುಷ್ಕರವು ಈ ಕೈಗಾರಿಕೆಯ ಪ್ರಥಮ ಮುಷ್ಕರವಾಗಿತ್ತು. ಜಿಲ್ಲಾಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಮಾತುಕತೆಗಳು ನಡೆದು, ಮೂರು ತಿಂಗಳ ಮೂಲ ಕೂಲಿಯಷ್ಟು ಬೋನಸ್, ಮೂಲ ಕೂಲಿಯ ಶೇಕಡಾ 50 ರಷ್ಟು ತುಟ್ಟಿಭತ್ತೆ ನೀಡಲು ಹಾಗೂ ಎಲ್ಲಾ ಕಾರ್ಖಾನೆಗಳಲ್ಲೂ ಇವುಗಳನ್ನು ಒಂದೇ ರೀತಿಯಲ್ಲಿ ಜಾರಿ ಮಾಡಲು ಮಾಲಿಕರು ಒಪ್ಪಿದ ನಂತರ ಮುಷ್ಕರವನ್ನು ಹಿಂತೆಗೆಯಲಾಯಿತು.

1947ರಲ್ಲಿ ಮಾಲಿಕರು ಬೋನಸ್ ನೀಡಲು ನಿರಾಕರಿಸಿದರು. ಆಗ ಹಂಚಿನ ಮಜೂರರ ಸಂಘವು 3 ತಿಂಗಳ ಬೋನಸ್, ಕೂಲಿ ಹೆಚ್ಚಳ ಹಾಗೂ ಇತರ 9 ಬೇಡಿಕೆಗಳನ್ನು ಮಾಲಿಕರ ಮುಂದಿಟ್ಟಿತು. ಬೇಡಿಕೆಗಳನ್ನು ಈಡೇರಿಸಲು ಮಾಲಿಕರು ನಿರಾಕರಿಸಿದುದರಿಂದ 1947ರ ಜನವರಿ 21ರಂದು ಮುಷ್ಕರವನ್ನು ಆರಂಭಿಸಲಾಯಿತು. ಮುಷ್ಕರ ಆರಂಭವಾದ ಎರಡು ದಿನಗಳಲ್ಲಿ ತಾರೀಕು 23 ರಂದು ಸಂಘದ ಮುಖಂಡರಾದ ಬಿ.ವಿ.ಕಕ್ಕಿಲ್ಲಾಯ ಮತ್ತು ಶಾಂತಾರಾಮ ಪೈಯವರನ್ನು ಬಂಧಿಸಲಾಯಿತು. ಆದರೆ ಬಂಧನ ತಪ್ಪಿಸಿ ಭೂಗತರಾಗಿದ್ದ ಅಂದಿನ ಕಾರ್ಯದರ್ಶಿ ಸಿಂಪ್ಸನ್ ಸೋನ್ಸ್ ಅವರು ಕಾರ್ಮಿಕರ ಜತೆಗಿದ್ದು ಮಾರ್ಗದರ್ಶನ ನೀಡಿದರು. ಕಾಮ್ರೇಡ್ ಎ. ಕೃಷ್ಣಶೆಟ್ಟಿ ಮತ್ತು ಬಿ. ಕೊರಗಪ್ಪ ರೈಯವರ ನೇತೃತ್ವದಲ್ಲಿ ಮುಷ್ಕರ ಮುಂದುವರಿಯಿತು. ಈ ಮುಷ್ಕರವು 37 ದಿನಗಳ ಕಾಲ ನಡೆಯಿತು. ಕೊನೆಗೆ ಅಂದಿನ ಜಿಲ್ಲಾ ಕಲೆಕ್ಟರ್ ಸೋಂಡರ್ಸ್ ಅವರು ಮಧ್ಯ ಪ್ರವೇಶ ಮಾಡಿ, ಮಾಲಿಕರ ಮತ್ತು ಕಾರ್ಮಿಕರ ಪ್ರತಿನಿಧಿಗಳ ಜತೆಗೆ ಮಾತುಕತೆ ನಡೆಸಿದ ಪರಿಣಾಮವಾಗಿ, ಕಾರ್ಮಿಕರಿಗೆ 3 ತಿಂಗಳ ಬೋನಸ್, ಫ್ಯಾಕ್ಟರಿ ಕಾನೂನು ಪ್ರಕಾರ ವರ್ಷಕ್ಕೆ 10 ದಿನಗಳ ಸಂಬಳ ಸಹಿತ ರಜೆ, ಕಂಟ್ರಾಕ್ಟ್ ಪದ್ಧತಿಯ ರದ್ದತಿ, ಕ್ಯಾಂಟೀನ್ ಸವಲತ್ತು, ಮೂಲ ಕೂಲಿಯಲ್ಲಿ ಅರ್ಧಾಣೆ (3 ಪೈಸೆ) ಹೆಚ್ಚಳ ಹಾಗೂ ಬೆಲೆ ಸೂಚ್ಯಾಂಕದ ಪ್ರಕಾರ ತುಟ್ಟಿಭತ್ತೆ ನೀಡಲು ಮಾಲಿಕರು ಒಪ್ಪಿದರು.

1948ರ ಮೇ ತಿಂಗಳಲ್ಲಿ ದೇಶಾದ್ಯಂತ ಕಾರ್ಮಿಕ ಸಂಘಟನೆಗಳ ಮೇಲೆ ತೀವ್ರ ದಬ್ಬಾಳಿಕೆ ಆರಂಭವಾದಾಗ, ಹಂಚಿನ ಕಾರ್ಮಿಕರ ಸಂಘದ ಮೇಲೆ ಕೂಡಾ ಕಾಂಗ್ರೆಸ್ ಸರಕಾರದ ಪೋಲೀಸರು ದಾಳಿ ಮಾಡಿದರು. ಕಾರ್ಮಿಕ ಮುಖಂಡರಾದ ಎ.ಕೃಷ್ಣ ಶೆಟ್ಟಿ, ಬಿ.ವಿ.ಕಕ್ಕಿಲ್ಲಾಯ, ಶಾಂತಾರಾಮ ಪೈ, ಕೆ. ಮೋನಪ್ಪ ಶೆಟ್ಟಿ ಮೊದಲಾದವರನ್ನು ಬಂಧಿಸಿ ಜೈಲಿಗೆ ಹಾಕಲಾಯಿತು. ಸಂಘದ ಕಚೇರಿಯನ್ನು ಆಕ್ರಮಿಸಿ ಕಾಗದ ಪತ್ರಗಳನ್ನೂ ಅಮೂಲ್ಯವಾದ ಪುಸ್ತಕಗಳನ್ನೂ ಪೋಲೀಸರು ಕೊಂಡು ಹೋದರು. ಸಂಘದ ಕಚೇರಿಗೆ ಬೀಗ ಜಡಿದರು. ಆದರೂ ಕಾರ್ಯಕರ್ತರು ಎದೆಗುಂದದೆ ಭೂಗತ ಚಟುವಟಿಕೆಗಳ ಮೂಲಕ ಸಂಘವನ್ನು ಬೆಳೆಸಿದರು. ಜೈಲಿನಿಂದ ಹೊರಗಿದ್ದ ಏಕ ಮಾತ್ರ ಮುಖಂಡರಾಗಿದ್ದ ಕಾಮ್ರೇಡ್ ಬಿ. ನಾರಾಯಣನವರು 1949ರ ಆಗಸ್ಟ್ ತಿಂಗಳಲ್ಲಿ ಮಂಗಳೂರಿನ ಮಾರ್ನಮಿ ಕಟ್ಟೆಯಲ್ಲಿ ಸಂಘದ ಹೊಸ ಕಚೇರಿಯನ್ನು ಆರಂಭಿಸಿದರು. ಸಭೆ ಸೇರುವುದನ್ನು ನಿಷೇಧಿಸಲಾಗಿತ್ತಾದರೂ, ಈ ಕಾಲಾವಧಿಯಲ್ಲಿ ಕಾರ್ಮಿಕರು 4 ಸಲ ಸಭೆ ಸೇರಿದರು. ಪೋಲೀಸರ ಕಣ್ಣು ತಪ್ಪಿಸಲು ಸಭೆ ಇಂತಿಂತಹ ಸ್ಥಳದಲ್ಲಿ ನಡೆಯುತ್ತದೆಂದು ಪ್ರಚಾರ ಮಾಡಿ, ಬೇರೊಂದು ಕಡೆಯಲ್ಲಿ ಗುಪ್ತವಾಗಿ ಸಭೆ ನಡೆಸಲಾಗುತ್ತಿತ್ತು. ಪೋಲೀಸರು ಮೊದಲು ಘೋಷಿಸಿದ ಸ್ಥಳಕ್ಕೆ ಹೋಗಿ ಕಾದು, ಆ ನಂತರ ಹುಡುಕುತ್ತಾ ಸಭೆಯ ಸ್ಥಳಕ್ಕೆ ತಲಪುವ ಹೊತ್ತಿಗೆ ಸಭೆ ಮುಕ್ತಾಯದ ಹಂತದಲ್ಲಿರುತ್ತಿತ್ತು. 1949ರ ಮೇ ದಿನವನ್ನೂ ಇದೇ ರೀತಿಯಲ್ಲಿ ಆಚರಿಸಲಾಗಿತ್ತು. ಇಂತಹ ಪ್ರತೀ ಸಂದರ್ಭದಲ್ಲೂ ಕಾರ್ಮಿಕ ಮುಖಂಡರನ್ನು ಬಂಧಿಸಿ 15 ದಿನಗಳ ಕಾಲ ಜೈಲಿನಲ್ಲಿ ಹಾಕಲಾಗಿತ್ತು.

ಸ್ಮರಣೀಯ ಕಾರ್ಯಾಚರಣೆ

ಈ ಸಮಯದಲ್ಲಿ ನಡೆದ ಒಂದು ಸಮರಶೀಲ ಕಾರ್ಯಾಚರಣೆಯನ್ನು ಇಲ್ಲಿ ಉಲ್ಲೇಖಿಸುವುದು ಪ್ರಸ್ತುತವಾಗಬಹುದು. ಭೂಗತರಾಗಿದ್ದ ಕಾರ್ಮಿಕ ಮುಂದಾಳು ಎಸ್.ಎನ್. ಹೊಳ್ಳರನ್ನು ಪೊಲೀಸರು ಬಂಧಿಸಿ, ಕಣ್ಣಾನೂರಿಗೆ ಕೊಂಡು ಹೋಗಲು ಮದ್ರಾಸ್ ಮೈಲ್‌ನಲ್ಲಿ ಮಂಗಳೂರು ರೈಲ್ವೇ ನಿಲ್ದಾಣದಿಂದ ಹೊರಟರು. ಮಂಗಳೂರಿನ ಕಾರ್ಮಿಕರು ತಮ್ಮ ನೆಚ್ಚಿನ ನಾಯಕನನ್ನು ಪೊಲೀಸರಿಂದ ಬಿಡಿಸಿ ತರಬೇಕೆಂದು ತೀರ್ಮಾನಿಸಿದರು. ಹೊಳ್ಳರನ್ನು ಕೊಂಡು ಹೋಗುತ್ತಿದ್ದ ರೈಲಿನಲ್ಲೇ ಕೆಲವು ಕಾರ್ಮಿಕರು ಪ್ರಯಾಣ ಮಾಡಿದರು. ರೈಲು ಮಂಜೇಶ್ವರ ನಿಲ್ದಾಣಕ್ಕೆ ತಲಪಿದಾಗ, ಹೊಳ್ಳರು ಕುಳಿತಿದ್ದ ಕಂಪಾರ್ಟ್‌ಮೆಂಟಿಗೆ ಒಮ್ಮಿಂದೊಮ್ಮೆಗೇ ನುಗ್ಗಿದ ಕಾರ್ಯಕರ್ತರು, ಹೊಳ್ಳರ ಅಕ್ಕ ಪಕ್ಕದಲ್ಲಿ ಕುಳಿತಿದ್ದ ಪೊಲೀಸರಿಗೆ ಚಾಕು ತೋರಿಸಿ, ಕ್ಷಣ ಮಾತ್ರದಲ್ಲಿ ಹೊಳ್ಳರನ್ನು ಎತ್ತಿ, ಪ್ಲಾಟ್ ಫಾರಂನಲ್ಲಿ ಸಿದ್ಧರಾಗಿ ನಿಂತಿದ್ದ ಇತರ ಕಾರ್ಯಕರ್ತರ ಕೈಗಳಿಗೆ ಎಸೆದರು. ಕೈ ಕೋಳ ತೊಡಿಸಲ್ಪಟ್ಟಿದ್ದ ಹೊಳ್ಳರನ್ನು ಹಾಗೆಯೇ ಎತ್ತಿಕೊಂಡು ಕಾರ್ಯಕರ್ತರು ಶರವೇಗದಿಂದ ಓಡಿ ಮಾಯವಾದರು.

ಈ ಘಟನೆ ನಡೆದ ಬೆನ್ನಲ್ಲೇ ಪೊಲೀಸರು ಮಂಗಳೂರಿನ ಬೋಳಾರ ಪ್ರದೇಶದಲ್ಲಿ ಮನೆ ಮನೆಗೆ ನುಗ್ಗಿ ಕಾರ್ಮಿಕರನ್ನು ಅಮಾನುಷವಾಗಿ ಹೊಡೆದರು. ಆದರೆ ಹೊಳ್ಳರು ಎಲ್ಲೆಂದು ಯಾರೂ ಬಾಯಿ ಬಿಡಲಿಲ್ಲ.

ಹೆಚ್ಚಿನ ಮುಂದಾಳುಗಳು ಜೈಲಿನಲ್ಲಿದ್ದ ಹಾಗೂ ಸರಕಾರದ ದಬ್ಬಾಳಿಕೆಯನ್ನು

ಭೂಗತರಾಗಿದ್ದ ಕಾರ್ಮಿಕ ಮುಂದಾಳು ಎಸ್.ಎನ್. ಹೊಳ್ಳರನ್ನು ಪೊಲೀಸರು ಬಂಧಿಸಿ, ಕಣ್ಣಾನೂರಿಗೆ ಕೊಂಡು ಹೋಗಲು ಮದ್ರಾಸ್ ಮೈಲ್‌ನಲ್ಲಿ ಮಂಗಳೂರು ರೈಲ್ವೇ ನಿಲ್ದಾಣದಿಂದ ಹೊರಟರು. ಮಂಗಳೂರಿನ ಕಾರ್ಮಿಕರು ತಮ್ಮ ನೆಚ್ಚಿನ ನಾಯಕನನ್ನು ಪೊಲೀಸರಿಂದ ಬಿಡಿಸಿ ತರಬೇಕೆಂದು ತೀರ್ಮಾನಿಸಿದರು. ಹೊಳ್ಳರನ್ನು ಕೊಂಡು ಹೋಗುತ್ತಿದ್ದ ರೈಲಿನಲ್ಲೇ ಕೆಲವು ಕಾರ್ಮಿಕರು ಪ್ರಯಾಣ ಮಾಡಿದರು. ರೈಲು ಮಂಜೇಶ್ವರ ನಿಲ್ದಾಣಕ್ಕೆ ತಲಪಿದಾಗ, ಹೊಳ್ಳರು ಕುಳಿತಿದ್ದ ಕಂಪಾರ್ಟ್‌ಮೆಂಟಿಗೆ ಒಮ್ಮಿಂದೊಮ್ಮೆಗೇ ನುಗ್ಗಿದ ಕಾರ್ಯಕರ್ತರು, ಹೊಳ್ಳರ ಅಕ್ಕ ಪಕ್ಕದಲ್ಲಿ ಕುಳಿತಿದ್ದ ಪೊಲೀಸರಿಗೆ ಚಾಕು ತೋರಿಸಿ, ಕ್ಷಣ ಮಾತ್ರದಲ್ಲಿ ಹೊಳ್ಳರನ್ನು ಎತ್ತಿ ಪ್ಲಾಟ್ ಫಾರಂನಲ್ಲಿ ಸಿದ್ಧರಾಗಿ ನಿಂತಿದ್ದ ಇತರ ಕಾರ್ಯಕರ್ತರ ಕೈಗಳಿಗೆ ಎಸೆದರು. ಕೈ ಕೋಳ ತೊಡಿಸಲ್ಪಟ್ಟಿದ್ದ ಹೊಳ್ಳರನ್ನು ಹಾಗೆಯೇ ಎತ್ತಿಕೊಂಡು ಕಾರ್ಯಕರ್ತರು ಶರವೇಗದಿಂದ ಓಡಿ ಮಾಯವಾದರು.

ಈ ಘಟನೆ ನಡೆದ ಬೆನ್ನಲ್ಲೇ ಪೊಲೀಸರು ಮಂಗಳೂರಿನ ಬೋಳಾದ ಪ್ರದೇಶದಲ್ಲಿ ಮನೆ ಮನೆಗೆ ನುಗ್ಗಿ ಕಾರ್ಮಿಕರನ್ನು ಅಮಾನುಷವಾಗಿ ಹೊಡೆದರು. ಆದರೆ ಹೊಳ್ಳರು ಎಲ್ಲೆಂದು ಯಾರೂ ಬಾಯಿ ಬಿಡಲಿಲ್ಲ.

ಸೂಕ್ತ ಕ್ರಮ ಕೈಗೊಂಡರೆ ಈ ಉದ್ಯಮ ಉಳಿಯಲು ಸಹಾಯಕವಾಗಬಹುದು.

ಕಟ್ಟಡದ ಒಳಭಾಗವನ್ನು ತಂಪಾಗಿಡಲು ಮತ್ತು ಮಾಡುಗಳು ಸೋರುವುದನ್ನು ತಪ್ಪಿಸಲು, ಕಾಂಕ್ರೀಟ್ ಮಾಡುಗಳ ಮೇಲೆ ಹಂಚು ಹೊದಿಸಬೇಕೆಂಬ ನಿಯಮವನ್ನು ಗೋವಾದಲ್ಲಿ ಅಲ್ಲಿನ ರಾಜ್ಯ ಸರಕಾರ ಜಾರಿ ಮಾಡುತ್ತಿದೆ. ಕರ್ನಾಟಕ ಸರಕಾರವೂ ಇಂತಹ ಕ್ರಮವನ್ನು ಅನುಸರಿಸಿದರೆ ಕನಿಷ್ಟಪಕ್ಷ ಸರಕಾರದಿಂದ ನಿರ್ಮಿಸಲ್ಪಡುವ ಎಲ್ಲಾ ಹೊಸ ಕಟ್ಟಡಗಳ ಮಾಡುಗಳಿಗೆ ಹಂಚು ಹೊದಿಸುವಂತೆ ಮಾಡಬಹುದು.

ಜನತಾ ಮನೆಗಳು ಎಂದು ಕರೆಯಲ್ಪಡುವ ಆಶ್ರಯಯೋಜನೆ, ನೆರಳುಭಾಗ್ಯ ಇತ್ಯಾದಿ ಕಡಿಮೆ ವೆಚ್ಚದ ವಸತಿ ಯೋಜನೆಗಳು ಕಳೆದ ಕೆಲವು ವರ್ಷಗಳಲ್ಲಿ ಬಹುತೇಕ ಸ್ಥಗಿತವಾದದ್ದು ಹಂಚುಗಳ ಬೇಡಿಕೆ ಕಡಿಮೆಯಾಗಲು ಪ್ರಮುಖ ಕಾರಣವಾಗಿದೆ. ಈ ಯೋಜನೆಗಳಿಗೆ ಸರಕಾರವು ಸಾಕಷ್ಟು ಹಣ ಬಿಡುಗಡೆ ಮಾಡಿದರೆ ಹಂಚುಗಳಿಗೆ ಸಾಕಷ್ಟು ಬೇಡಿಕೆ ಬರುವ ಸಾಧ್ಯತೆಗಳಿವೆ.

ಹಂಚು ಕೈಗಾರಿಕೆಗೆ ಸರಕಾರವು ಹಿಂದೆ ನೀಡುತ್ತಿದ್ದ ರಿಯಾಯಿತಿಗಳನ್ನು ಇತ್ತೀಚಿನ ವರ್ಷಗಳಲ್ಲಿ ಹಿಂತೆಗೆಯುತ್ತಾ ಬಂದಿದೆ. ಉರುವಲು ಕಟ್ಟಿಗೆ, ಸೀಮೆಎಣ್ಣೆ, ಡೀಸಿಲ್, ವಿದ್ಯುಚ್ಛಕ್ತಿ ಇತ್ಯಾದಿ ಗಳನ್ನು ಹಿಂದಿನಂತೆ ಸರಕಾರವು ರಿಯಾಯ್ತಿ ದರಗಳಲ್ಲಿ ಒದಗಿಸಿದರೆ ಈ ಕೈಗಾರಿಕೆಯನ್ನು ಸದ್ಯದ ಬಿಕ್ಕಟಿನಿಂದ ಪಾರು ಮಾಡುವಲ್ಲಿ ಸಹಾಯಕವಾಗಬಹುದು.

ಹಂಚಿನ ಮನೆಕಟ್ಟಲು ಪಕ್ಕಾಸು, ರೀಪು ಇತ್ಯಾದಿ ಸಲಕರಣೆಗಳಿಗೆ ದೊಡ್ಡ ಪ್ರಮಾಣದಲ್ಲಿ ಮರಮಟ್ಟುಗಳು ಬೇಕಾಗುತ್ತವೆ. ಇವುಗಳು ಈಗ ವಿಪರೀತ ತುಟ್ಟಿಯಾಗಿರುವುದೂ, ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿಲ್ಲದಿರುವುದೂ ದೊಡ್ಡ ಅಡಚಣೆಯಾಗಿದೆ. ಇವುಗಳಿಗೆ ಬದಲಿ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಾಗಿದೆ.

ಒಂದೆಡೆ ಹೆಂಚಿನ ಕಾರ್ಖಾನೆಗಳು ಬಿಕ್ಕಟ್ಟನ್ನು ಎದುರಿಸಲಾಗದೆ ಮುಚ್ಚುತ್ತಿರುವಾಗಲೇ, ಇನ್ನೊಂದೆಡೆ ಹೊಸ ಕಾರ್ಖಾನೆಗಳು ತಲೆ ಎತ್ತುತ್ತಿವೆ. ಹೊಸ ಕಾರ್ಖಾನೆಗಳಿಗೆ ಐದು ವರ್ಷಗಳ ಕಾಲ ತೆರಿಗೆ ವಿನಾಯಿತಿ ಇರುವುದರಿಂದ ಇವುಗಳು ಕಡಿಮೆ ವೆಚ್ಚದಲ್ಲಿ ಉತ್ಪಾದನೆ ಮಾಡಿ ಮಾರುಕಟ್ಟೆಯಲ್ಲಿ ಇತರರೊಂದಿಗೆ ಸ್ಪರ್ಧಿಸುತ್ತವೆ. ಆದರೆ ಐದು ವರ್ಷಗಳ ನಂತರ ಅವುಗಳು ಬಿಕ್ಕಟ್ಟಿನ ಭಾರವನ್ನು ತಾಳಲಾರದೆ ಕುಸಿಯುತ್ತವೆ. ಇದರಿಂದಾಗಿ ಕಾರ್ಮಿಕರು ತೀವ್ರ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಹೊಸ ಹೆಂಚಿನ ಕಾರ್ಖಾನೆಗಳಿಗೆ ಸರಕಾರ ಅನುಮತಿ ನೀಡಬಾರದು.

ದೇಶದ ವಿವಿದ ಭಾಗಗಳಲ್ಲಿರುವ ಹೆಂಚಿನ ಕಾರ್ಖಾನೆಗಳಲ್ಲಿ ಕಾರ್ಮಿಕರು ಸಂಘಟಿತರಾಗಿಲ್ಲದಿರುವುದೂ ಈ ಕೈಗಾರಿಕೆಯ ಬಿಕ್ಕಟ್ಟಿನ ಕಾರಣಗಳಲ್ಲೊಂದು. ಉದಾಹರಣೆಗೆ, ಗುಜರಾತಿನ ಮೋರ್ವಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಬೃಹತ್ ಪ್ರಮಾಣದಲ್ಲಿ ಹೆಂಚು ತಯಾರಾಗುತ್ತಿದೆ. ಅಲ್ಲಿ ಕಾರ್ಮಿಕರ ಸಂಘಟನೆ ಇಲ್ಲದಿರುವುದರಿಂದ ಕಾರ್ಮಿಕರ ಕೂಲಿ ತೀರಾ ಕಡಿಮೆ ಇದೆ. ಇದರ ಪರಿಣಾಮವಾಗಿ ಉತ್ಪಾದನಾ ವೆಚ್ಚ ತುಂಬಾ ಕಡಿಮೆ.

ಅಲ್ಲಿನ ಮಾಲಕರು ಹೆಂಚನ್ನು ಒಂದು ಸಾವಿರಕ್ಕೆ ರೂ.1800 ರಷ್ಟು ನಿಕೃಷ್ಟ ಬೆಲೆಗೆ ಮಾರಾಟ ಮಾಡಲು ಸಾಧ್ಯವಾಗುತ್ತದೆ. ಇತ್ತೀಚಿನ ಹಿಂಜರಿತಕ್ಕಿಂತ ಮೊದಲು ಮಂಗಳೂರಿನಲ್ಲಿ ಒಂದು ಸಾವಿರ ಹಂಚುಗಳಿಗೆ ರೂಪಾಯಿ 4200 ರಿಂದ 4400 ಹಾಗೂ ಉಡುಪಿ - ಕುಂದಾಪುರ ಮೊದಲಾದೆಡೆಗಳಲ್ಲಿ 3500 ಇದ್ದಿತು. ಹೀಗಾಗಿ ಉತ್ತರ ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಗುಜರಾತಿನ ಹಂಚು ಸರಬರಾಜಾಗುತ್ತಿದೆ.

ಉತ್ಪನ್ನಗಳ ವೈವಿಧ್ಯೀಕರಣ

ಹಂಚಿನ ಕಾರ್ಖಾನೆಗಳಲ್ಲಿ ಮೇಲ್‌ಛಾವಣಿಗೆ ಹೊದಿಸುವ ಹಂಚು ಮಾತ್ರವಲ್ಲದೆ ಇತರ ಅನೇಕ ಉತ್ಪನ್ನಗಳೂ ತಯಾರಾಗುತ್ತವೆ. ಗೋಡೆಕಟ್ಟುವ ಸಾಮಾನ್ಯ ಇಟ್ಟಿಗೆ, ಟೊಳ್ಳು ಇಟ್ಟಿಗೆ (ಹಾಲೋಬ್ರಿಕ್), ಗೋಡೆಗಳನ್ನು ಸಿಂಗರಿಸುವ ಅಲಂಕಾರಿಕ ಹಂಚುಗಳು, ಇತ್ಯಾದಿಗಳಲ್ಲದೆ ಕಾಂಕ್ರೀಟ್ ಸ್ಲ್ಯಾಬ್‌ಗಳಿಗೆ ಬದಲಿಯಾಗಿ ಉಪಯೋಗಿಸಬಲ್ಲ ಟೊಳ್ಳು ಇಟ್ಟಿಗೆಗಳೂ ಕೆಲವು ಕಾರ್ಖಾನೆಗಳಲ್ಲಿ ತಯಾರಾಗುತ್ತವೆ. ಈ ಇಟ್ಟಿಗೆಗಳಿಂದ ನಿರ್ಮಿಸಲ್ಪಡುವ ಮಾಡುಗಳು ಸುದೃಢವಾಗಿರುತ್ತವೆ ಮಾತ್ರವಲ್ಲದೆ, ಮನೆಯೊಳಗೆ ಹವಾ ನಿಯಂತ್ರಣವನ್ನು ಒದಗಿಸುವ ವಿಶೇಷ ಗುಣವನ್ನು ಅವುಗಳು ಹೊಂದಿರುತ್ತವೆ. ಕಾರ್ಖಾನೆಗಳಲ್ಲಿ ತಯಾರಾಗುವ ಇಟ್ಟಿಗೆಗಳು ತುಂಬಾ ನಾಜೂಕಾಗಿರುವುದರಿಂದ, ಅವುಗಳನ್ನು ಸುಂದರವಾಗಿ ಜೋಡಿಸಿ ಗೋಡೆ ಕಟ್ಟಿದರೆ ಅದೇ ಒಂದು ಅಲಂಕಾರವಾಗಿ, ಗೋಡೆಯ ಮೇಲೆ ಗಾರೆ ಮಾಡುವ ಅಗತ್ಯ ಕೂಡಾ ಇರುವುದಿಲ್ಲ. ಈ ರೀತಿ ವೈವಿಧ್ಯಮಯ ಉತ್ಪನ್ನಗಳನ್ನು ಬೃಹತ್ ಪ್ರಮಾಣದಲ್ಲಿ ತಯಾರಿಸಲು ಹಂಚಿನ ಕಾರ್ಖಾನೆಗಳು ಆರಂಭಿಸಿದರೆ, ಈ ಕೈಗಾರಿಕೆ ತನ್ನದೇ ಆದ ಶಾಶ್ವತ ನೆಲೆಯನ್ನು ಭದ್ರಗೊಳಿಸಿಕೊಳ್ಳಬಲ್ಲದು.

ಸರಕಾರ ಎಚ್ಚರಗೊಳ್ಳಲಿ

ರಾಜ್ಯ ಸರಕಾರವು ಕೂಡಲೇ ಎಚ್ಚೆತ್ತು ಈ ಕೈಗಾರಿಕೆಗೆ ರಕ್ಷಣೆ ನೀಡಬೇಕು. ಹಂಚು ಕಾಲ ಬಾಧಿತವಲ್ಲ. ಕಟ್ಟಡ ನಿರ್ಮಾಣದಲ್ಲಿ ಯಾವುದೇ ಫ್ಯಾಶನ್ ಬರಲಿ, ಆದರೆ ಹವಾಮಾನದ ತೀವ್ರತೆಗಳನ್ನು ಎದುರಿಸಿ, ಸೋರುವಿಕೆ ಇಲ್ಲದ, ತಂಪಾದ ವಸತಿಯನ್ನು ನೀಡಬಲ್ಲ ಶ್ರೇಷ್ಠವಾದ ಸಾಧನ ಹಂಚು. ಗೋವಾದಂತೆ ಕರ್ನಾಟಕ ಸರಕಾರವೂ ಕಾಂಕ್ರೀಟ್ ಕಟ್ಟಡಗಳಿಗೆ ಹಂಚಿನ ಮೇಲು ಹೊದಿಕೆಯನ್ನು ಕಡ್ಡಾಯಗೊಳಿಸಿ, ಈ ಕೈಗಾರಿಕೆಗೆ ಸೂಕ್ತ ರಿಯಾಯಿತಿಗಳನ್ನೂ ರಕ್ಷಣೆಗಳನ್ನೂ ನೀಡಿದರೆ, ಹಂಚು ಉದ್ಯಮವು ಸದ್ಯಕ್ಕೆ ಮಾತ್ರವಲ್ಲದೆ ಶಾಶ್ವತವಾಗಿಯೂ ಉಳಿಯಬಲ್ಲದು.

...ೀ ಪ್ರಸಿದ್ಧವಾದ ಹಂಚು ಒಂದು ಅದ್ಭುತವಾದ ...ಂದು ವಿಶಿಷ್ಟ ಆಕರ್ಷಣೆಯೂ ...ಕ್ಕಟ್ಟಿನಲ್ಲಿದೆ. ಈ ಉದ್ದಿಮೆಯ ... ಈ ಬಿಕ್ಕಟ್ಟಿಗೆ ಕಾರಣಗಳೇನು, ...ರಾಜ್ಯದ ಹಿರಿಯ ಕಾರ್ಮಿಕ ...ರವರು ಇಲ್ಲಿ ಪರಿಶೀಲಿಸಿದ್ದಾರೆ.



...ಹಾಸದಲ್ಲಿ ಒಂದು ಉಜ್ವಲ ಅಧ್ಯಾಯವನ್ನು ...ಂದು ಇಣುಕು ನೋಟವನ್ನು ಇಲ್ಲಿ ನಮಗೆ

ಉಪಯೋಗಿಸಿಕೊಂಡ ಹಂಚು ಕಾರ್ಖಾನೆಗಳ ಮಾಲಿಕರು, ಹಿಂದೆ ಹೋರಾಟದ ಪರಿಣಾಮವಾಗಿ ರದ್ದಾಗಿದ್ದ ಕಂಟ್ರಾಕ್ಟ್ ಪದ್ಧತಿಯನ್ನು ಮರಳಿ ಜಾರಿಗೆ ತಂದರು. ಕ್ಯಾಂಟೀನುಗಳನ್ನು ಮುಚ್ಚಲಾಯಿತು.

ಜೈಲಿನಲ್ಲಿದ್ದ ಮುಖಂಡರನ್ನು 1951ರಲ್ಲಿ ಬಿಡುಗಡೆ ಮಾಡಲಾಯಿತು. ಆರು ವರ್ಷಗಳಿಂದ ಕೊಡುತ್ತಾ ಬಂದಿದ್ದ ಬೋನಸ್ಸನ್ನು 1952-53ನೇ ವರ್ಷಕ್ಕೆ ಕೊಡುವುದಿಲ್ಲವೆಂದು ಮಾಲಿಕರು ಕಾರ್ಮಿಕರ ಸಂಘಕ್ಕೆ ತಿಳಿಸಿದರು. ಹಂಚಿನ ಕಾರ್ಮಿಕರ ಪ್ರತಿನಿಧಿಗಳು ಸಭೆಸೇರಿ, ಬೋನಸ್ಸಿಗಾಗಿ ಮುಷ್ಕರ ನಡೆಸಲು ತೀರ್ಮಾನಿಸಿದರು. 1954ರ ಜನವರಿ 25 ರಂದು ಮುಷ್ಕರ ಆರಂಭವಾಯಿತು. ಮುಷ್ಕರ ಮುರಿಯಲು ಮಾಲಿಕರು ಗೂಂಡಾಗಳನ್ನು ಬಳಸಿದರು. ಮುಷ್ಕರ ನಿರತ ಕಾರ್ಮಿಕರಿಗೂ ಮಾಲಿಕರ ಗೂಂಡಾಗಳಿಗೂ ಘರ್ಷಣೆಗಳು ನಡೆದವು. ಇಂತಹ ಒಂದು ಘರ್ಷಣೆಯಲ್ಲಿ 1954ರ ಜನವರಿ 28ರಂದು ಒಬ್ಬ ಗೂಂಡಾ ಮೃತನಾದ. ಈ ಘಟನೆಯ ನಂತರ ಕಾರ್ಮಿಕರ ಮೇಲೆ ಪೊಲೀಸ್ ದೌರ್ಜನ್ಯಗಳು ತೀವ್ರಗೊಂಡವು. ಹಂಚಿನ ಕಾರ್ಮಿಕರನ್ನು ಮಾತ್ರವಲ್ಲದೆ ಅವರ ಹೋರಾಟಕ್ಕೆ ಸಕ್ರಿಯ ಸಹಕಾರ ನೀಡುತ್ತಿದ್ದ ಇತರ ಕಾರ್ಮಿಕರನ್ನೂ ಬಂಧಿಸಿ ಮೊಕದ್ದಮೆ ಹೂಡಲಾಯಿತು.

ಕಾರ್ಮಿಕ ಮುಖಂಡರಾಗಿದ್ದ ಎ.ಕೃಷ್ಣಶೆಟ್ಟಿ, ಬಿ. ಕೊರಗಪ್ಪರೈ, ವಾಮನ್ ಕೊಡಿಯಾಲ್ ಬೈಲ್ ಮತ್ತು ಸಿಂಪ್ಸನ್ ಸೋನ್ಸ್‌ರನ್ನು ಬಂಧಿಸಿ ಜೈಲಿನಲ್ಲಿರಿಸಲಾಗಿತ್ತು. ವಿಚಾರಣೆಯ ವಿವಿಧ ಹಂತಗಳಲ್ಲಿ ಮೊದಲಿನ ಮೂವರು ಮುಖಂಡರನ್ನು ಬಿಡುಗಡೆ ಮಾಡಲಾಯಿತು. ಸಿಂಪ್ಸನ್ ಸೋನ್ಸ್ ಮತ್ತು ಕೈಮಗ್ಗದ ಕಾರ್ಮಿಕರಾದ ಮುತ್ತಪ್ಪ ಕರ್ಕೇರ ಮತ್ತು ವೆಂಕಪ್ಪ ಬಂಗೇರ ಹಾಗೂ ಬಂದರು ಕಾರ್ಮಿಕನಾದ ಬಾಬು ಎಂಬುವರ ಮೇಲೆ ಸೆಶನ್ಸ್ ವಿಚಾರಣೆ ಮುಂದುವರಿಯಿತು. ಅಂತಿಮವಾಗಿ ಸೆಶನ್ಸ್ ನ್ಯಾಯಾಲಯವು ಮುತ್ತಪ್ಪ ಕರ್ಕೇರ, ವೆಂಕಪ್ಪ ಬಂಗೇರ ಮತ್ತು ಬಾಬು ಈ ಮೂವರಿಗೆ ಮರಣ ದಂಡನೆ ವಿಧಿಸಿತು. ಈ ತೀರ್ಪಿನ ವಿರುದ್ಧ ಮದ್ರಾಸು ಹೈಕೋರ್ಟಿನಲ್ಲಿ ಮೇಲ್ಮನವಿ ಮಾಡಲಾಗಿ, ಹೈಕೋರ್ಟು ಅವರನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿತು. ಈ ಮೊಕದ್ದಮೆಯಲ್ಲಿ ಆಪಾದಿತ ಕಾರ್ಮಿಕರ ಪರವಾಗಿ ಪ್ರಸಿದ್ಧ ನ್ಯಾಯವಾದಿಗಳಾಗಿದ್ದ ವಿ. ಆರ್. ಕೃಷ್ಣ ಅಯ್ಯರ್, ರಂಗರಾವ್ ತಲಚೇರಿಕರ್ ಮತ್ತು ಜಿ. ಸೋಮಶೇಖರ ರಾವ್ ವಾದಿಸಿದ್ದರು.

ಬೋನಸ್ಸಿನ ವಿವಾದವನ್ನು ಕೈಗಾರಿಕಾ ಟ್ರಿಬ್ಯೂನಲಿಗೆ ಒಪ್ಪಿಸಿದುದರಿಂದ 9 ದಿನಗಳಲ್ಲಿ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು. ಒಂದು ವರ್ಷದ ನಂತರ ವಿವಾದವು ಟ್ರಿಬ್ಯೂನಲಿನಲ್ಲಿ ತೀರ್ಮಾನವಾಗಿ, ಹಲವು ಕಾರ್ಖಾನೆಗಳಲ್ಲಿ 3 ತಿಂಗಳ ಬೋನಸ್ ಮತ್ತು ಇನ್ನು ಕೆಲವು ಕಾರ್ಖಾನೆಗಳಲ್ಲಿ ಲಾಭದ ದಾಮಾಶಯದಲ್ಲಿ ಬೋನಸ್ ನೀಡಲಾಯಿತು.

ಸಮರಶೀಲ ಹೋರಾಟಗಳ ಭವ್ಯ ಪರಂಪರೆಯನ್ನು ಹಂಚಿನ ಕಾರ್ಮಿಕರು ಮುಂದುವರಿಸಿಕೊಂಡು, ತಮ್ಮ ಶ್ರೀಮಂತ ಅನುಭವಗಳ ಆಧಾರದಲ್ಲಿ ತಮ್ಮ ನೆಚ್ಚಿನ ಸಂಘಟನೆಯಾದ ಸೌತ್‌ಕೆನರಾ ಟೈಲ್ ವರ್ಕರ್ಸ್ ಯೂನಿಯನನ್ನು ಒಂದು ಶಿಸ್ತುಬದ್ಧ ಸೇನಾ ತುಕಡಿಯಂತೆ ಬೆಳೆಸಿಕೊಂಡು, ಪೋಷಿಸಿಕೊಂಡು ಬಂದಿದ್ದಾರೆ. ಉಜ್ವಲ ವರ್ಗ ಪ್ರಜ್ಞೆಯನ್ನು ಹೊಂದಿರುವ ಈ ಧೀರ ಕಾರ್ಮಿಕರು ದ.ಕ. ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರನ್ನೂ ಬಡರೈತರನ್ನೂ ಸಂಘಟಿಸಿ ಅವರ ಹೋರಾಟಗಳಿಗೆ ನೇತೃತ್ವ ನೀಡುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ, ರೈತ, ವಿದ್ಯಾರ್ಥಿ ಯುವಜನ ಚಳುವಳಿಗಳ ಆಶ್ರಯಧಾಮ - ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ನಿನ ಕಛೇರಿ. ಹಂಚು ಕಾರ್ಮಿಕರ ವಂತಿಗೆ ಮತ್ತು ಬಹುತೇಕ ಅವರ ಶ್ರಮದಾನದಿಂದಲೇ ನಿರ್ಮಿಸಲಾದ ಈ ಕಟ್ಟಡವು ತಾ. 30.3.1959 ರಂದು ಕಾರ್ಮಿಕ ವರ್ಗದ ಹಿರಿಯ ರಾಷ್ಟ್ರೀಯ ನಾಯಕ ದಿವಂಗತ ಕಾಂ. ಪಿ.ರಾಮಮೂರ್ತಿಯವರಿಂದ ಉದ್ಘಾಟಿಸಲ್ಪಟ್ಟಿತ್ತು.



ಹಂಚಿನ ಕಾರ್ಮಿಕರ ಬದುಕು

ಹಂಚಿನ ಕಾರ್ಮಿಕರ ಕೆಲಸ ತುಂಬಾ ಕಠಿಣ. ನಿರ್ದಿಷ್ಟ ಪ್ರಮಾಣದ ಉತ್ಪಾದನೆ (ಟಾಸ್ಕ್) ಮಾಡಿ ಮುಗಿಸಿದಾಗಲೇ ಒಂದು ದಿನದ ಕೆಲಸ ಪೂರ್ತಿಯಾಗುವುದು. ಪ್ರೆಸ್ ವಿಭಾಗದಲ್ಲಿ ಕೆಲಸ ಮಾಡುವವರು ಯಂತ್ರಕ್ಕೆ ಜೋಡಿಸಿದ ಮತ್ತೊಂದು ಯಂತ್ರವೆಂಬಂತೆ ಬಹಳಷ್ಟು ವೇಗವಾಗಿ ಕೆಲಸ ಮಾಡಬೇಕು. ಆವೆಯಲ್ಲಿ ಕೆಲಸ ಮಾಡುವವರು ವಿಪರೀತ ಬಿಸಿಯ ವಾತಾವರಣದಲ್ಲಿ ಕಾರ್ಯ ನಿರ್ವಹಿಸಬೇಕು. ಎಲ್ಲಾ ಕೆಲಸಗಳಲ್ಲೂ ಕಠಿಣ ದೈಹಿಕ ಶ್ರಮ ಅನಿವಾರ್ಯ.

ಸುಮಾರು 60 ವರ್ಷಗಳ ಸಂಘಟನೆ ಮತ್ತು ಹೋರಾಟಗಳ ನಂತರವೂ ಹಂಚಿನ ಕಾರ್ಮಿಕರ ಸರಾಸರಿ ಕೂಲಿ ದಿನಕ್ಕೆ 65 ರೂಪಾಯಿ ಮಾತ್ರ. ವಾರಕ್ಕೆ ಆರು ದಿನಗಳ ಕೆಲಸ-ವಾರದ ರಜೆಗೆ ವೇತನವಿಲ್ಲ. ದೂರದ ಹಳ್ಳಿಗಳಲ್ಲಿ ವಾಸ. ಅಲ್ಲಿಂದ ಬೆಳಿಗ್ಗೆ 5-30 ಅಥವಾ 6 ಗಂಟೆಗೆ ಹೊರಟು ಎಂಟು ಗಂಟೆಗೆ ಸಾಕಷ್ಟು ಮುಂಚಿತವಾಗಿಯೇ ಕಾರ್ಖಾನೆಗೆ ತಲುಪಬೇಕು. ಹಲವರು ದಿನಕ್ಕೆ ಹತ್ತು-ಹದಿನೈದು ರೂಪಾಯಿಗಳಷ್ಟು ಬಸ್ ಪ್ರಯಾಣಕ್ಕೆ ಖರ್ಚು ಮಾಡಬೇಕಾಗುತ್ತದೆ. ಇವರಲ್ಲಿ ಅನೇಕರು ಐದಾರು ಕಿಲೋ ಮೀಟರ್‌ಗಳಷ್ಟು ಗುಡ್ಡಗಾಡುಗಳಲ್ಲಿ ನಡೆದು ರಸ್ತೆಗೆ ತಲುಪಿದ ನಂತರವಷ್ಟೆ ಬಸ್ಸನ್ನು ಏರಬಲ್ಲರು.

ಮಂಗಳೂರಿನ ಹಂಚಿನ ಕಾರ್ಖಾನೆಗಳಲ್ಲಿ ಮಧ್ಯಾಹ್ನದ ಊಟದ ಒಂದು ವಿಶಿಷ್ಟ ವಿಧಾನವಿದೆ. ಪ್ರತಿಯೊಬ್ಬ ಕಾರ್ಮಿಕನೂ ಬೆಳಿಗ್ಗೆ ಬರುವಾಗ 200 ಗ್ರಾಂ ಅಕ್ಕಿ ತರುತ್ತಾರೆ. ಈ ಅಕ್ಕಿಯನ್ನು ಒಟ್ಟು ಸೇರಿಸಿ ಕಾರ್ಖಾನೆಯೊಳಗೆ ದೊಡ್ಡದೊಂದು ಕಡಾಯಿಯಲ್ಲಿ ಗಂಜಿ ಬೇಯಿಸುತ್ತಾರೆ. ಗಂಜಿ ಬೇಯುತ್ತಿರುವಾಗಲೇ ಅದರ ದಪ್ಪ ನೀರನ್ನು (ಮಂಗಳೂರಲ್ಲಿ ಈ ಗಂಜಿ ನೀರನ್ನು 'ತೆಳಿ' ಎನ್ನುತ್ತಾರೆ) ತೆಗೆದು ಕಾರ್ಮಿಕರು ಹಂಚಿಕೊಂಡು ಕುಡಿಯುತ್ತಾರೆ. ದಣಿದ ದೇಹಗಳಿಗೆ ಇದರಿಂದ ತುಸು ಉಲ್ಲಾಸ. ಮಧ್ಯಾಹ್ನ 12 ಗಂಟೆಗೆ ಗಂಜಿ ಊಟದ ಸಮಯ. ಬಿಸಿ ಬಿಸಿ ಗಂಜಿಯನ್ನು ಹಂಚಿಕೊಂಡು ತಾವು ಬೆಳಿಗ್ಗೆ ತಮ್ಮ ಮನೆಗಳಿಂದ ತಂದ ಪಲ್ಯದೊಂದಿಗೆ ಅದನ್ನು ಉಣ್ಣುತ್ತಾರೆ. ಕೆಲವೊಮ್ಮೆ ಪಲ್ಯವನ್ನು ತಮ್ಮೊಳಗೆ ಹಂಚಿಕೊಳ್ಳುತ್ತಾರೆ, ಇಲ್ಲವೇ ವಿನಿಮಯ ಮಾಡಿಕೊಳ್ಳುತ್ತಾರೆ.

ಹಂಚಿನ ಕಾರ್ಖಾನೆಗಳಲ್ಲಿ ಅಪಘಾತಗಳು ಸರ್ವ ಸಾಮಾನ್ಯ. ಯಂತ್ರಗಳಿಗೆ ಸಿಲುಕಿ ಕೈ ಬೆರಳುಗಳು ತುಂಡಾಗುವ ಘಟನೆಗಳು ಬಹಳಷ್ಟು ನಡೆದಿವೆ. ಆವೆ ಮಣ್ಣಿನ ರಾಶಿ ಮೈಮೇಲೆ ಬೀಳುವುದು, ಕಟ್ಟಿಗೆ ಸೀಳುವಾಗ ಗಾಯಗಳಾಗುವುದು ಮಾತ್ರವಲ್ಲದೆ, ಆವೆ ಮಣ್ಣಿನ ತಂಪಿನಲ್ಲಿ ಅಥವಾ ಹಂಚುಗಳ ಅಟ್ಟಿಗಳ ಮೇಲೆ ಆಶ್ರಯ ಪಡೆಯುವ ವಿಷಸರ್ಪದ ಕಡಿತವನ್ನೂ ಅನುಭವಿಸಿದ ಅನೇಕ ಘಟನೆಗಳಾಗಿವೆ. ಇಂತಹ ಸಂದರ್ಭಗಳಲ್ಲಿ ಇಎಸ್‌ಐ ಆಸ್ಪತ್ರೆಯಲ್ಲಿ ಸರಿಯಾದ ಚಿಕಿತ್ಸೆಯ ವ್ಯವಸ್ಥೆ ಇರುವುದಿಲ್ಲ. ಖಾಸಗಿ ಆಸ್ಪತ್ರೆಗಳಿಗೆ ಹೋದ ಸಂದರ್ಭಗಳಲ್ಲಿ ಅದರ ವೆಚ್ಚವನ್ನು ಮರುಪಾವತಿ ಮಾಡಲು ಸಾಮಾನ್ಯವಾಗಿ ಇಎಸ್‌ಐ ನಿರಾಕರಿಸುತ್ತದೆ.

ಬಿಕ್ಕಟ್ಟಿನ ಭಾರ ಕಾರ್ಮಿಕರ ಮೇಲೆ

ಹಂಚಿನ ಕೈಗಾರಿಕೆ ಎದುರಿಸುತ್ತಿರುವ ಬಿಕ್ಕಟ್ಟಿನ ಭಾರವನ್ನು ಕಾರ್ಮಿಕರ ಮೇಲೆ ಹೇರುವ ಸತತ ಪ್ರಯತ್ನಗಳನ್ನು ಮಾಲಿಕರು ಮಾಡುತ್ತಿದ್ದಾರೆ. ವೇತನ ಪರಿಷ್ಕರಣೆಗಾಗಿ ಕಾರ್ಮಿಕರು ಬೇಡಿಕೆ ಮಂಡಿಸುವಾಗ ಮಾಲಿಕರು ಉತ್ಪಾದನೆಯ ಪ್ರಮಾಣವನ್ನು ವಿಪರೀತವಾಗಿ ಏರಿಸುವ ಪ್ರಸ್ತಾವಗಳನ್ನು ಮುಂದಿಡುತ್ತಾರೆ. ಸಣ್ಣ ಪುಟ್ಟ ಕಾರಣಗಳಿಗಾಗಿ ಕಾರ್ಮಿಕರಿಗೆ ಕಿರುಕುಳ ನೀಡಲಾಗುತ್ತದೆ. ಕೆಲಸಕ್ಕೆ ರಾಜೀನಾಮೆ ಕೊಡುವಂತೆ ಕಾರ್ಮಿಕರ ಮೇಲೆ ಒತ್ತಡ ಹೇರುವುದು ಹೆಚ್ಚಾಗುತ್ತಿದೆ. ನಿವೃತ್ತ ಕಾರ್ಮಿಕರಿಗೆ ಗ್ರಾಚ್ಯುಯಿಟಿಯನ್ನು ಏಕಗಂಟಿನಲ್ಲಿ ಕೊಡದೆ ಸತಾಯಿಸುವ ಮಾಲಿಕರಿದ್ದಾರೆ. ಇಎಸ್‌ಐ ಮತ್ತು ಭವಿಷ್ಯನಿಧಿ ವಂತಿಗೆಗಳನ್ನು ಕಾರ್ಮಿಕರ ಕೂಲಿಯಿಂದ ಕಡಿತ ಮಾಡುತ್ತಾರಾದರೂ, ಅದನ್ನು ಆಯಾ ಸಂಸ್ಥೆಗಳಿಗೆ ಪಾವತಿ ಮಾಡಲು ತಿಂಗಳುಗಟ್ಟಲೆ ವಿಳಂಬ ಮಾಡುತ್ತಾರೆ. ಇದರಿಂದಾಗಿ ಕಾಯಿಲೆ ಬಿದ್ದ ಕಾರ್ಮಿಕರಿಗೆ ಇಎಸ್‌ಐ ಸವಲತ್ತು ಮತ್ತು ಔಷದಿ ಸಿಗುವುದಿಲ್ಲ, ನಿವೃತ್ತ ಕಾರ್ಮಿಕರಿಗೆ ಭವಿಷ್ಯನಿಧಿ ಮತ್ತು ಪಿಂಚಣಿ ಪಾವತಿ ವಿಪರೀತ ವಿಳಂಬವಾಗುತ್ತದೆ. ಕಾರ್ಖಾನೆ ಮುಚ್ಚುವ ಬೆದರಿಕೆಗಳು ಸದಾಕಾಲ ತೂಗುಗತ್ತಿಯಂತೆ ಕಾರ್ಮಿಕರ ತಲೆಗಳ ಮೇಲೆ ನೇತಾಡುತ್ತಿವೆ.

ಎಲ್ಲಾ ಬೆದರಿಕೆಗಳನ್ನೂ ಸಮಸ್ಯೆಗಳನ್ನೂ ಧೃಢವಾಗಿ ಎದುರಿಸುತ್ತಾ ಹಂಚಿನ ಕಾರ್ಮಿಕರು ತಾವು ಅಪಾರ ತ್ಯಾಗ-ಬಲಿದಾನಗಳ ಮೂಲಕ ಗಳಿಸಿದ ಹಕ್ಕುಗಳ ರಕ್ಷಣೆಗಾಗಿ ಹೋರಾಡುತ್ತಿದ್ದಾರೆ.

ಆನೇಕಲ್ ತಾಲ್ಲೂಕು ಮಹಿಳಾ ಸಮ್ಮೇಳನ

ಬೆಂಗಳೂರು ಗ್ರಾಮಾಂತರದೆಡೆಗೆ ಜೆ.ಎಂ.ಎಸ್.ನ ಪ್ರಥಮ ಹೆಜ್ಜೆ

ಜೂನ್ 6 ತಾಲ್ಲೂಕಿನ ಹಲವಾರು ಹಳ್ಳಿಗಳ ಮಹಿಳೆಯರಿಗೆ ಸಡಗರದ ದಿನ. ಮುಂಜಾನೆಯೆ ಎದ್ದು ದನ-ಕರುಗಳ ವ್ಯವಸ್ಥೆ ಮಾಡಿ, ಮನೆ ಮಂದಿಗೆಲ್ಲಾ ಅಡುಗೆ ತಯಾರಿಸಿಟ್ಟು. ಇಂದು ನಾವು ಅತ್ತಿಬೆಲೆಗೆ ಹೋಗಬೇಕು (ಸಮ್ಮೇಳನ ನಡೆದ ಊರು) ಎಂದು ತಿಳಿಸಿ ಹತ್ತಾರು ಹಳ್ಳಿಗಳ ಮಹಿಳೆಯರು ಗುಂಪು ಗುಂಪಾಗಿ ಸಮ್ಮೇಳನದ ಕಡೆ ಧಾವಿಸಿದರು. ಅಂದು ಅತ್ತಿಬೆಲೆಯ ಸಭಾಂಗಣವೊಂದರಲ್ಲಿ ಕಲೆತಿದ್ದ ಮಹಿಳೆಯರಿಗೆ ಹಬ್ಬದ ವಾತಾವರಣ.

ಇಷ್ಟು ದೂರ ನಡೆದು ನೀವೇಕೆ ಬಂದಿರಿ ನಾವೇ ಬರುತ್ತಿದ್ದೆವಲ್ಲಾ:

ಹಂದೇನಹಳ್ಳಿ ಜೆ.ಎಂ.ಎಸ್. ಗೊಂದು ಪ್ರಮುಖ ಗ್ರಾಮ-ತಾಲ್ಲೂಕಿನಲ್ಲೂ ಮಹಿಳಾ ಸಂಘಟನೆ ಪ್ರಾರಂಭವಾದದ್ದು ಇಲ್ಲಿಂದಲೇ. ಸುಮಾರು 150 ಸದಸ್ಯರಿರುವ ಈ ಹಳ್ಳಿಗೆ ಪ್ರಚಾರಕ್ಕೆಂದು ಹೋದೆವು. ರಾತ್ರಿ 9 ಘಂಟೆಯ ಸಮಯದಲ್ಲಿ (ಕೂಲಿ ನಾಲಿ ಮಾಡಿ ಬರುವ ಮಹಿಳೆಯರು ಬಿಡುವಾಗಿ ಸಿಗುವುದೇ ಈ ಹೊತ್ತಿನಲ್ಲಿ). ಮನೆಯ ಬಾಗಿಲೊಂದನ್ನು ತಟ್ಟಿದೆವು. ದ್ವಾಕ್ರಾ ಯೋಜನೆಯ ಫಲಾನುಭವಿ ಮಹಿಳೆಯರೆಲ್ಲರೂ ಅಲ್ಲಿ ಸೇರಿದ್ದರು. ನಾವು ಸಮ್ಮೇಳನಕ್ಕೆ ಬನ್ನಿ ಎನ್ನುತ್ತಿದ್ದಂತೆಯೆ, ನಮಗೆ ಕರಪತ್ರ ಸಿಕ್ಕಿವೆ, ನಾವೆಲ್ಲರೂ ನಾಳೆ ಕೂಲಿಗೆ ರಜೆ ಹಾಕಿದ್ದೇವೆ, ನೀವು ಬರದೇ ಹೋಗಿದ್ದರೂ ನಾವು ಸಮ್ಮೇಳನಕ್ಕೆ ಬರುತ್ತಿದ್ದೆವು. ಈ ರಾತ್ರಿಯಲ್ಲಿ ನಿವೇಕೆ ಇಷ್ಟು ದೂರ ನಡೆದು ಬಂದಿರಿ ಎಂದು ಮರುಕ ವ್ಯಕ್ತಪಡಿಸಿ ದೂರದಲ್ಲಿದ್ದ ಕಾರ್ಯಕರ್ತೆಯೊಬ್ಬರ ಮನೆಗೆ ಅರ್ಧದಾರಿಯವರೆಗೆ ಬಂದು ಬೀಳ್ಕೊಟ್ಟರು.

ಹಾಗೆಯೇ ಸಮ್ಮೇಳನದ ದಿನ ಸುಮಾರು ಮುವತ್ತೈದು ಮಹಿಳೆಯರು ಒಟ್ಟಾಗಿ ಬಂದು ನುಡಿದಂತೆ ನಡೆದರು. ಕಳೆದ ಮಾರ್ಚ್ ತಿಂಗಳಿನಲ್ಲಷ್ಟೇ ತಾಲೂಕಿನಲ್ಲಿ ಮಹಿಳಾ ಸಂಘಟನೆ ಪ್ರಾರಂಭಗೊಂಡಿದ್ದರೂ ಜೂನ್ 6 ರಂದು ನಡೆದ ಸಮ್ಮೇಳನಕ್ಕೆ ಸುಮಾರು 150 ಮಹಿಳೆಯರು ಪಾಲ್ಗೊಂಡು ಅಚ್ಚರಿಯನ್ನುಂಟುಮಾಡಿದರು.

ಭಾಗವಹಿಸಿದ್ದ ಮಹಿಳೆಯರು ನಮ್ಮೂರಿನಲ್ಲೂ 50 ಸದಸ್ಯತ್ವ ಆಗಿದೆ. ನಮ್ಮೂರಿನಲ್ಲಿ ನೂರಾಗಿದೆ, ನೂರೈವತ್ತಾಗಿದೆ. ನಮ್ಮೂರಿನಲ್ಲಿ ಘಟಕ ರಚಿಸಬೇಕು ನಮ್ಮೂರಿಗೆ ಬನ್ನಿ ಎಂಬಂತಾಗಿ ಮಹಿಳೆಯರು ವರದಿಯನ್ನೊಪ್ಪಿಸುವಾಗ ನಮಗಂತೂ ಆದ ಸಂತೋಷ ಅಷ್ಟಿಷ್ಟಲ್ಲ. ನಾಲ್ಕೈದು ವರ್ಷಗಳಿಂದ ಸಂಘಟನೆಯಲ್ಲಿರುವ ನನಗೆ ಈ ಮಹಿಳೆಯರು ತರಿಸಿದ ಸ್ಫೂರ್ತಿ ಮರೆಯಲಾಗದ್ದು.

ಸಮ್ಮೇಳನದ ಸಲುವಾಗಿ ವಾರವಿಡೀ ತಿರುಗಾಡಿದ ನಮಗೆ ಹೋದಲ್ಲೆಲ್ಲಾ ಸಿಕ್ಕ ಪ್ರತಿಕ್ರಿಯೆ, ಪ್ರೀತಿ, ಆದರ ನಮ್ಮ ಆಯಾಸವನ್ನೇ ಮರೆಸಿತ್ತು. ಸ್ಥಳೀಯ ಕಾರ್ಯಕರ್ತೆಯರಾದ ಸುಬ್ಬಲಕ್ಷ್ಮಮ್ಮ, ವೆಂಕಟಲಕ್ಷ್ಮಿ ಎನ್ನುವ ಮಹಿಳೆಯರ ಉತ್ಸಾಹವಂತೂ ಹೇಳ ತೀರಾದ್ದಾಗಿತ್ತು. ಸಂಘಟನೆಗೆ ಹೊಸಬರಾದರೂ ಅನುಭವಸ್ಥ ಸಂಘಟಕರನ್ನು ಮೀರಿಸುವ ಹಾಗೆ ಸುತ್ತಾಡಿದ ಈ ಮಹಿಳೆಯರು ಸ್ಫೂರ್ತಿಯ ಚಿಲುಮೆಯಾಗಿದ್ದರು. ಹೋದಲ್ಲೆಲ್ಲಾ ಆನೇಕಲ್‌ನ ಇತ್ತೀಚಿನ ಕಹಿ ಘಟನೆಯನ್ನು ವಿವರಿಸುವುದನ್ನು ಮರೆಯುತ್ತಿರಲಿಲ್ಲ. ಬಹುಶಃ ಆ ಘಟನೆ ಆ ಮಹಿಳೆಯರ ಮೇಲೆ ತೀವ್ರ ಪರಿಣಾಮ ಬೀರಿರಬೇಕು.

ಆನಂದದಕಣ್ಣೀರು ಮಿಡಿದ ವೆಂಕಟಲಕ್ಷ್ಮಿ

ಪ್ರತಿನಿಧಿಗಳೆಲ್ಲರೂ ಊಟ ಮಾಡುತ್ತಿದ್ದರು. ಪ್ರತಿನಿಧಿಗಳಿಗೆ ಊಟ ಬಡಿಸುತ್ತಿದ್ದವರಲ್ಲಿ ವೆಂಕಟಲಕ್ಷ್ಮಿ ಸಹ ಒಬ್ಬರಾಗಿದ್ದರು. ಪ್ರತಿನಿಧಿಗಳ ಒತ್ತಡ ಹೆಚ್ಚಾಗುತ್ತಿತ್ತು. ವೆಂಕಟಲಕ್ಷ್ಮಿ ಸ್ಪೂನನ್ನು ಬದಿಗಿರಿಸಿ ಕೈಯಲ್ಲೇ ಅನ್ನ ಬಡಿಸುತ್ತಿದ್ದರು. ಎಲ್ಲಾರೂ ಬಡಿಸಿ ಕೊಂಡು ಉಂಡರು. ಬಡಿಸುವಾಗ ವೆಂಕಟಲಕ್ಷ್ಮಿ ಕಣ್ಣಲ್ಲಿ ನೀರಾಡುತ್ತಿತ್ತು. ಊಟದ ನಂತರ ಯಾಕೆಂದು ವಿಚಾರಿಸಿದಾಗ "ಕೆಳಜಾತಿಯವಳೆಂದು ನಿರಾಕರಿಸಿ ನನ್ನ ಕೈಯಲ್ಲಿ ನೀರನ್ನೂ ಕುಡಿಯದಿದ್ದ ಜನ ಇಂದು ನನ್ನ ಕಯ್ಯಾರೆ ಬಡಿಸಿದ ಅನ್ನವನ್ನು ಮನಸಾರೆ ಉಂಡರು. ಇದನ್ನು ಕಂಡ ನನಗೆ ಸಂತೋಷ ಉಕ್ಕಿ ಬಂತು" ಎಂದು ಆನಂದದಿಂದ ಕಣ್ಣೀರು ಮಿಡಿದಾಗ ನನ್ನ ಕಣ್ಣುಗಳೂ ಕೂಡ ಒದ್ದೆಯಾದವು. ಆಕೆಯ ಕಣ್ಣಿನಿಂದ ಆನಂದ ಬಾಷ್ಪಗಳು ಮಿರಮಿರ ಮಿನುಗುತ್ತಿದಂತೆ ಆಕೆ ನುಡಿದಳು "ಈ ದಿನವನ್ನು ನಾನೆಂದೂ ಮರೆಯಲಾರೆ"

ಜಾತಿ, ಮತ, ಧರ್ಮಗಳನ್ನು ಮರೆತು ಒಂದಾಗಿ ಬೆರೆತ, ಒಂದಾಗಿ ಉಂಡ ಮಹಿಳೆಯರ ಒಗ್ಗಟ್ಟು ಚಿರಾಯುವಾಗಲಿ ಎಂದ ಮಹಿಳೆಯರ ಕೂಗು ಸ್ಥಾಪಿತ ಹಿತಾಸಕ್ತಿಗಳಿಗೆ ಕೊಟ್ಟ ಉತ್ತರವಲ್ಲದೆ ಮತ್ತೇನು.

ನಾಗರೀಕ ಸೌಲಭ್ಯಗಳಿಗಾಗಿ ಒತ್ತಾಯ

ನಿರ್ಣಯಗಳು: ತಾಲ್ಲೂಕಿನ ಹಲವಾರು ಹಳ್ಳಿಗಳು ಇಂದಿಗೂ ಬಸ್ಸನ್ನೇ ಕಂಡಿಲ್ಲ ರಸ್ತೆಗಳಿದ್ದರೆ ಬಸ್ಸಿಲ್ಲ. ಬಸ್ಸಿದ್ದರೆ ರಸ್ತೆಗಳಿಲ್ಲ ಎನ್ನುವ ಪರಿಸ್ಥಿತಿ ಶಾಲಾ ಕಾಲೇಜುಗಳಿಗೆ ಆಸ್ಪತ್ರೆ ಕಛೇರಿಗಳಿಗೆ ಮಾರುಕಟ್ಟೆಗೆ ಹೋಗಲು ಪರದಾಡುವ ಸ್ಥಿತಿ. ಬಸ್ಸು ಸಂಚರಿಸುವ ಹಳ್ಳಿಗಳಿಗೂ ಒಂದೇ ಟ್ರಿಪ್ಪಿನ ಸೌಕರ್ಯ. ಬೆಳಿಗ್ಗೆ ಹೊದ ಬಸ್ಸು ಸಂಜೆಗೇ ವಾಪಸ್ಸಾಗುವುದು. ಎಷ್ಟೋ ಹಳ್ಳಿಗಳಿಂದ ತಾಲ್ಲೂಕು ಕೇಂದ್ರಕ್ಕೆ ಸಂಪರ್ಕವಿಲ್ಲದೆ ಜನತೆ ಪರಿತಪಿಸುವಂತಾಗಿದೆ. ಹೀಗಾಗಿ ಸೇರಿದ್ದ ಪ್ರತಿನಿಧಿಗಳೆಲ್ಲರ ಒಕ್ಕೊರಲಿನ ಬೇಡಿಕೆ ಸಮರ್ಪಕ ಸಾರಿಗೆ ವ್ಯವಸ್ಥೆ ಜಾರಿಯಾಗಬೇಕೆಂಬುದು.

ಸೇರಿದ್ದ ಪ್ರತಿನಿಧಿಗಳಲ್ಲನೇಕರು ವೈಯಕ್ತಿಕ ಸಮಸ್ಯೆಗಳನ್ನು ಹೇಳಿಕೊಳ್ಳುವ ಜೊತೆಗೆ ರೇಷನ್ ಕಾರ್ಡ್ ಬವಣೆ, ಪಡಿತರದ ಕೊರತೆ, ಸಾಮಗ್ರಿಗಳ ಕೀಳು ಗುಣಮಟ್ಟ ಮುಂತಾದವುಗಳ ಕಡೆ ಗಮನ ಸೆಳೆದರು. ಬಹಳ ಪ್ರಮುಖವಾಗಿ ಶೌಚಾಲಯದ ಸೌಲಭ್ಯಕ್ಕಾಗಿ ಎಲ್ಲಾ ಹಳ್ಳಿಗಳ ಮಹಿಳೆಯರು ಆಗ್ರಹಿಸಿದರು.

ವರದಕ್ಷಿಣೆ ಕಿರುಕುಳ, ಕುಡುಕ ಗಂಡನ ಕಾಟ, ಕಜ್ಜಾಟ ದ್ವಿಪತ್ನಿತ್ವ ವಂಚನೆ, ಕಿರುಕುಳ, ಹಿಂಸೆ... ಹೀಗೆ ಹಲವಾರು ಸಮಸ್ಯೆಗಳನ್ನು ನೊಂದ ಮಹಿಳೆಯರು ತೋಡಿಕೊಂಡು ಸಂಘಟನೆಯ ನೆರವನ್ನು ಯೂಚಿಸಿದರು. ಗಂಡನ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದ ಮಹಿಳೆಯೊಬ್ಬಳು ಸಮ್ಮೇಳನ ಮುಗಿಯುತ್ತಿದ್ದಂತೆ ಹೊಸ ಅಧ್ಯಕ್ಷರು, ಕಾರ್ಯದರ್ಶಿಯೊಂದಿಗೆ ನನ್ನನ್ನೂ ಜೊತೆ ಮಾಡಿಕೊಂಡು ಅತ್ತಿಬೆಲೆಯಿಂದ ಆನೇಕಲ್ ಪೋಲೀಸ್ ಠಾಣೆಗೆ ಕರೆದೊಯ್ದಳು. ಊರಿನವರ ಜೊತೆ ಅಲ್ಲೊಂದು ಪಂಚಾಯ್ತಿಯೂ ಅಂದೇ ನಡೆಯಿತು.

ಆರ್ಥಿಕ ಸ್ವಾವಲಂಬಿಗಳಾಗಲು ಕಾತರಿಸುತ್ತಿರುವ ಈ ಮಹಿಳೆಯರು ಸರ್ಕಾರದ ಕಲ್ಯಾಣಕಾರಿ ಯೋಜನೆಗಳ ಲಾಭ ಎಲ್ಲರಿಗೂ ದೊರೆಯಬೇಕೆಂದು ಆಗ್ರಹಿಸಿದರು. ವಿವಿಧ ಬೇಡಿಕೆಗಳನ್ನಿಟ್ಟು ನಿರ್ಣಯಗಳನ್ನು ತೆಗೆದುಕೊಳ್ಳುವ ಜೊತೆಗೆ ಮೇ 1 ರಂದು ಆನೇಕಲ್‌ನಲ್ಲಿ ನಡೆದ ಕಲಾವಿದರ ಮೇಲಿನ ಹಲ್ಲೆಯನ್ನು ಖಂಡಿಸಿ ಸಹ ನಿರ್ಣಯವನ್ನು ಅಂಗೀಕರಿಸಲಾಯಿತು.

ಬೆಂಗಳೂರು ಜಿಲ್ಲೆಯ ಗ್ರಾಮಾಂತರಕ್ಕೂ ವಿಸ್ತರಿಸಿಕೊಳ್ಳುತ್ತಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪ್ರಥಮ ಹೆಜ್ಜೆಯಾದ ಆನೇಕಲ್ ತಾಲ್ಲೂಕು ಪ್ರಥಮ ಮಹಿಳಾ ಸಮ್ಮೇಳನವನ್ನು ಕರ್ನಾಟಕ ಪ್ರಾಂತ ರೈತ ಸಂಘಧ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ಜಗನ್ನಾಥ್ ಉದ್ಘಾಟಿಸಿದರು.

ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಜೆ.ಎಂ.ಎಸ್.ರಾಜ್ಯ ಸಹ ಕಾರ್ಯದರ್ಶಿ ಎನ್.ಪ್ರಭಾ. ಬೆಂಗಳೂರು ಜಿಲ್ಲಾ ಉಪಾಧ್ಯಕ್ಷೆ ವಿ. ಮಧುರಾ ಪ್ರಾಂತ ರೈತ ಸಂಘಧ ಜಿಲ್ಲಾ ಸಹಕಾರ್ಯದರ್ಶಿ ಚಂದ್ರತೇಜಸ್ವಿ ಪಾಲ್ಗೊಂಡಿದ್ದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಹಂದೇನಹಳ್ಳಿಯ ಸುಬ್ಬಲಕ್ಷ್ಮಮ್ಮ ವಹಿಸಿದ್ದರು.

ತಾಲೂಕಿನಲ್ಲಿ ಸಂಘಟನೆಯನ್ನು ಮುನ್ನಡೆಸುವ ಸಲುವಾಗಿ ಹೊಸತಾಲ್ಲೂಕು ಸಮಿತಿಯನ್ನು ಆರಿಸಲಾಯಿತು.

ಅಧ್ಯಕ್ಷರಾಗಿ ಸುಬ್ಬಲಕ್ಷ್ಮಮ್ಮ ಉಪಾಧ್ಯಕ್ಷರುಗಳಾಗಿ ಸುಗುಣ, ಮರಿಯಮ್ಮ ಆಯ್ಕೆಯಾದರು. ಕಾರ್ಯದರ್ಶಿಯಾಗಿ, ವೆಂಕಟಲಕ್ಷ್ಮಿ ಸಹಕಾರ್ಯದರ್ಶಿಗಳಾಗಿ ನಿರ್ಮಲ, ಕೃಷ್ಣವೇಣಿ, ಗುಳ್ಳಮ್ಮ ಖಜಾಂಚಿಯಾಗಿ ಆಯ್ಕೆಯಾದರು. ಒಟ್ಟು 25 ಜನರ ತಾಲ್ಲೂಕು ಸಮಿತಿಯನ್ನು ಸಮ್ಮೇಳನ ಆರಿಸಿತು.

ವೆಂಕಟಲಕ್ಷ್ಮಿ ಸಮ್ಮೇಳನಕ್ಕೆ ಸ್ವಾಗತ ಕೋರಿದರೆ ಕೃಷ್ಣವೇಣಿ ವಂದನೆಗಳನ್ನು ಸಲ್ಲಿಸಿದರು. ಸಮ್ಮೇಳನದ ವರದಿಯನ್ನು ಸುಬ್ಬಲಕ್ಷ್ಮಮ್ಮ ಮಂಡಿಸಿದರು. ಗೆಲುವು ನಮ್ಮದು ಹಾಡಿನೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು.

ವರದಿ: ಎನ್. ಪ್ರಭಾ.

ಮಂಡಿಯೂರಿದ ಉಸ್ತುವಾರಿ ಸರಕಾರ

ಪುಟ 2 ರಿಂದ

ಜನ ಭಾರತದ ರಾಷ್ಟ್ರಪತಿಗಳತ್ತ ನೋಡುತ್ತಿದ್ದಾರೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಇದೇ ಉಸ್ತುವಾರಿ ಸರಕಾರ ಲೋಕಸಭೆಯಲ್ಲಿ ವಿಶ್ವಾಸಮತ ಕಳಕೊಂಡ ಕೆಲವೇ ದಿನಗಳಲ್ಲಿ ಇಂಡಿಯನ್ ಏರ್‌ಲೈನ್ಸ್ ಮತ್ತು ಏರ್ ಇಂಡಿಯಾಗಳನ್ನು ಖಾಸಗೀಕರಿಸಲು ಕೈಗೊಂಡ ನಿರ್ಣಯವನ್ನು ಜಾರಿಗೆ ತರಬಾರದು ಎಂದು ರಾಷ್ಟ್ರಪತಿಗಳು ಸರಕಾರಕ್ಕೆ ಹೇಳಿರುವುದಾಗಿ ವರದಿಯಾಗಿದೆ.

ದೇಶದ ಹಿತಾಸಕ್ತಿಗಳನ್ನು, ಆರ್ಥಿಕ ಸಂಪನ್ಮೂಲಗಳನ್ನು ಬಲಿಗೊಟ್ಟು 'ಸುಲಭವಾಗಿ ಹಣ ಮಾಡುವ' ಪ್ರವೃತ್ತಿಯನ್ನು ಬಿಜೆಪಿ ತೋರಿಸುತ್ತಿದೆ ಎಂದು ಈಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಹಿಂದೆ ತನ್ನ ಕುಖ್ಯಾತ 13 ದಿನಗಳ ಆಡಳಿತದಲ್ಲಿ ತಾನೇ ವಿರೋಧಿಸಿದ ಎನ್ರಾನ್ ವಿದ್ಯುತ್ ಕಂಪನಿಗೆ ತರಾತುರಿಯಿಂದ ಪ್ರತಿಗ್ಯಾರಂಟಿ ನೀಡುವ ಕ್ರಮದೊಂದಿಗೆ ಆರಂಭವಾದ ಈ ನೀತಿಬಾಹಿರತೆ ಈಗ ಹೆಚ್ಚೆಚ್ಚು ನಿಖರವಾಗಿ ಕಾಣುತ್ತಿದೆ. ಇಂತಹ ಹಣದಾಹಿಗಳ ಕೈಗೆ ಮತ್ತೆ ಅಧಿಕಾರ ಕೊಡಬೇಕೇ ಎಂದು ಜನತೆ ಗಂಭೀರವಾಗಿ ಯೋಚಿಸಬೇಕಾಗಿದೆ.

ಕಾರ್ಗಿಲ್ ಪರಿಸ್ಥಿತಿ........................

ಪುಟ 3 ರಿಂದ

ಈ ಕೂಡಲೇ ಸರ್ಕಾರ ಕಾಶ್ಮೀರದ ಪ್ರಶ್ನೆ, ಮತ್ತು ಗಡಿ ನಿಯಂತ್ರಣ ರೇಖೆಯ ವಿಷಯವನ್ನು ಅಂತರ್‍ರಾಷ್ಟ್ರೀಯಗೊಳಿಸುವ ಪಾಕಿಸ್ತಾನದ ಪ್ರಯತ್ನಗಳನ್ನು ವಿಫಲಗೊಳಿಸಲು ಮುಂದಾಗಬೇಕು. ಅದಕ್ಕಾಗಿ ಅಲಿಪ್ತ ರಾಷ್ಟ್ರಗಳ ಆಂದೋಲನ(ನಾಮ್) ದ ವೇದಿಕೆಯನ್ನು ಬಳಸಿಕೊಳ್ಳಬೇಕು, ಆದರೆ ಬಿಜೆಪಿ ಉಸ್ತುವಾರಿ ಸರ್ಕಾರ ಈ ದಿಕ್ಕಿನಲ್ಲಿ ಏನೂ ಮಾಡುತ್ತಿಲ್ಲ. ಪರಿಸ್ಥಿತಿ ಹೀಗೇ ಮುಂದುವರಿದರೆ ಅಮೇರಿಕಾದ ಆಟಗಳಿಗೆ ಮುಕ್ತ ಅವಕಾಶವನ್ನೂ ಕೊಟ್ಟಂತೆ.

ಇನ್ನು ಕಾರ್ಗಿಲ್‌ನಲ್ಲಿ ಭೀಕರ ಯುದ್ಧ ನಡೆದಿರುವಾಗ ತೀರಾ ವೈರುಧ್ಯಾತ್ಮಕ, ಅಪಾಯಕಾರಿ ಹೇಳಿಕೆ ನೀಡಿ ಯೋಧರ ನೈತಿಕ ಶಕ್ತಿ ಕುಗ್ಗಿಸುವಂತಹುದನ್ನು ಬಿಡಬೇಕು ಮತ್ತು ಸಮರಾಂಗಣದಲ್ಲಿರುವ ಸೈನ್ಯಕ್ಕೆ ಎಲ್ಲಾ ನೆರವು ನೀಡಬೇಕು.

ಉಭಯ ರಾಷ್ಟ್ರಗಳ ನಡುವೆ ಮಾತುಕತೆ ಆರಂಭವಾಗಿರುವುದು ಸ್ವಾಗತಾರ್ಹ. ಆದರೆ 1948 ರಿಂದಲೂ ಕಾಶ್ಮೀರದ ಬಗ್ಗೆ ಭಾರತ ಪ್ರತಿಪಾದಿಸುತ್ತಾ ಬಂದಿರುವ ನಿಲುವಿಗೆ ದೃಢವಾಗಿ ನಿಲ್ಲಬೇಕು. ಕೊನೆಯದಾಗಿ ಇನ್ನಾದರೂ ಸರ್ಕಾರ ಜನರನ್ನು ಕಗ್ಗತ್ತಲಲ್ಲಿ ಇಡುವುದನ್ನು ಬಿಡಬೇಕು.

ಎಸ್.ವೈ.ಜಿ

ಇ.ಎಂ.ಎಸ್. ಭವನ ನಿಧಿ



ಹಿಂದಿನ ಮೊತ್ತ	ರೂ. 13,34,186.50
ವಿ.ವಿ.ವೀರಭದ್ರಪ್ಪ, ನಿವೃತ್ತ ಪ್ರಾಂಶುಪಾಲರು, ಎ.ವಿ.ಕೆ.ಕಾಲೇಜು, ದಾವಣಗೆರೆ	1000
ಎಸ್.ಎಫ್.ಐ ಕೋಲಾರ ಜಿಲ್ಲಾ ಸಮಿತಿ	300
ಎಸ್.ಎಫ್.ಐ ಹಾಸನ ಜಿಲ್ಲಾ ಸಮಿತಿ	500
ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ, ಜಗನ್ನಾಥ್ ಮೂಲಕ	2100
ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ, ಐಟಿಐ ಶಾಖೆ	2250
ಅಪ್ಪಯ್ಯ ಹೀರೇಮಠ, ಬಿ.ಎಂ.ಟಿ.ಸಿ. ಕಂಡಕ್ಟರ್	500
ಕಾ. ಎನ್.ಕೆ.ಉಪಾಧ್ಯಾಯರ ಮೂಲಕ	
ಸಿ.ಎಸ್.ಕಲ್ಯಾಣ ಶೆಟ್ಟಿ, ಬಿಜಾಪುರ	101
ಎಂ.ಎಸ್.ಬಿಳಗಿ	300
ವಿ.ಡಿ.ಸಕಾರೆ	100
ಎಂ.ಎನ್.ದೇಸಾಯಿ	1000
ಎನ್.ಎಂ.ಪಾಟೀಲ್, ಬೆಂಗಳೂರು	500
ರವಿ, ಬೆಂಗಳೂರು	100
ಕಾಂ. ಕೆವಿ.ಶ್ರೀನಿವಾಸ್	1000
ಸಿಪಿಐ(ಎಂ) ಕೊಡಗು ಜಿಲ್ಲಾ ಸಮಿತಿ, ಹಿತೈಷಿ	2500
ಬೆಂಗಳೂರು ಎಲ್‌ಐಸಿ ಸಂಗಾತಿಗಳು	
ಕುರಿಯನ್ ಜಾರ್ಜ್	200
ಸುಧಾ ವೈ.ಎಲ್.	200
ಜಿ.ಚಂದ್ರಶೇಖರ್ ನಾಯ್ಡು	100
ವಿ.ಮಾಧವಿ ಲತಾ	100
ಅನಂತಪದ್ಮನಾಭ	100
ಸಿ.ರಾಮಮೂರ್ತಿ	100
ಜಿತೇಂದ್ರ	100
ಹೆಚ್.ಆರ್.ಗಾಯಿತ್ರಿ	50
ಸುಧಾ	100
ಕೆ.ವಿ.ಶ್ರೀನಿವಾಸ್	100
ಇನ್ಶೂರೆನ್ಸ್ ಕಾರ್ಪೋರೇಷನ್ ಎಂಪ್ಲಾಯಿಸ್ ಕನ್ಸ್ಯೂಮರ್ ಕೋ-ಆಪ್‌ಸೊಸೈಟಿ	1000
ಸಿಪಿಐ(ಎಂ) ವರ್ತೂರು ವಲಯ ಸಮಿತಿ,	250
ಬೆಂಗಳೂರು, ಫೈಬರ್ ಗ್ಲಾಸ್ ನೌಕರರು	450
ಒಟ್ಟು ಮೊತ್ತ	13,34,186.50

ಮೇ 24-30 ರ ಸಂಚಿಕೆಯಲ್ಲಿ ದ.ಕ. ಮತ್ತು ಉಡುಪಿ ಜಿಲ್ಲಾ ಸಮಿತಿ ಮೂಲಕ ಬಂದ ಹಣ1,32,500 ರೂ. ಎಂದು ಓದಿಕೊಳ್ಳುವುದು

ಐಕ್ಯರಂಗ ಪುರವಣಿ

'ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಹಾಗೂ ಪ್ರತ್ಯೇಕತಾವಾದ'

ಜೂನ್ 14 ರಂದು 'ಐಕ್ಯ ಕೇರಳ' ದ ಧೀಮಂತ ಹೋರಾಟಗಾರರಾದ ಇ.ಎಂ.ಎಸ್.ನಂಬೂದರಿಪಾಡ್‌ರವರ ಜನ್ಮದಿನದ ಸಂದರ್ಭದಲ್ಲಿ ಐಕ್ಯರಂಗದ ಮೊದಲ ಮಾಸಿಕ ಪುರವಣಿ ಬರಲಿದೆ. ಪ್ರತಿ ತಿಂಗಳೂ ಬರಲಿರುವ ಈ ಮಾಸಿಕ ಪುರವಣಿ ಜನರ ಮನಸ್ಸನ್ನು ಕಾಡುತ್ತಿರುವ ಪ್ರಶ್ನೆಗಳ ಮೇಲೆ ಆಳವಾದ ವಿಶ್ಲೇಷಣೆ, ವಿಶೇಷ ಬರಹ ಮಾಹಿತಿಗಳ ಗಣಿ. ಸಂಗ್ರಹಯೋಗ್ಯವಾಗಿ ಪುಸ್ತಿಕೆಯ ರೂಪದಲ್ಲಿ ನಿಮ್ಮ ಕೈ ಸೇರುತ್ತದೆ. ಪುರವಣಿ ಬರುವ ಐಕ್ಯರಂಗ ಸಂಚಿಕೆಯ ಬೆಲೆ 5 ರೂ.

ಕರ್ನಾಟಕವನ್ನು ಕಾಡುತ್ತಿರುವ ಪ್ರಾದೇಶಿಕ ವಾದ ಅದರ ಹಿನ್ನೆಲೆಯಲ್ಲಿರುವ ಪ್ರಾದೇಶಿಕ ಅಸಮಾನತೆ, ಪ್ರಾದೇಶಿಕ ಅಸಮಾನತೆಯ ಕಾರಣ, ಹಿನ್ನೆಲೆಗಳು, ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಕೊಡಗು ಇವುಗಳ ಪ್ರತ್ಯೇಕತಾ ಚಳುವಳಿಗಳ ಬಗ್ಗೆ ಅಪರೂಪದ ಸಂಶೋಧನೆ, ಆಸಕ್ತಿಕರ ಮಾಹಿತಿಗಾಗಿ ಕಾದು ನೋಡಿ.

ವಿಶೇಷ ಸಂಚಿಕೆಯ ಹೆಚ್ಚು ಪ್ರತಿ ಬೇಕಾದವರು ತಕ್ಷಣವೇ ಪ್ರತಿಗಳನ್ನು ಕಾದಿರಿಸಬೇಕು. ಪುರವಣಿಯ ಪ್ರತ್ಯೇಕ ಬೆಲೆ 2 ರೂ.

- ಸಂಪಾದಕರು.

ಹುಬ್ಬಳ್ಳಿ ಧಾರವಾಡದಲ್ಲಿ ಕೈಗಾರಿಕೆಗಳು ಮುಚ್ಚುತ್ತಿರುವಾಗ
ಮೈಸೂರು ಕಿರ್ಲೋಸ್ಕರ್ ಘಟಕವನ್ನು ಹರಿಹರಕ್ಕೆ ಸ್ಥಳಾಂತರಿಸಲು ಸನ್ನಾಹ?

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕಳೆದ ಕೆಲವು ವರ್ಷಗಳಿಂದ ಹೊಸ ಕೈಗಾರಿಕೆಗಳಾವುದೂ ಸ್ಥಾಪನೆ ಆಗುತ್ತಿಲ್ಲ. ಮಹದೇವ ಟೆಕ್ಸ್‌ಟೈಲ್ಸ್, ಸುಂದತ್ತ ಆಯಿಲ್ ಮಿಲ್, ಇಂಡಿಯನ್ ಪ್ಲೈವುಡ್ ಮುಂತಾದ ಅನೇಕ ಸಣ್ಣ ಹಾಗೂ ಮಧ್ಯಮ ಗಾತ್ರದ ಕೈಗಾರಿಕಾ ಸಂಸ್ಥೆಗಳು ಒಂದೊಂದು ಕಾರಣದಿಂದ ರೋಗಗ್ರಸ್ತವಾಗುತ್ತಾ ಬಂದು ಮುಚ್ಚೇ ಹೋಗುತ್ತಿವೆ. ಸಾವಿರಾರು ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿ ಪಾಲಾಗುತ್ತಿದ್ದಾರೆ. ಇದೇ ಸಂದರ್ಭ ಎರಡು ವರ್ಷಗಳ ಹಿಂದೆ, ಮೈಸೂರು ಕಿರ್ಲೋಸ್ಕರ್ ಕೈಗಾರಿಕಾ ಸಂಸ್ಥೆಯು ಧಾರವಾಡದ ಸತ್ತೂರು ಘಟಕವನ್ನು ಹರಿಹರಕ್ಕೆ ಸ್ಥಳಾಂತರಿಸಲಾಯಿತು. ಪರಿಣಾಮವಾಗಿ ನೂರಾರು ನೌಕರರು ಅವರ ಕಷ್ಟನಷ್ಟಗಳನ್ನು ಅನುಭವಿಸಿದರು. ಇವುಗಳನ್ನು ಮರೆಯುವ ಮೊದಲೇ, ಮೈಸೂರು ಕಿರ್ಲೋಸ್ಕರ್ ಆಡಳಿತದವರು ತಮ್ಮ ಹುಬ್ಬಳ್ಳಿಯ ಘಟಕವನ್ನು ಸದ್ಯವೇ ಹರಿಹರಕ್ಕೆ ಸ್ಥಳಾಂತರಿಸುವ ವ್ಯವಸ್ಥೆಯನ್ನು ಕೆಲವು ದಿನಗಳ ಹಿಂದೆ ನೌಕರರ ಸಂಘಗಳಿಗೆ ತಿಳಿಸಿದ್ದು, ನೌಕರರ ಮೇಲೆ ಬಾಂಬ್ ಸಿಡಿಸಿದಂತಾಗಿ ಅವರಲ್ಲಿ ದಿಗ್ಭ್ರಮೆ ಹುಟ್ಟಿಸಿದೆ!

ಮೈಸೂರು ಕಿರ್ಲೋಸ್ಕರ್‌ನ ಹುಬ್ಬಳ್ಳಿ ಘಟಕವನ್ನು ಹರಿಹರಕ್ಕೆ ಸ್ಥಳಾಂತರಿಸುವ ಹಿನ್ನೆಲೆ ಏನು? ಮೈಸೂರು ಕಿರ್ಲೋಸ್ಕರ್ ಲಿಮಿಟೆಡ್ (ಎಂ.ಕೆ.ಎಲ್) ಪೂನಾದ ಕಿರ್ಲೋಸ್ಕರ್ ಕುಟುಂಬದವರ ಗುಂಪಿಗೆ ಸೇರಿದ ಒಂದು ಕೈಗಾರಿಕಾ ಸಂಸ್ಥೆ. ಈ ಸಂಸ್ಥೆಯ ಕೇಂದ್ರ ಕಾರ್ಯಾಲಯ ಹರಿಹರದಲ್ಲಿದೆ. ಇದರ ಹುಬ್ಬಳ್ಳಿ ಘಟಕವನ್ನು 1960ರ ದಶಕದಲ್ಲಿಯೂ ಸತ್ತೂರು ಘಟಕವನ್ನು 1970ರ ದಶಕದಲ್ಲಿಯೂ ಆರಂಭಿಸಲಾಯಿತು. ಹುಬ್ಬಳ್ಳಿ ಸತ್ತೂರು ಘಟಕಗಳು ಮೂಲತಃ ಆಟೋಮೊಬೈಲ್ (ಕಾರು, ಬಸ್, ಲಾರಿ...) ಹಾಗೂ ಇಂಜಿನಿಯರಿಂಗ್ ಕೈಗಾರಿಕೆಗಳಿಗೆ ಬೇಕಾದ ಯಂತ್ರಗಳನ್ನು ನಿರ್ಮಿಸಲು ವಿವಿಧ ಉಪಕರಣಗಳನ್ನು (ಮೆಶಿನ್ ಟೂಲ್ಸ್) ಉತ್ಪಾದಿಸುತ್ತಿದ್ದವು. ಈ ಘಟಕಗಳ ಉತ್ಪಾದನೆಗಳ ಸಿಂಹಪಾಲನ್ನು ಸೋವಿಯತ್ ಒಕ್ಕೂಟಕ್ಕೂ, ಉಳಿದ ಪಾಲನ್ನು ಅಮೇರಿಕ, ಕೆನಡಾ, ಇಂಗ್ಲೆಂಡ್, ಜರ್ಮನಿ, ಚೀನಾ, ಆಸ್ಟ್ರೇಲಿಯಾ ಮುಂತಾದ ದೇಶಗಳಿಗೂ ರಫ್ತು ಮಾಡಲಾಗುತ್ತಿತ್ತು. ಆಂತರಿಕ ಮಾರುಕಟ್ಟೆಗೂ ಇವುಗಳನ್ನು ಒದಗಿಸಲಾಗುತ್ತಿತ್ತು. ಮುಂದೆ ಹುಬ್ಬಳ್ಳಿ ಸತ್ತೂರಿನ ಎಂ.ಕೆ.ಎಲ್. ಘಟಕಗಳು ಹಲವಾರು ಸಂಕಷ್ಟಗಳಿಗೆ ಒಳಗಾದವು.

ಆರ್ಡರ್ ಕೊರತೆ

1980ರ ದಶಕದಲ್ಲಿ ಯಂತ್ರೋಪಕರಣಗಳ ರಫ್ತಿಗಾಗಿ ಬೆಂಗಳೂರಿನ ಸಾರ್ವಜನಿಕ ಸಂಸ್ಥೆಯಾದ ಹಿಂದೂಸ್ಥಾನ್ ಮೆಶಿನ್ ಟೂಲ್ಸ್-ಹೆಚ್.ಎಂ.ಟಿ. ಮೂಲಕ ಆರ್ಡರ್‌ಗಳನ್ನು ಪಡೆಯಬೇಕೆಂದು ಕೇಂದ್ರಸರಕಾರ ಆದೇಶಿಸಿತು. ಕಾಲಕ್ರಮೇಣ ಎಚ್.ಎಂ.ಟಿ ರಫ್ತು ವ್ಯಾಪಾರದಲ್ಲಿ ಹಲವಾರು ಆರ್ಡರ್ ಗಳನ್ನು ತನಗೇ ಮೀಸಲಿರಿಸಿ ಕೊಳ್ಳಲಾರಂಭಿಸಿತು. ಪರಿಣಾಮವಾಗಿ ಎಂ.ಕೆ.ಎಲ್. ಆರ್ಡರ್‌ಗಳ ಕೊರತೆಯಿಂದಾಗಿ ಬಹಳ ತೊಂದರೆಗೊಳಗಾಯಿತು. ರಫ್ತಿಗಾಗಿ ಸಾಕಷ್ಟು ಪ್ರಮಾಣದಲ್ಲಿ ಎಚ್.ಎಂ.ಟಿ ಯಿಂದ ಅಥವಾ ನೇರವಾಗಿ ಆರ್ಡರ್ ಪಡೆಯಲು ಎಂ.ಕೆ.ಎಲ್. ವಿಫಲವಾಯಿತು. 1990ರ ದಶಕದ ಪ್ರಾರಂಭದಲ್ಲಿ ಸೋವಿಯತ್ ಒಕ್ಕೂಟ ವಿಭಜನೆಗೊಂಡನಂತರ, ಯಂತ್ರೋಪಕರಣಗಳಿಗೆ ಆ ದೇಶದಿಂದ ಆರ್ಡರ್‌ಗಳು ಬರುವುದು ನಿಂತು ಹೋಯಿತು. ಅದೇ ಸಂದರ್ಭ, ಖಾಸಗೀಕರಣ ಉದಾರೀಕರಣ-ಜಾಗತೀಕರಣ ಆಧರಿತ ಹೊಸ ಆರ್ಥಿಕ ನೀತಿಯಿಂದಾಗಿ, ಯಂತ್ರೋಪಕರಣ ಗಳ ಉತ್ಪಾದನೆ ಹಾಗೂ ಮಾರಾಟ ಕ್ಷೇತ್ರಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳು ದೊಡ್ಡ ಪ್ರಮಾಣದಲ್ಲಿ ನುಗ್ಗಿ ಬಂದವು. ಎಚ್.ಎಂ.ಟಿ ಹೆಚ್ಚುಕಡಿಮೆ ಸಂಪೂರ್ಣರೋಗಗ್ರಸ್ಥವಾಗಿ ಮುಚ್ಚುವ ಸ್ಥಿತಿ ಬಂದು, ನೌಕರರು ಸ್ವಯಂ ನಿವೃತ್ತಿ ಯೋಜನೆಯಂತೆ ಪರಿಹಾರ ಪಡೆದು ಕೆಲಸ ಬಿಟ್ಟು ಹೋಗಲಾರಂಭಿಸಿದರು. (ವಿ.ಆರ್.ಎಸ್. ಯೋಜನೆ) ಎಂ.ಕೆ.ಎಲ್. ನಲ್ಲಿಯೂ ಈ ರೀತಿಯ ನಿವೃತ್ತಿ ಯೋಜನೆ ಜಾರಿಗೊಳಿಸಿ ಹಲವು ಜನ ನೌಕರರು ಕೆಲಸ ಬಿಟ್ಟು ಹೋಗುವಂತೆ ಮಾಡಲಾಗಿದೆ.

1990ರ ದಶಕದಲ್ಲಿ ಎಂ.ಕೆ.ಎಲ್. ಅಮೇರಿಕದ 'ವಾರ್ನರ್ ಸ್ವಾಸಿ' ಎಂಬ ಬೃಹತ್ ಬಹುರಾಷ್ಟ್ರೀಯ ಸಂಸ್ಥೆಯೊಂದಿಗೆ ವಿದೇಶಿ ಸಹಯೋಗ ಹೊಂದಿತು. ಈ ಹೊಸ ಸಂಸ್ಥೆಯಲ್ಲಿ ಪ್ರತಿಯೊಂದು ಯಂತ್ರೋಪಕರಣಕ್ಕೆ ರೂ. 40-60 ಲಕ್ಷ ಬೆಲೆ ಬಾಳುವ ಸಾಮಗ್ರಿಗಳನ್ನೇ ಉತ್ಪಾದಿಸಲು ಪ್ರಾರಂಭವಾಯಿತು. ಮೂಲ ಎಂ.ಕೆ.ಎಲ್. ಹಿಂದಿನಂತೆ ಪ್ರತಿಯೊಂದು ಯಂತ್ರೋಪಕರಣಕ್ಕೆ ರೂ. 2-3 ಲಕ್ಷ ಬೆಲೆ ಬಾಳುವ ಸಾಮಗ್ರಿಗಳನ್ನಷ್ಟೇ ಉತ್ಪಾದಿಸುತ್ತಾ ಬಂದಿತು. ಪರಿಣಾಮವಾಗಿ ಈ ಸ್ಥಳೀಯ ಸಂಸ್ಥೆಗೆ ಆರ್ಡರ್‌ಗಳು ಗಣನೀಯ ಪ್ರಮಾಣದಲ್ಲಿ ಕಡಿಮೆ ಆದವು. ಆ ಕಾರಣದಿಂದಲೇ, ಎರಡು ವರ್ಷಗಳ ಹಿಂದೆ ಧಾರವಾಡದ ಸತ್ತೂರು ಘಟಕವನ್ನು ಹರಿಹರಕ್ಕೆ ಸ್ಥಳಾಂತರಿಸುವ ಮೂಲಕ ಹುಬ್ಬಳ್ಳಿ ಘಟಕ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ ಜಾರಿಗೊಳಿಸುವ ಮೂಲಕ, ನೌಕರರ ಸಂಖ್ಯೆಯನ್ನು ಸಾಕಷ್ಟು ಕಡಿತಗೊಳಿಸಲಾಯಿತು. ಸದ್ಯ ಒಂದುವರ್ಷದಿಂದ ಹುಬ್ಬಳ್ಳಿಯ ಘಟಕದ ನೌಕರರಿಗೆ ವಾರಕ್ಕೆ ಎರಡುದಿನ (ಶುಕ್ರವಾರ ಮತ್ತು ಶನಿವಾರ) ಲೇಆಫ್ (ಉತ್ಪಾದನೆ ಸ್ಥಗಿತ) ಜಾರಿಗೊಳಿಸಲಾಗಿದೆ.

ಆಡಳಿತದ ಜೇಬಿಗೆ

ಈ ಮಧ್ಯೇ ಕಿರ್ಲೋಸ್ಕರ್ ಕುಟುಂಬದವರು ತಮ್ಮ ಬೃಹತ್ ಕೈಗಾರಿಕಾ ಸಾಮ್ರಾಜ್ಯವನ್ನು ಇಷ್ಟಬಂದಂತೆ ಹಂಚಿಕೊಂಡು, ಆ ಕುಟುಂಬದ ಹೊಸ ಪೀಳಿಗೆಯ ಸದಸ್ಯರು ಎಂ.ಕೆ.ಎಲ್ ಸಂಸ್ಥೆ ನಡೆಸುವಲ್ಲಿ ಮುತ್ಸದ್ದಿತನ, ಮುಂದಾಲೋಚನೆ, ಮಾರುಕಟ್ಟೆ ವಿಸ್ತರಣೆಯ ಪರಿಶ್ರಮ ಕಾರ್ಮಿಕರೊಂದಿಗೆ ಸೌಹಾರ್ದ ಸಂಬಂಧ, ಇತ್ಯಾದಿಗಳನ್ನು ಮೈಗೂಡಿಸಿ ಕೊಳ್ಳದಾಗಿದ್ದಾರೆ. ಇದರ ಉನ್ನತ ಆಡಳಿತದವರ ತಲಾ ಮಾಸಿಕ ಒಟ್ಟು ವೇತನ ರೂ. 2-3 ಲಕ್ಷದಷ್ಟಾಗಿದೆ! ಮೇಲಾಗಿ, ಕಚ್ಚಾ ಸಾಮಗ್ರಿಗಳನ್ನು ಖರೀದಿಸುವಾಗ ಮತ್ತು ಸಿದ್ಧ ಸಾಮಗ್ರಿಗಳನ್ನು ಮಾರಾಟ ಮಾಡುವಾಗ ಇವರು ಭಾರೀ ಕಾಮಿಶನ್‌ಗಳಿಸುತ್ತಾರೆ. ಇವರು ಸಂಸ್ಥೆಯ ಶೇರುಗಳನ್ನು ಹೊಂದಿದ್ದು, ಅವುಗಳ ಮೇಲೆ ವರ್ಷವರ್ಷವೂ ಘೋಷಿಸುವ ಡಿವಿಡೆಂಟ್- ಲಾಭಾಂಶವನ್ನೂ ಗಳಿಸುತ್ತಾರೆ. ಅಲ್ಲದೆ ಪ್ರತಿ ತಿಂಗಳೂ ನೌಕರರ ಮಾಸಿಕ ವೇತನದ ಅರ್ಧದಷ್ಟು ಅಂದಾಜು ರೂ. 9-10 ಲಕ್ಷ ಬೆಲೆಬಾಳುವ ಸರಕುಗಳನ್ನು ಕಾಂಟ್ರಾಕ್ಟ್ ಪದ್ಧತಿಯ ಮೂಲಕ ಸಂಸ್ಥೆಯ ಹೊರಗೆ ಮಾಡಿಸುತ್ತಾರೆ. ಕಂಟ್ರಾಕ್ಟುದಾರರು ಆಡಳಿತಕ್ಕೆ ಸಂಬಂಧಿಸಿದವರೇ ಇರುವುದರಿಂದ, ಆ ಮೂಲಕವೂ ಮೇಲಧಿಕಾರಿಗಳು ಹೇರಳ ಹಣ ಗಳಿಸುತ್ತಾರೆ. ಹೀಗೆ ಸಂಸ್ಥೆಯ ಆದಾಯ ಆಡಳಿತದವರ ಮೇಲ್ವರ್ಗಕ್ಕೇ ಸೇರುತ್ತಿದೆ. ಬಡನೌಕರರಿಗೆ ವಾರದ ಎರಡು ದಿನಗಳಲ್ಲಿ ಕೆಲಸವೇ ಇಲ್ಲ. ಕೆಲಸ ಇದ್ದ ದಿನಗಳಿಗೂ ವೇತನ ಹಾಗೂ ಬೋನಸ್ ಸಾಕಷ್ಟು ಇಲ್ಲ. ಸಂಸ್ಥೆಯ ಕ್ಯಾಂಟೀನ್‌ಗಳಲ್ಲಿ ನೀಡುವ ತಿಂಡಿ ತಿನಿಸುಗಳಿಗೆ, ಊಟಕ್ಕೆ ಇತ್ತೀಚೆಗೆ ಸಬ್ಸಿಡಿ (ಸಹಾಯಧನ) ಕಡಿತ ಗೊಳಿಸಲಾಗಿದೆ. ಕೆಲಸ ಬೇಡವಾದರೆ ಸ್ವಯಂ ನಿವೃತ್ತಿ ಯೋಜನೆಯಲ್ಲಿ ಅರ್ಧ ಚಂದ್ರ ಯಾವಾಗಲೂ ಸಿದ್ದವಾಗಿದೆ! ಈಗ ಹುಬ್ಬಳ್ಳಿಯ ಘಟಕವನ್ನು ಹರಿಹರಕ್ಕೆ ಸ್ಥಳಾಂತರಿಸುವ ಪ್ರಸ್ತಾವನೆಯ ಮೂಲಕ ನೌಕರರಿಗೆ ಇನ್ನಷ್ಟು ಕಷ್ಟ ನಷ್ಟಗಳು!

ಗಣನೀಯ ಆಘಾತ

ಎಂ.ಕೆ.ಎಲ್. ಹುಬ್ಬಳ್ಳಿ ಘಟಕದಲ್ಲಿ ಸದ್ಯ 1000 ಜನ ಸಿಬ್ಬಂದಿಗಳಿದ್ದಾರೆ. ಅದರಲ್ಲಿ 600 ಜನರು ಕಾರ್ಮಿಕ ವರ್ಗದವರು, 400 ಜನರು ಆಡಳಿತ ವರ್ಗದವರು, ಇವರೆಲ್ಲರಿಗೂ ಪ್ರತಿ ತಿಂಗಳೂ ರೂ 20 ಲಕ್ಷ ವೇತನ ವಿತರಣೆ ಆಗುತ್ತಿದೆ. ವರ್ಷಕ್ಕೆ ರೂ. 2.40 ಕೋಟಿ ಹಣವಿತರಣೆ ಆಗುತ್ತಿದೆ. ಸಂಸ್ಥೆಯ ಸುತ್ತ ಮುತ್ತ ಕೊಡುಕೊಳ್ಳುವ ವ್ಯವಹಾರಗಳು ಇನ್ನೂ ಹತ್ತಾರು ಕೋಟಿ ರೂಗಳಷ್ಟು! ಇಷ್ಟು ಹಣ ನಗರದಲ್ಲಿ ಪ್ರತಿ ತಿಂಗಳೂ ಪ್ರತಿವರ್ಷ, ಒಬ್ಬರಿಂದ ಒಬ್ಬರಿಗೆ ವಿನಿಮಯ ಗೊಳ್ಳುವ ಮೂಲಕ ಮಹಾನಗರದಲ್ಲಿ ನೂರಾರು ಕೋಟಿ ರೂ.ಗಳ ಚಲಾವಣೆ ಆಗುತ್ತಿದೆ. ಮಹಾನಗರದ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಇದು ಗಣನೀಯವಾಗಿದೆ, ಹಾಗೂ ಗಮನಾರ್ಹವಾಗಿದೆ. ಎಂ.ಕೆ.ಎಲ್. ಹುಬ್ಬಳ್ಳಿಯ ಘಟಕ ಮುಂದೆ ಹರಿಹರಕ್ಕೆ ಸ್ಥಳಾಂತರವಾದರೆ ಮಹಾನಗರದ ಆರ್ಥಿಕ ವ್ಯವಸ್ಥೆಗೆ ಭಾರಿ ಪೆಟ್ಟು ಬೀಳುವುದರಲ್ಲಿ ಸಂಶಯವಿಲ್ಲ.

ನಗರದ ವ್ಯಾಪಾರ ವಹಿವಾಟುಗಳು, ಶಾಲೆ-ಕಾಲೇಜುಗಳ ಸೇರ್ಪಡೆಗಳು, ವಸತಿ ಆರೋಗ್ಯ ಸೇವೆಗಳು, ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿ ಎಂ.ಕೆ.ಎಲ್. ಹುಬ್ಬಳ್ಳಿ ಘಟಕ ಹರಿಹರಕ್ಕೆ ಸ್ಥಳಾಂತರವಾದರೆ ತೀವ್ರ ಹಿಂಜರಿತ ಉಂಟಾಗುವುದು.

ಐಕ್ಯ ಹೋರಾಟಕ್ಕೆ ಸಿದ್ಧತೆ

ಹುಬ್ಬಳ್ಳಿ ಧಾರವಾಡ ಮಹಾನಗರದ ಹಾಗೂ ಹರಿಹರದ ಎಂ.ಕೆ.ಎಲ್. ಘಟಕಗಳಲ್ಲಿ 1980ರ ದಶಕದ ಪ್ರಾರಂಭದಿಂದ ಬಹುಪಾಲು ಕಾರ್ಮಿಕರು ಸಿ.ಐ.ಟಿ.ಯು ನ ಆಶ್ರಯದಲ್ಲಿ ಸಂಘಟಿತರಾಗಿದ್ದಾರೆ. ಅನೇಕ ಹೋರಾಟಗಳನ್ನು ನಡೆಸಿದ್ದಾರೆ. ವೇತನ ಹೆಚ್ಚಳ ಮುಂತಾದ ಸೌಲಭ್ಯಗಳನ್ನು ಪಡೆದಿದ್ದಾರೆ, ಉಭಯ ನಗರಗಳ ಇತರ ಕ್ಷೇತ್ರಗಳ ಕಾರ್ಮಿಕರ ಹೋರಾಟಗಳಿಗೆ ಬೆಂಬಲಿಸುತ್ತಾ ಬಂದಿದ್ದಾರೆ. ಆಡಳಿತದವರಿಂದ ಈ ಸಂಘ ಮಾನ್ಯತೆ ಪಡೆದುಕೊಂಡು ಬಂದಿದೆ. 1995 ರಿಂದ ಮೂರು ವರ್ಷಗಳ ಕಾಲ ಎ.ಐ.ಟಿ.ಯುಸಿ.ಯ ಬೆಂಬಲದಿಂದ ಬಿ.ಎಂ.ಎಸ್. ಮಾನ್ಯತೆ ಪಡೆದ ಕಾರ್ಮಿಕ ಸಂಘವಾಗಿದೆ. ಈ ಅವಧಿಯಲ್ಲಿ ಮಾಡಿಕೊಂಡ ವೇತನ ಹೆಚ್ಚಳ ಹಾಗೂ ಬೋನಸ್ ಒಪ್ಪಂದಗಳಲ್ಲಿ ಸಂಸ್ಥೆಯ ರಚನೆಯಲ್ಲಿ ಬದಲಾವಣೆ ಮಾಡುವ ಹಕ್ಕು ಆಡಳಿತದವರಿಗೆ ಇದೆ ಎಂದು ಒಂದು ಶರತ್ತು ಹಾಕಿರುವುದಾಗಿ ತಿಳಿದು ಬಂದಿದೆ. ಅದನ್ನು ಎತ್ತಿ ಹಿಡಿದು ಸತ್ತೂರಿನ ಘಟಕವನ್ನು ಇಷ್ಟರಲ್ಲಿಯೇ ಹರಿಹರಕ್ಕೆ ಸಾಗಹಾಕಿದ್ದು, ಈಗ ಹುಬ್ಬಳ್ಳಿಯ ಘಟಕವನ್ನು ಹರಿಹರಕ್ಕೆ ಸ್ಥಳಾಂತರಿಸಲು ಪ್ರಸ್ತಾಪಿಸಿರುವುದು, ಸ್ವಯಂ ನಿವೃತ್ತಿ ಯೋಜನೆ ಜಾರಿಗೆ ತಂದಿರುವುದು ಎಂದು ತಿಳಿದು ಬಂದಿದೆ.

ಆದರೆ, ಕೆಲವು ದಿನಗಳ ಹಿಂದೆ ಎಂ.ಕೆ.ಎಲ್.ನ ಹುಬ್ಬಳ್ಳಿ ಘಟಕದ ಕಾರ್ಮಿಕರ ಸಹಕಾರಿ ಸಂಘದ ಚುನಾವಣೆಯಲ್ಲಿ ಆಯ್ಕೆಯಾದ ಒಟ್ಟು 7 ಜನ ಅಭ್ಯರ್ಥಿಗಳಲ್ಲಿ 6 ಜನರು ಸಿ.ಐ.ಟಿ.ಯು ವಿಗೆ ಸೇರಿದವರೆಂದು ತಿಳಿದು ಬಂದಿದೆ. ಸಿ.ಐ.ಟಿ.ಯುವಿನ ಮುತುವರ್ಜಿಯಿಂದ, ಎಂ.ಕೆ.ಎಲ್. ಹುಬ್ಬಳ್ಳಿ ಘಟಕವನ್ನು ಹರಿಹರಕ್ಕೆ ಸ್ಥಳಾಂತರಿಸುವುದನ್ನು ನಿರ್ಣಾಯಕ ವಾಗಿ ತಡೆಗಟ್ಟಲು ಈಗಾಗಲೇ ಮೂರು ಕಾರ್ಮಿಕ ಸಂಘಟನೆಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಂದು ಜಂಟಿಕ್ರಿಯಾ ಸಮಿತಿ ರಚಿಸಿದೆ ಎಂದು ತಿಳಿದು ಬಂದಿದೆ. ಮುಂದೆ ಈ ಸಮಿತಿ ನಡೆಸುವ ಹೋರಾಟಕ್ಕೆ ಉಭಯ ನಗರಗಳ ಎಲ್ಲಾ ಕಾರ್ಮಿಕ ಸಂಘಟನೆಗಳು ಜನಪ್ರತಿನಿಧಿಗಳ ರಾಜಕೀಯ ಮುಖಂಡರ ಬೆಂಬಲ ಪಡೆದು ಒಂದು ಸೌಹಾರ್ದ ಸಮಿತಿ ರಚಿಸಿ, ಹೋರಾಟವನ್ನು ಯಶಸ್ವಿಗೊಳಿಸಲು ಸಿದ್ಧತೆ ನಡೆಯುತ್ತದೆ ಎಂದು ತಿಳಿದು ಬಂದಿದೆ. ಇದು ಸ್ವಾಗತಾರ್ಹವಾದ ಬೆಳವಣಿಗೆ ಆಗಿದೆ.

(ಸ್ಥಳೀಯ ಪ್ರತಿನಿಧಿಗಳಿಂದ ತನಿಖಾವರದಿ.)

ದೇವರಬೆಳಕೆರೆಯ ಬಸ್ ದುರಂತ

ಗುಂಡಿಬಿದ್ದ ರಸ್ತೆಗಳಲ್ಲಿ ಕಿಕ್ಕಿರಿದ ಮುರಕಲು ಬಸ್‌ಗಳ ವೇಗಮಿತಿ ಮೀರಿದ ಸಂಚಾರದ ದುರವಸ್ಥೆಗೆ ಕೊನೆಯೆಂದು?

ಜೂನ್ 6 ರ ಸಂಜೆ ದಾವಣಗೆರೆ ಸಮೀಪದ ದೇವರಬೆಳಕೆರೆಯಲ್ಲಿ ನಡೆದ ಭೀಕರ ಬಸ್ ದುರಂತ ಇಡೀ ರಾಜ್ಯವನ್ನು ತಲ್ಲಣಗೊಳಿಸಿದೆ. 150 ಕ್ಕೂ ಹೆಚ್ಚು ಜನಗಳನ್ನು ಒಳಗೊಂಡು ಟಾಪ್‌ನಲ್ಲೂ ಹೊತ್ತು ಉದ್ದಕ್ಕೂ ಗುಂಡಿಬಿದ್ದ ದಾವಣಗೆರೆ - ಮಲೆಬೆನ್ನೂರು ರಸ್ತೆಯಲ್ಲಿ ಧಾವಿಸುತ್ತಿದ್ದ ಈ ಖಾಸಗೀ ಬಸ್ ದೇವರಬೆಳಕೆರೆ ಪಿಕ್‌ಪ್ ಡ್ಯಾಮಿನ ಬಳಿ ಟಯರ್ ಸ್ಫೋಟಗೊಂಡು ಜಲಾಶಯದ ಆಳಕ್ಕೆ ಬಿದ್ದು ಸುಮಾರು ನೂರು ಜೀವಗಳನ್ನು ಬಲಿತೆಗೆದುಕೊಂಡಿದೆ. ಇದರಲ್ಲಿ ಅರ್ಧದಷ್ಟು ಶಾಲಾ ಮಕ್ಕಳು ಎಂದು ಹೇಳಲಾಗಿದೆ.

ರಾಜ್ಯದ, ದೇಶದ ಮುಖಂಡರೆಲ್ಲಾ ಈ ದುರಂತದ ಬಗ್ಗೆ ಸಂತಾಪ ಸೂಚಿಸಿದ್ದಾರೆ. ಈ ರೀತಿ ಬಸ್ ಮಾಲಕನಿಗೆ ಗರಿಷ್ಠ ಲಾಭ ಒದಗಿಸಲು ತನ್ನ ಸಾಮರ್ಥ್ಯಕ್ಕೆ ಮೀರಿ 3-4 ಪಟ್ಟು ಪ್ರಯಾಣಿಕರನ್ನು ಕುರಿ ಮಂದೆಯಂತೆ ತುಂಬಿಕೊಂಡು ತಲೆಯ ಮೇಲೂ ಹೊತ್ತುಕೊಂಡು ಗುಂಡಿಮಯ ವಾಗಿರುವ ರಸ್ತೆಗಳಲ್ಲಿ ಹರಕಲು ಖಾಸಗೀ ಬಸ್‌ಗಳ ಮಿತಿಮೀರಿದ ವೇಗದ ಸಂಚಾರ ನಮಗೆಲ್ಲಾ ಸಾಮಾನ್ಯ ಸಂಗತಿ. ಆ ದೃಶ್ಯವನ್ನು ನೋಡಿದರೆ ಇಂತಹ ದುರುಂತಗಳು ಸಂಭವಿಸದಿದ್ದರೆ ಅದೇ ಆಶ್ಚರ್ಯ ಎನ್ನಿಸದಿರದು. ಈ ಬಸ್‌ಗಳ ಚಾಲಕರು ನಿಜಕ್ಕೂ ವಿಶ್ವದಾಖಲೆ ನಿರ್ಮಿಸಬಲ್ಲ ನಿಪುಣರು ಎನ್ನಿಸದಿರದು. ಆದರೂ ನಿಜವಾಗಿಯೂ ಇಂತಹ ದುರಂತ ಸಂಭವಿಸಿದಾಗ ಎಲ್ಲರ ಮನ ತಲ್ಲಣಿಸುತ್ತದೆ. ಸಂತಾಪ ಸಂದೇಶಗಳುಹೊರಹೊಮ್ಮುತ್ತವೆ.

ಆದರೆ ಇಷ್ಟೇ ಸಾಕೆ? ಏಕೆ ಸಾರಿಗೆ ವ್ಯವಸ್ಥೆಯಲ್ಲಿ, ಅದರಲ್ಲೂ ಗ್ರಾಮೀಣ ಸಾರಿಗೆಯಲ್ಲಿ ಇಂತಹ ದುರವಸ್ಥೆ? ಖಾಸಗೀಕರಣ, ಸ್ಪರ್ಧೆ ಇವೆಲ್ಲಾ ಬಳಕೆದಾರರಿಗೆ ಅತ್ಯುತ್ತಮ ಸೇವೆ ಒದಗಿಸುವ ದಾರಿಗಳು ಎಂಬುದು ಉದಾರೀಕರಣದ ಈ ದಿನಗಳಲ್ಲಿ ತಾರಕಮಂತ್ರದಂತಾಗಿದೆ. ಆದರೆ ಜನಸಾಮಾನ್ಯರ ಮಟ್ಟಿಗಂತೂ ಇದು ನೂರಕ್ಕೆ ನೂರು ಸುಳ್ಳು ಎಂಬುದನ್ನು ಇಂತಹ ದುರಂತಗಳೇ ನಮಗೆ ನೆನಪಿಸಿಕೊಡಬೇಕೇ?

ಪಿಕಪ್ ಡ್ಯಾಮಿನ ರಸ್ತೆ ಬಿರಿದುಕೊಂಡಿದ್ದು ಸೇತುವೆಯ ಕಬ್ಬಿಣದ ಸರಳು ಟಯರ್‌ಗೆ ಚುಚ್ಚಿ ಸ್ಫೋಟಗೊಂಡು ಈ ಅಪಘಾತ ಸಂಭವಿಸಿದೆಯೆಂದು ಹೇಳಲಾಗುತ್ತಿದೆ. 'ರಿಪೇರಿ'ಯಾದ ಒಂದೇ ವರ್ಷದಲ್ಲಿ ನಮ್ಮ ರಸ್ತೆಗಳು ಏಕೆ ಸಾವಿನ ಕೂಪಗಳಾಗಿ ಬಿಡುತ್ತವೆ? ಈ ರಸ್ತೆಗಳನ್ನು ನಿರ್ಮಿಸಿ ಕೊಟ್ಟ ಕಾಂಟ್ರಾಕ್ಟರುಗಳನ್ನು, ಉಸ್ತುವಾರಿ ಮಾಡಿದ ಸಾರ್ವಜನಿಕ ಕಾಮಗಾರಿ ಇಲಾಖೆಯನ್ನು ಜವಾಬ್ದಾರಿ ಮಾಡಲಾಗುತ್ತಿದೆಯೇ? ಗಂಟೆಗಟ್ಟಲೆ ಕಾದರೂ ಬಸ್ ಹಾಕದೆ ಪ್ರಯಾಣಿಕರು ಕಿಕ್ಕಿರಿದಾಗ ನಾಲ್ಕು ಬಸ್ಸುಗಳಷ್ಟು ಜನರನ್ನು ಒಂದೇ ಬಸ್ಸಿನಲ್ಲಿ ತುಂಬಿಸಲಾಗುತ್ತಿದೆ. ಖಾಸಗಿಯವರ 'ದಕ್ಷತೆ', ಸ್ಪರ್ಧಾ ಮನೋಭಾವದ ಸುಳಿವೂ ಅಲ್ಲಿರುವುದಿಲ್ಲ. ಜೂನ್ 6 ರಂದು ದುರಂತಕ್ಕೀಡಾದ ಬಸ್‌ನ ಏಜೆಂಟ 150 ಜನರಿಗೆ ಟಿಕೀಟು ಕೊಟ್ಟು ಈ ಬಸ್ ಹತ್ತಿಸಿದ್ದನಂತೆ. ಕೆಲವೇ ವರ್ಷಗಳ ಹಿಂದೆ ಇದೇ ರೀತಿಯ ಏಜೆಂಟನಾಗಿದ್ದ ಈ ಬಸ್‌ನ ಮಾಲಕ ಈಗ ಕೋಟ್ಯಾಧೀಶ್ವರ ನಂತೆ. ಬಸ್ ಮಾಲಕರಿಗೆ ಸಂಪತ್ತನ್ನು ಸುಲಿದುಕೊಡುವ ಈ 'ಸೇವೆ'ಯ ಬಳಕೆದಾರರಿಗೆ ಮಾತ್ರ ಸದಾ ಸಾವಿನ ಪಯಣದ ಭಯ.

ಇಲ್ಲಿ ಸಾರ್ವಜನಿಕ ಸಾರಿಗೆಯ ಸ್ವರೂಪವನ್ನೂ ಗಮನಿಸಬೇಕು. ಹಲವೆಡೆ ಇಂತಹ ರೂಟ್‌ಗಳಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳನ್ನೂ ಹಾಕಿರುತ್ತಾರೆ. ಆದರೆ ಅದರ ಅಧಿಕಾರಿಗಳು ಹಾಗೂ ಖಾಸಗೀ ಬಸ್ ಮಾಲಕರ ಶಾಮೀಲಿನಿಂದಾಗಿ ಈ ಬಸ್‌ಗಳು ಸಂಚರಿಸುವುದೇ ಅಪರೂಪ. ಜನ ನಿರ್ವಾಹವಿಲ್ಲದೆ ಖಾಸಗೀಯವರ ಮುರುಕಲು ಬಸ್‌ಗಳಲ್ಲಿ ಕುರಿಮಂದೆಯಂತೆ ನುಗ್ಗಿ ಪ್ರಯಾಣಿಸಬೇಕಾಗುತ್ತದೆ. ಜನಸಾಮಾನ್ಯರ ಪ್ರಶ್ನೆ ಬಂದಾಗ 'ಸ್ಪರ್ಧೆ' ಯೆಂಬುದು ಪಡೆಯುವ ಭೀಕರ ಸ್ವರೂಪ ಇದು. ದೇವರಬೆಳಕೆರೆಯಂತಹ ದುರಂತಗಳಿಂದಾದರೂ ಈ ಗಹನ ಪ್ರಶ್ನೆಗಳತ್ತ ಪ್ರಜ್ಞಾಶೀಲ ನಾಗರೀಕರ ಗಮನ ಹರಿಯಬೇಕು.

ವಿಶಾಖಪಟ್ಟಣದಲ್ಲಿ ಭೂಕಬಳಿಕೆ ವಿರುದ್ಧ ಹೋರಾಟ

ರೈತ-ಕಾರ್ಮಿಕ ಮೈತ್ರಿಯ ಒಂದು ಹೊಸ ಉದಾಹರಣೆ

ವಿಶಾಖಪಟ್ಟಣ ಆಂಧ್ರಪ್ರದೇಶದಲ್ಲಿ ತ್ವರಿತ ಗತಿಯಲ್ಲಿ ಬೆಳೆಯುತ್ತಿರುವ ಕೈಗಾರಿಕಾ ಕೇಂದ್ರಗಳಲ್ಲಿ ಒಂದು. ಆದರೆ ಸುತ್ತಮುತ್ತಲ ಪ್ರದೇಶಗಳು ಇನ್ನೂ ಕೃಷಿಯಲ್ಲಿ ಇತರ ವಿಷಯಗಳಲ್ಲಿ ಬಹಳ ಹಿಂದುಳಿದಿವೆ. ಭೂಮಾಲಕರಿಗೆ, ಕೈಗಾರಿಕೋದ್ಯಮಿಗಳಿಗೆ ಹೇಳಿ ಮಾಡಿಸಿದ ಅವಕಾಶ ಇದು. ವಿಶಾಖಪಟ್ಟಣ ನಗರದೊಳಗೆ ಜಮೀನು ಬೆಲೆಗಳಲ್ಲಿ ತೀವ್ರ ಏರಿಕೆಯ ಪ್ರಯೋಜನ ಪಡೆಯಲು ಅವರು ಸುತ್ತಮುತ್ತಲಿನ ಸರಕಾರಿ ಭೂಮಿಗಳನ್ನು, ಬಡಜನರ ಭೂಮಿಗಳನ್ನು ಕಬಳಿಸುತ್ತಿದ್ದಾರೆ. ಆದರೆ ಕೃಷಿ ಕಾರ್ಮಿಕರ ಹೋರಾಟ, ಅದಕ್ಕೆ ಸಂಘಟಿತ ಕಾರ್ಮಿಕರ ಬೆಂಬಲ ದೊಡ್ಡ ಸವಾಲೊಡ್ಡಿದೆ.

ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ವಿಶಾಖಪಟ್ಟಣ ಜಿಲ್ಲಾ ಸಮಿತಿ 'ಉಳುವವನಿಗೇ ಭೂಮಿ' ಎಂಬ ಘೋಷಣೆ ಕೊಟ್ಟು ಆನಂದಪುರಂ ಮಂಡಲದಲ್ಲಿ ಗ್ರಾಮೀಣ ಜನ ಸಮೂಹಗಳನ್ನು ಸಂಘಟಿಸಿದೆ. ಭೂಮಾಲಕರು ರೆವಿನ್ಯೂ ಅಧಿಕಾರಿಗಳು ಮತ್ತು ಕೋರ್ಟುಗಳ ನೆರವಿನಿಂದ ಕೃಷಿಕಾರ್ಮಿಕ ಕಾರ್ಯಕರ್ತರ ಮೇಲೆ ಸುಳ್ಳು ಕೇಸುಗಳನ್ನು ಹೇರಿ ಕಿರುಕುಳ ಕೊಡಲು ಪ್ರಯತ್ನಿಸಿದರೂ ಹೋರಾಟ ಮುಂದುವರೆಯಿತು.

ಇತ್ತೀಚೆಗೆ ಕೃಷಿಕಾರ್ಮಿಕರ ಸಂಘ ಮತ್ತು ಸಿಐಟಿಯು ಜಿಲ್ಲಾ ಸಮಿತಿಗಳು ಸೇರಿಕೊಂಡು ಜಂಟಿ ಭೂಗ್ರಹಣ ಕಾರ್ಯಾಚರಣೆಯನ್ನು ಆರಂಭಿಸಿದವು. ಏಪ್ರಿಲ್ 6 ರಂದು 150 ಕಾರ್ಯಕರ್ತರು 40 ಎಕ್ರೆ ಗೇರುಬೀಜ ತೋಟಗಳನ್ನು ಆಕ್ರಮಿಸಿದರು. ಏಪ್ರಿಲ್ 11 ರಂದು 300 ಕಾರ್ಯಕರ್ತರು ಮಾವಿನ ತೋಟಗಳನ್ನು ಆಕ್ರಮಿಸಿದರು. ಇವೆಲ್ಲಾ ಬಡ ದಲಿತರ, ಇತರ ಹಿಂದುಳಿದ ಜಾತಿಗಳ ಜನಗಳ ಭೂಮಿ. ಇವುಗಳ ಪಟ್ಟಾ ಅವರ ಬಳಿಯಿದೆ. ಆದರೆ ಅವರಿಗೆ ಹೊಟ್ಟೆಗೆ ಕೂಳೂ ಇಲ್ಲದ ಸಮಯದಲ್ಲಿ, ಅಥವಾ ಮದುವೆ ಇತ್ಯಾದಿ ಸಂದರ್ಭಗಳಲ್ಲಿ ಪುಡಿಗಾಸು ಕೊಟ್ಟು ಭೂಮಾಲಕರು ಇವನ್ನು ಕಬಳಿಸಿದ್ದರು.

ಏಪ್ರಿಲ್ 14 ರಂದು 'ಭೂ ಹೋರಾಟ ರ್‍ಯಾಲಿ' ಆನಂದಪುರ ಮಂಡಲದ 32 ಪಂಚಾಯತುಗಳಲ್ಲಿ ನಡೆಯಿತು. ವಿಶಾಖಪಟ್ಟಣ ಉಕ್ಕು ಕಾರ್ಖಾನೆಯ 100 ಕಾರ್ಮಿಕರು ಸ್ಕೂಟರುಗಳಲ್ಲಿ ಈ ರ್‍ಯಾಲಿಯಲ್ಲಿ ಭಾಗವಹಿಸಿದರು. ಹಡಗುಕಟ್ಟೆ, ಬಿ.ಹೆಚ್.ಪಿ.ವಿ., ರಕ್ಷಣಾ ಉದ್ದಿಮೆಯ ಕಾರ್ಮಿಕರೂ ಭಾಗವಹಿಸಿದರು. ಇದು ಬಡ ದಲಿತರು ಮತ್ತಿತರ ಕೃಷಿಕಾರ್ಮಿಕರಲ್ಲಿ ಹೊಸ ವಿಶ್ವಾಸ ಮೂಡಿಸಿತು.

ಮೇ 1ರಂದು ಪೆಂಡೂರಿ ಎಂಬಲ್ಲಿ ನಡೆದ ತೆಲುಗುದೇಶಂ ಸರಕಾರದ 'ಮಹಿಳಾ ಜನ್ಮಭೂಮಿ' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ಕೃಷಿ ಕಾರ್ಮಿಕರು ಭೂಕಬಳಿಕೆದಾರರನ್ನು 'ಭೂಕಬಳಿಕೆ ಕಾನೂನಿ'ನಡಿ ಬಂಧಿಸಬೇಕೆಂದು ಆಗ್ರಹಿಸಿದರು. ಮುಖ್ಯಮಂತ್ರಿಗಳು ಭೂಮಾಲಕರ ಪರ ಮಾತನಾಡಿದರು. ಏಕೆಂದರೆ ಒಬ್ಬ ದೊಡ್ಡ ಭೂಮಾಲಕ ಪೀಲಾ ಮಹಾಲಕ್ಷ್ಮಿನಾರಾಯಣ ಅದೇ ವೇದಿಕೆಯಲ್ಲಿದ್ದ.

ಆದರೆ ಹೋರಾಟದ ಒತ್ತಡ ದಿಂದಾಗಿ ರೆವಿನ್ಯೂ ಅಧಿಕಾರಿಗಳು ಆನಂದಪುರಂ ಮಂಡಲದ ಜಮೀನುಗಳ ಒಂದು ತುರ್ತು ಮರುಸರ್ವೆ ನಡೆಸಲೇ ಬೇಕಾಗಿ ಬಂತು. ಪಟ್ಟಾ ಹೊಂದಿದ್ದವರಿಗೆ ಅವರ ಭೂಮಿಯನ್ನು ವಾಪಾಸು ನೀಡಲೇಬೇಕಾಗಿ ಬಂತು. ಈಗಾಗಲೇ ಈ ರೀತಿ ಸುಮಾರು 500 ಎಕ್ರೆ ಜಮೀನು ಮತ್ತೆ ಬಡ ರೈತರ ವಶಕ್ಕೆ ಬರಲಿದೆ. ಕೃಷಿಕೂಲಿಕಾರರ ಸಂಘ ಹಾಗೂ ಸಿಐಟಿಯುವಿನ ಈ ಜಂಟಿ ಹೋರಾಟ ಭೂಮಾಲಕರ ವಿರುದ್ಧ ಭೂಮಿಗಾಗಿ ಹೋರಾಟದಲ್ಲಿ ಹೊಸ ಹುರುಪು ತುಂಬಿದೆ.

ಈ ಹೋರಾಟದ ವೇಳೆಯಲ್ಲಿ ಎರಡು ಗ್ರಾಮಗಳಲ್ಲಿ ಎರಡೆರಡು ದಿನಗಳ ಶಿಕ್ಷಣ ಶಾಲೆಗಳನ್ನು ನಡೆಸಲಾಯಿತು. ಸುಮಾರು 100 ಕೂಲಿಕಾರರು ಭಾಗವಹಿಸಿದ್ದರು.

ರೈತ-ಕಾರ್ಮಿಕರ ಮೈತ್ರಿ ಕಟ್ಟುವ ನಿಟ್ಟಿನಲ್ಲಿ ಸಿಐಟಿಯು ಹಾಗೂ ಕೃಷಿಕೂಲಿಕಾರರ ಸಂಘ ಈ ಹೋರಾಟ ಆರಂಭಿಸಿತ್ತು. ಗ್ರಾಮೀಣ ಬಡವರ ಹೋರಾಟಕ್ಕೆ ಸೌಹಾರ್ದ ಬೆಂಬಲ ನೀಡುವಲ್ಲಿ ಕಾರ್ಮಿಕ ಸಂಘಗಳ ಪಾತ್ರವನ್ನು ಈ ಹೋರಾಟ ಎತ್ತಿತೋರಿತು.

ಈ ಹೋರಾಟವನ್ನು ಮುಂದು ವರೆಸಲು ರೈತರೂ, ಕಾರ್ಮಿಕರೂ ನಿರ್ಧರಿಸಿದ್ದಾರೆ. ಜೂನ್‌ನಲ್ಲಿ ಒಂದು ಬೃಹತ್ ಜಂಟಿ ಧರಣೆ ನಡೆಸುವ ಕಾರ್ಯಕ್ರಮ ರೂಪಿಸಲಾಗುತ್ತಿದೆ. ○

ಪಶ್ಚಿಮಬಂಗಾಳ: ಮುಚ್ಚಿದ ಕಾರ್ಖಾನೆಗಳ ಕಾರ್ಮಿಕರ ನೆರವಿಗೆ ಒಂದು ವಿಶಿಷ್ಟ ಯೋಜನೆ

1998 ರಲ್ಲಿ ಪಶ್ಚಿಮ ಬಂಗಾಳ ಮುಚ್ಚಿದ ಉದ್ದಿಮೆಗಳ ಕಾರ್ಮಿಕರಿಗೆ ನೆರವಾಗಲೆಂದು ಒಂದು ವಿಶಿಷ್ಟ ಯೋಜನೆಯನ್ನು ಜಾರಿಗೆ ತಂದಿತ್ತು ಎಂಬುದು 'ಐಕ್ಯರಂಗ' ಓದುಗರಿಗೆ ತಿಳಿದಿದೆ. ಒಂದು ವರ್ಷಕ್ಕಿಂತ ಹೆಚ್ಚುಕಾಲ ಲಾಕೌಟ್, ಮುಚ್ಚಿಕೆ ಹಾಗೂ ಉತ್ಪಾದನೆ ಸ್ಥಗಿತಗೊಂಡಿರುವ ಉದ್ದಿಮೆಗಳ ಕಾರ್ಮಿಕರಿಗೆ ತಲಾ 500 ರೂ. ಹಣಕಾಸು ನೆರವು ನೀಡುವ ಯೋಜನೆ ಇದು. ಅದನ್ನೀಗ ಮಾರ್ಚ್ 2000 ದ ವರೆಗೆ ಮುಂದುವರೆಸಲಾಗಿದೆ.

ಈ ಯೋಜನೆ ಅನುಷ್ಠಾನಕ್ಕೆ 190 ಘಟಕಗಳನ್ನು ಗುರುತಿಸಲಾಗಿದೆ. 31500 ಅರ್ಜಿಗಳು ಬಂದಿವೆ. ಅವುಗಳಲ್ಲಿ 27600 ಅರ್ಜಿಗಳನ್ನು ಅಂಗೀಕರಿಸಲಾಗಿದೆ. ಪಶ್ಚಿಮ ಬಂಗಾಳದಾದ್ಯಂತ ವಿವಿಧ ಸಾರ್ವಜನಿಕ ವಲಯದ ಬ್ಯಾಂಕುಗಳು ಹಾಗೂ ಹೌರಾ ಗ್ರಾಮೀಣ ಬ್ಯಾಂಕಿನ ಮೂಲಕ 212 ಶಾಖೆಗಳಲ್ಲಿ ಒಟ್ಟು 16.45 ಕೋಟಿ ರೂ. ಬಿಡುಗಡೆಯಾಗಿದೆ.

ಆಂಧ್ರಪ್ರದೇಶ ಊಟದೆಲೆ ತಯಾರಿಸುವ ಮಹಿಳೆಯರ ಬಂಡಾಯ

ತೆಲುಗುದೇಶಂ ಸರಕಾರದ 'ಮಹಿಳಾ ಜನ್ಮಭೂಮಿ' ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಸಮಾರಂಭವೊಂದರಲ್ಲಿ ಕೋತಕೋಟ (ವಿಶಾಖಪಟ್ಟಣಂ ಜಿಲ್ಲೆ) ದ ಊಟದೆಲೆ ತಯಾರಿಸುವ ಮಹಿಳೆಯರು ಬಂಡಾಯದ ಬಾವುಟ ಎತ್ತಿದರು.

ಈ ಹಳ್ಳಿಯಲ್ಲಿ ಊಟದೆಲೆ ತಯಾರಿಸುವ ಕಾಯಕದಲ್ಲಿ 6 ರಿಂದ 60 ವರ್ಷದ ವರೆಗಿನ ಸಾವಿರಾರು ಮಹಿಳೆಯರು ತೊಡಗಿದ್ದಾರೆ. ಇದರಲ್ಲಿ 12-13 ಗಂಟೆ ದುಡಿದರೆ ಸಿಗುವ ದಿನಗೂಲಿ 7.50 ರೂ. ಕೆಲವೊಮ್ಮೆ ಬರಿಗೈಯಲ್ಲೇ ಹಿಂತಿರುಗುವ ಸ್ಥಿತಿಯಿದೆ. ಜತೆಗೆ ಇವನ್ನು ಕೊಳ್ಳುವ ವ್ಯಾಪಾರಿಗಳಿಂದ ಕಿರುಕುಳ.

ಇದಲ್ಲದೆ ಈ ಬಡ ಮಹಿಳೆಯರು ಪ್ರತಿ 150 ಊಟದೆಲೆಗೆ ಒಂದು ರೂಪಾಯಿಯಂತೆ - ಗ್ರಾಮದ ಮುಖ್ಯಸ್ಥರಿಗೆ ತೆರಿಗೆ ತೆರಬೇಕು. ಆದರೆ ಇದನ್ನು ಖರೀದಿಸುವ ವ್ಯಾಪಾರಿಗಳು ಏನೂ ತೆರಿಗೆ ತೆರಬೇಕಾಗಿಲ್ಲ. ಈ ರೀತಿ ಈ ಬಡ ಮಹಿಳೆಯರಿಂದ ಪ್ರತಿವರ್ಷ 80 ಲಕ್ಷ ರೂ. ವಸೂಲಿಯಾಗುತ್ತಿದೆ.

ಇದರ ವಿರುದ್ಧ ಹೋರಾಟ ರೂಪಿಸಲು ಸಿಐಟಿಯು ದುಡಿಯು ಮಹಿಳೆಯರ ಸಮನ್ವಯ ಸಮಿತಿ ಮತ್ತು ಜನವಾದಿ ಮಹಿಳಾ ಸಂಘಟನೆಗಳು ಗುಂಪು ಸಭೆಗಳನ್ನು ನಡೆಸಿ ಈ ಕಾನೂನು ಬಾಹಿರ ತೆರಿಗೆಯ ವಿರುದ್ಧ ಪ್ರಚಾರಾಂದೋಲನ ಹರಿಯಬಿಟ್ಟವು. ಇತರ ಹಲವಾರು ಸಂಘಟನೆಗಳನ್ನು ಸಂಪರ್ಕಿಸಿ ಈ ಬಗ್ಗೆ ಶಿಕ್ಷಣ ನೀಡಲಾಯಿತು. - ಈ ಪ್ರಚಾರಾಂದೋಲನದ ಪರಿಣಾಮವಾಗಿ ಜನ್ಮಭೂಮಿ 'ಕಾರ್ಯಕ್ರಮದ' ಪ್ರಮುಖ ಅಧಿಕಾರಿಗಳು ಮೇ 10 ರಂದು ಒಂದು ಸಭೆ ಏರ್ಪಡಿಸಬೇಕಾಯಿತು. ಪಂಚಾಯತಿ ಕಚೇರಿಯ ಮುಂದೆ 500 ಮಹಿಳಾ ಕಾರ್ಮಿಕರು ಸಭೆ ಸೇರಿ ಈ ತೆರಿಗೆ ವಸೂಲಿಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಕೊನೆಗೂ ಈ ತೆರಿಗೆ ವಸೂಲಿಯನ್ನು ನಿಲ್ಲಿಸ ಬೇಕಾಯಿತು. ಅಲ್ಲಿಯ ಮಹಿಳೆಯರು ಒಂದು ಹಳೆಯ ವಾಡಿಕೆಯ ವಿರುದ್ಧ ಒಂದು ಮಹತ್ವಪೂರ್ಣ ಜಯ ಗಳಿಸಿದರು.

ಈ ಸಾಮೂಹಿಕ ಪ್ರಯತ್ನ ಮಹಿಳಾ ಕಾರ್ಮಿಕರಲ್ಲಿ ಹೊಸ ಆತ್ಮವಿಶ್ವಾಸ ಮೂಡಿಸಿದೆ.

ಜನಸಾಮಾನ್ಯರು ಭಾಗವಹಿಸುವ ವಿಕೇಂದ್ರೀಕೃತ ಯೋಜನೆ: ಮಿಡ್ನಾಪುರದ ಅನುಭವ

1977 ರಲ್ಲಿ ಅಧಿಕಾರಕ್ಕೆ ಬಂದುದಿನಿಂದ ಪಶ್ಚಿಮ ಬಂಗಾಳದ ಎಡರಂಗ ಸರಕಾರ ಆರಂಭಿಸಿದ 'ಗ್ರಾಮ ಆಧಾರಿತ ವಿಕೇಂದ್ರೀಕೃತ ಜಿಲ್ಲಾ ಯೋಜನಾ ಪ್ರಕ್ರಿಯೆ"(VBDDP) ಈಗ ಮಿಡ್ನಾಪುರ ಜಿಲ್ಲೆಯಲ್ಲಿ ಯಶಸ್ವಿಯಾಗಿ ನಾಲ್ಕನೇ ಹಂತದಲ್ಲಿದೆ.

ಗ್ರಾಮೀಣ ಅಭಿವೃದ್ಧಿಯಾಗದಿರಲು ಮೂಲಭೂತ ಕಾರಣ ಸದ್ಯದ ಸಾಮಾಜಿಕ - ಆರ್ಥಿಕ ರಚನೆ, ಆದ್ದರಿಂದ ಇದನ್ನು ಬದಲಿಸಬೇಕು-ಇದೇ ಈ ಯೋಜನಾ ಪ್ರಕ್ರಿಯೆಯ ಕಣ್ಣೋಟ. ಆದ್ದರಿಂದ ಗ್ರಾಮೀಣ ಜನಗಳ, ಅದರಲ್ಲೂ ಗ್ರಾಮೀಣ ಬಡವರ ಪರಿಸ್ಥಿತಿಯನ್ನು ಬದಲಿಸಲು ಒಂದು ಅತ್ಯುತ್ತಮ, ಅಪೇಕ್ಷಿತ ಮತ್ತು ಕಾರ್ಯಸಾಧ್ಯವೂ ಆದ ಒಂದು ಪರ್ಯಾಯವನ್ನು ರೂಪಿಸುವುದು ಇದರ ಉದ್ದೇಶ.

ಮಿಡ್ನಾಪುರದಲ್ಲಿ ಇದು 1980 ರಿಂದ ಆರಂಭವಾಯಿತು. 1980-85 ರವರೆಗಿನ ಮೊದಲಿನ ಹಂತ ಪ್ರಯೋಗಾತ್ಮಕವಾಗಿತ್ತು. 54 ಪಂಚಾಯತು ಸಮಿತಿಗಳಲ್ಲಿ 8 ರಲ್ಲಿನ 1600 ಗ್ರಾಮಗಳಲ್ಲಿ ಇವನ್ನು ಕೈಗೆತ್ತಿಕೊಳ್ಳಲಾಯಿತು. 1985-88 ರ ವರೆಗೆ ನಡೆದ ಎರಡನೇ ಹಂತದಲ್ಲಿ ಯೋಜನಾ ಸಮಿತಿಗಳು ರಚನೆಗೊಂಡವು. ಗ್ರಾಮ ಯೋಜನೆಯ ಆಧಾರದ ಮೇಲೆ ಗ್ರಾಮ ಪಂಚಾಯತು ಯೋಜನೆ, ಅದರ ಆಧಾರದಲ್ಲಿ ಬ್ಲಾಕ್ ಯೋಜನೆ, ಇದರ ಆಧಾರದಲ್ಲಿ ಜಿಲ್ಲಾ ಯೋಜನೆ ತಯಾರಿಸಲು ನಿರ್ಧರಿಸಲಾಯಿತು. 1989-94 ರ ಮೂರನೇ ಹಂತದಲ್ಲಿ ಕುಟುಂಬ ಸರ್ವೆ, ಗ್ರಾಮ ಸರ್ವೆ ಹಾಗೂ ಗ್ರಾಮ ಪಂಚಾಯತು ಯೋಜನೆಗಳ ರೂಪ-ರೇಷೆ ತಯಾರಿಸಲಾಯಿತು.

1978 ರಲ್ಲಿ ಆರಂಭವಾದ ರಾಜಕೀಯ ಪಕ್ಷಗಳ ಆಧಾರದ ಪಂಚಾಯತು ವ್ಯವಸ್ಥೆ ಗ್ರಾಮೀಣ ಜನಸಮೂಹಗಳ ರಾಜಕೀಯ ಪ್ರಜ್ಞೆ ಹೆಚ್ಚಿಸುವಲ್ಲಿ ರವಾಯಿತು. ನಂತರ ಎಡರಂಗ ಸರ್ಕಾರ ಸುಧಾರಣೆ ಜಾರಿಗೆ ಅನುಸರಿಸಿದ ವಿಧಾನ, 'ಆಪರೇಷನ್ ಬರ್ಗಾ' ದಲ್ಲಿ ಭಾಗ ಪಾಲುದಾರರ ದಾಖಲಾತಿಗೆ ನಡೆದ ಸಭೆಗಳು ಗ್ರಾಮೀಣ ಜನಗಳಲಿ ಸಾಮೂಹಿಕ ಪ್ರಜ್ಞೆಯನ್ನು ಬೆಳೆಸಿತು. ದೀರ್ಘಕಾಲದಿಂದ ಬಾಧಿಸುತ್ತಿದ್ದ ಕೆಲವು ಸಮಸ್ಯೆಗಳಿಗೆ ಸಾಮೂಹಿಕವಾಗಿ ಹೇಗೆ ಪರಿಹಾರ ಸಾಧ್ಯ ಎಂಬುದನ್ನು ಜನ ಕಣ್ಣಾರೆ ಕಂಡರು. 1978 ರ ಭೀಕರ ಪ್ರವಾಹವನ್ನು ಎದುರಿಸುವಲ್ಲಿ ಪಂಚಾಯತುಗಳ ನೇತೃತ್ವದಲ್ಲಿ ಸ್ಥಳೀಯರ ಮುತುವರ್ಜಿ, ಅದರಿಂದ ಪಡೆದ ಯಶಸ್ಸು ಜನಗಳ ಆತ್ಮವಿಶ್ವಾಸವನ್ನು ಹೆಚ್ಚಿಸಿತು. ಬಹಳಷ್ಟು ಗ್ರಾಮೀಣ ಅಭಿವೃದ್ಧಿ ಮತ್ತು ಪರಿಹಾರ ಚಟುವಟಿಕೆಗಳನ್ನು ಪಂಚಾಯತುಗಳ ಮೂಲಕ ನಿರ್ವಹಿಸಿದ್ದರಿಂದ ಸ್ವಯಮಾಡಳಿತದ ಹೊಸ ಅನುಭವ ಗ್ರಾಮಸ್ಥರಿಗೆ ದೊರೆಯಿತು. ತಮ್ಮ ಅಗತ್ಯಗಳಿಗೆ ಅನುಗುಣವಾಗಿ, ತಮಗೆ ಕಂಡುಬಂದಂತೆ ಯೋಜನೆಗಳನ್ನು ರೂಪಿಸಿ, ತಾವೇ ಅದನ್ನು ಜಾರಿಗೊಳಿಸುವ ಅನುಭವ ಅವರಲ್ಲಿ ಹೊಸ ವಿಶ್ವಾಸ ಮೂಡಿಸಿತು.

ಯೋಜನೆಯ ಯಶಸ್ಸಿನಲ್ಲಿ ಉತ್ತಮ ಮಾಹಿತಿ ಸಂಗ್ರಹ ಬಹಳ ಮಹತ್ವ ಪೂರ್ಣವಾದ್ದು. ಈ ವಿಕೇಂದ್ರೀಕೃತ ಯೋಜನೆ ಆ ದಿಕ್ಕಿನಲ್ಲಿ ಮಹತ್ವದ ಕೆಲಸ ಮಾಡಿತು. ಏಕೆಂದರೆ ಇಲ್ಲಿ ಮಾಹಿತಿ ಸಂಗ್ರಹಿಸುವವರು, ಅದನ್ನು ಬಳಸುವವರು ಮತ್ತು ಅದರ ಪ್ರಯೋಜನ ಪಡೆಯುವವರು ಎಲ್ಲರೂ ಗ್ರಾಮಸ್ಥರೇ ಆಗಿದ್ದರು. ಇದು ಗ್ರಾಮಸ್ಥರಲ್ಲಿ ತಮ್ಮ ಪರಿಸ್ಥಿತಿಯ ಅರಿವು ಮೂಡಿಸಿ ಅದನ್ನು ಪರಿಹರಿಸುವ ಬಗ್ಗೆ ಯೋಚಿಸಲೂ ಹಚ್ಚಿತು.

ಇನ್ನೊಂದೆಡೆ ಯೋಜನೆಯನ್ನು ಜಾರಿಗೆ ತರಲು ಸಂಪನ್ಮೂಲಗಳು ಎಲ್ಲಿಂದ ಬರುತ್ತವೆ ಎಂಬ ಜ್ಞಾನವೂ ಅಗತ್ಯ. ಮಿಡ್ನಾಪುರದಲ್ಲಿ ಗ್ರಾಮ ಯೋಜನೆಯ ಮೂರು ವಲಯಗಳನ್ನು ಗುರುತಿಸಲಾಯಿತು. - ಒಂದು, ಗ್ರಾಮಸ್ಥರೇ ಜಾರಿ ಮಾಡುವ 'ಜನತಾ ವಲಯ'; ಎರಡು, ಬ್ಯಾಂಕ್ ಸಾಲ ಬೇಕಾಗುವ 'ಬ್ಯಾಂಕ್ ವಲಯ ಹಾಗೂ ಮೂರು, ಸರಕಾರೀ ಅನುದಾನ ಬೇಕಾಗುವ 'ಸರಕಾರಿ ವಲಯ'. ಒಂದು ನಿರ್ದಿಷ್ಟ ಐಟಂನಲ್ಲೇ ಈ ಮೂರೂ 'ವಲಯ'ಗಳು ಇರಲು ಸಾಧ್ಯ.

ಒಟ್ಟಿನಲ್ಲಿ ಮಿಡ್ನಾಪುರ ಜಿಲ್ಲೆಯಲ್ಲಿ ಬಹುಪಾಲು ಜನರನ್ನು, ಅದರಲ್ಲೂ ಬಡ, ದಲಿತ ವಿಭಾಗಗಳನ್ನು ಒಳಗೊಳ್ಳುವ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಬಡ ಗ್ರಾಮಸ್ಥರನ್ನು ಸಂಘಟಿಸುವತ್ತ, ಅವರ ನಡುವೆ ಸಾಮಾಜಿಕ ಪ್ರಜ್ಞೆಯ ಕಾರ್ಯಕರ್ತರನ್ನು ಗುರುತಿಸಿ ಬೆಳೆಸುವತ್ತ ವಿಶೇಷ ಪ್ರಯತ್ನ ನಡೆಸಲಾಯಿತು. ಇದಲ್ಲದೆ ಜಿಲ್ಲಾ ಯೋಜನಾ ಸಮಿತಿ ಎಲ್ಲಾ ಕಡೆ ಬಡ ವಿಭಾಗಗಳ, ಹಾಗೂ ಅವರಲ್ಲಿ ವಯಸ್ಕರ ನಿಯಮಿತ ಸಭೆಗಳನ್ನು ನಡೆಸಿ, ಅವರು ಇಂತಹ ಸಭೆಗಳಲ್ಲಿ ತಮ್ಮ ಅಭಿಪ್ರಾಯ ಗಳನ್ನು ಧೈರ್ಯದಿಂದ ಮುಂದಿಡಲು ಅವಕಾಶ ನೀಡಬೇಕು ಎಂದು ವಿವಿಧ ಸಂಘಟನೆಗಳಿಗೆ ಹಾಗೂ ಜನರಿಗೆ ಕರೆ ನೀಡಿತು. ಏಕೆಂದರೆ ಅತ್ಯಂತ ಕೆಳಗಿನ ಹಂತದಲ್ಲಿ ಯೋಜನಾ ಪ್ರಕ್ರಿಯೆ ಬೇರು ಬಿಡಲು ಇದು ಅತ್ಯಗತ್ಯ.

(ಕೃಪೆ: ಗಣಶಕ್ತಿ ಆನ್‌ಲೈನ್)

ರೂರ್ಕೆಲಾ ಉಕ್ಕು ಕಾರ್ಮಿಕರ ಬಲವಾದ ಪ್ರತಿಭಟನೆ


ಖಾಸಗೀಕರಣವಾದಿಗಳು ಹಿಂದಿರುಗಬೇಕಾಯಿತು

ಮೇ 7 ರಂದು ರೂರ್ಕೆಲಾ ರೈಲು ನಿಲ್ದಾಣದಲ್ಲಿ ಸಾವಿರಾರು ಉಕ್ಕು ಕಾರ್ಮಿಕರು ಉಕ್ಕು ಉದ್ದಿಮೆಯ ಬಗ್ಗೆ ಸಲಹೆ ನೀಡಲು ನೇಮಕಗೊಂಡ ವಿದೇಶಿ ಮೆಕಿನ್ಸೆ ಕಂಪನಿಯ ಪ್ರತಿನಿಧಿಗಳನ್ನು ರೈಲಿನಿಂದ ಇಳಿಯಲೂ ಬಿಡಲಿಲ್ಲ.

ಭಾರತದ ಉಕ್ಕು ಪ್ರಾಧಿಕಾರ (ಸೈಲ್) ಭಾರತ ಸರಕಾರದ ಬಯಕೆಯಂತೆ ಬಿಕ್ಕಟ್ಟು ಗ್ರಸ್ತ ಉಕ್ಕು ಉದ್ದಿಮೆಯಲ್ಲಿ ಖರ್ಚು ಕಮ್ಮಿ ಮಾಡುವ ಬಗ್ಗೆ ಒಂದು ಯೋಜನೆ ತಯಾರಿಸಲು ಅಮೇರಿಕದ ಮೆಕಿನ್ಸೆ ಕಂಪನಿಯನ್ನು ನೇಮಿಸಿತ್ತು. ವಾಸ್ತವವಾಗಿ ಉಕ್ಕು ಉದ್ದಿಮೆಯಲ್ಲಿನ ಬಿಕ್ಕಟ್ಟಿಗೆ ಭಾರತ ಸರಕಾರದ ನೀತಿಗಳೇ ಮೂಲ ಕಾರಣ. ಒಂದೆಡೆ ಉದಾರೀಕರಣ ನೀತಿ ಭಾರತೀಯ ಆರ್ಥಿಕದಲ್ಲಿ ವ್ಯಾಪಕ ಹಿಂಜರಿತ ತಂದರೆ ಇನ್ನೊಂದೆಡೆ ಭಾರತದ ಮಾರುಕಟ್ಟೆಯಲ್ಲಿ ವಿದೇಶಿ ಉಕ್ಕನ್ನು ತಂದು ರಾಶಿ ಹಾಕಲು ಅವಕಾಶ ನೀಡಿದ್ದರಿಂದ ಭಾರತೀಯ ಉಕ್ಕು ತಯಾರಕರು ಮೂಲೆಗುಂಪಾದರು. ಆದರೆ ಮೆಕಿನ್ಸೆ ಕಂಪನಿ ಸೂಚಿಸಿರುವ ಪರಿಹಾರ ಈ ಅಂಶವನ್ನು ಗಣನೆಗೆ ತಗೊಂಡಿಲ್ಲ. ಸೈಲ್ ಬಳಿಯಿರುವ ವಿದ್ಯುತ್ ಸ್ಥಾವರಗಳನ್ನು ಮಾರಬೇಕು, ಮಿಶ್ರ ಉಕ್ಕು ಸ್ಥಾವರ, ಸೇಲಂ ಸ್ಥಾವರ ಹಾಗೂ ಇಸ್ಕೋವನ್ನು, ಇನ್ನೂ ಹಲವು ವಿಭಾಗಗಳನ್ನು ಪ್ರತ್ಯೇಕಿಸಬೇಕು, ಕನಿಷ್ಠ 75 ಸಾವಿರ ಕಾರ್ಮಿಕರಿಗೆ ಎ.ಆರ್.ಎಸ್. ಕೊಟ್ಟು ಹೊರ ಕಳಿಸಬೇಕು, ಇಲಾಖಾ ದಾಸ್ತಾನು ಯಾರ್ಡ್‌ಗಳನ್ನು ಮುಚ್ಚಬೇಕು-ಇವೇ ಮುಂತಾದವುಗಳು ಈ ಕಂಪನಿಯ ಸಲಹೆಗಳು. ಬೇರೆಮಾತಿನಲ್ಲಿ ಹೇಳುವುದಾದರೆ ಬಿಜೆಪಿ ಸರಕಾರ ನಂಬಿರುವ ಈ ವಿದೇಶಿ ಕಂಪನಿ ಸದ್ಯದ ಬಿಕ್ಕಟ್ಟನ್ನು ಪರಿಹರಿಸುವ ಹೆಸರಿನಲ್ಲಿ ಉಕ್ಕು ಉದ್ದಿಮೆಗೆ ಆತ್ಮಹತ್ಯೆಯ ಕ್ರಮಗಳನ್ನು ಬೋಧಿಸುತ್ತಿದೆ.

ಉಕ್ಕು ಕಾರ್ಮಿಕರು ಇಂತಹ ಕ್ರಮಗಳನ್ನು ವಿರೋಧಿಸುತ್ತಿದ್ದಾರೆ. ರೂರ್ಕೆಲಾ ಉಕ್ಕು ನಗರದಲ್ಲಿರುವ ವಿದ್ಯುತ್ ಸ್ಥಾವರವನ್ನು ಕೊಳ್ಳಬೇಕೆಂದಿದ್ದವರು ಪಟ್ಟಣದೊಳಕ್ಕೆ ಬರದಂತೆ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರು ತಡೆದರು. ಮೇ 7 ರಂದು ಮೇಲೆ ಹೇಳಿದ ಪ್ರತಿಭಟನೆ ನಡೆಯಿತು. ದೇಶಾದ್ಯಂತ ಉಕ್ಕು ಕಾರ್ಮಿಕರ ಜಂಟಿ ಕಾರ್ಯಾಚರಣೆಗಳನ್ನು ಭಾರತದ ಉಕ್ಕು ಕಾರ್ಮಿಕರ ಒಕ್ಕೂಟ (SWFI) ಯೋಜಿಸುತ್ತಿದೆ.

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ಆಡಳಿತ ಕೊನೆಗೊಂಡ ನಂತರ ಎರಡನೇ ಚುನಾವಣೆ ನಡೆದಿದೆ- ಜೂನ್ ೨ ರಂದು. ಆಗಲೇ ಫಲಿತಾಂಶ ಬಂದಿದ್ದು ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ ಜಯಭೇರಿ ಬಾರಿಸಿದೆ. ಮೂರನೇ ಎರಡು ಬಹುಮತಕ್ಕೆ ಒಂದೇ ಸೀಟು ಕಡಿಮೆಯಾಗಿದೆ. ಒಂಬತ್ತು ಪ್ರಾಂತಗಳಲ್ಲಿ ಏಳು ಪ್ರಾಂತ್ಯಗಳು ನಿಚ್ಚಳ ಬಹುಮತ ಪಡೆದಿದೆ. ಕಳೆದ ಬಾರಿ ಪ್ರಮುಖ ವಿರೋಧ ಪಕ್ಷವಾಗಿದ್ದ ನ್ಯೂ ನ್ಯಾಶನಲ್ ಪಾರ್ಟಿ [ವರ್ಣಭೇದದ ಕಾಲದಲ್ಲಿ ಆಳುವ ಪಕ್ಷವಾಗಿದ್ದ ನ್ಯಾಶನಲ್ ಪಾರ್ಟಿಯ ಹೊಸ ಅವತಾರ] ಹೀನಾಯವಾಗಿ ಸೋತಿದೆ. ಇನ್ನೊಂದು ಬಿಳಿಯರ ಪಕ್ಷ ಡೆಮೊಕ್ರಾಟಿಕ್ ಪಕ್ಷ ಪ್ರಮುಖ ವಿರೋಧ ಪಕ್ಷವಾಗಿ ಹೊಮ್ಮಿದೆ. ದಕ್ಷಿಣ ಆಫ್ರಿಕನ್ ಕಮ್ಯೂನಿಸ್ಟ್ ಪಕ್ಷ ಭಾರಿ ಸ್ವತಂತ್ರ ಬೆಂಬಲ ಹೊಂದಿದ್ದರೂ, ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್‌ಗೆ ಬೆಂಬಲ ಮುಂದುವರೆಸಿ ಈ ಜಯಭೇರಿಗೆ ಕಾರಣವಾಗಿದೆ. ಈ ಚುನಾವಣೆ ಫಲಿತಾಂಶದ ವಿವರಗಳು ಅದರ ಮಹತ್ವದ ಬಗ್ಗೆ ಓದಿ.



ದಕ್ಷಿಣ ಆಫ್ರಿಕಾದಲ್ಲಿ ಚುನಾವಣೆಗಳು

ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್‌ನ ಜಯಭೇರಿ

ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ (ಎ.ಎನ್.ಸಿ) ಪಾರ್ಲಿಮೆಂಟಿನ 400 ಸೀಟುಗಳಲ್ಲಿ 266 ಸೀಟುಗಳಿಸಿದೆ. ಕಳೆದ ಬಾರಿಗಿಂತ 14 ಸೀಟುಗಳನ್ನು ಹೆಚ್ಚಿಸಿಕೊಂಡಿದೆ. ಶೇಕಡಾ 66.5 ರಷ್ಟು ಮತಗಳಿಸಿದೆ. ದಕ್ಷಿಣ ಆಫ್ರಿಕಾದಲ್ಲಿ ಪ್ರಾತಿನಿಧಿಕ ಪದ್ಧತಿ ಅನುಸರಿಸುತ್ತಿದ್ದು, ಅತಿ ದೊಡ್ಡ ಪಕ್ಷಕ್ಕೆ ಯಾವುದೇ ಅನುಕೂಲವಿಲ್ಲ. (ಭಾರತದ ಚುನಾವಣೆ ವ್ಯವಸ್ಥೆಯಲ್ಲಿ ಅರ್ದದಷ್ಟು ಮತಗಳಿಸ ದಿದ್ದರೂ ಮೂರನೇ ಎರಡರಷ್ಟು ಸೀಟುಗಳಿಸಬಹುದು) ಆದರೂ ಮೂರನೇ ಎರಡು ಸೀಟುಗಳಿಸುವುದು ಮಹತ್ಸಾಧನೆ. (ಫಲಿತಾಂಶದ ವಿವರಗಳಿಗೆ ಬಾಕ್ಸ್‌ನೋಡಿ) ದಕ್ಷಿಣ ಆಫ್ರಿಕಾದ ಜನ ಎ.ಎಸ್.ಸಿಯಲ್ಲಿ ಇಟ್ಟಿರುವ ವಿಶ್ವಾಸದ ಪ್ರತೀಕ ಇದು. ಬಹಳ ಅಪರೂಪದ, ಮಹತ್ವದ ವಿಜಯ ಪ್ರುಗತಿಪರ ಶಕ್ತಿಗಳಿಗೆ ಹಲವು ದೇಶಗಳಲ್ಲಿ ಪ್ರಗತಿಪರ ಶಕ್ತಿಗಳು. ಅಧಿಕಾರ, ಜನಬೆಂಬಲದಲ್ಲಿ ಹಿಂಜರಿಯುತ್ತಿರುವ ಈ ಕಾಲದಲ್ಲಿ ಇದು ಮಹತ್ವದ ಮುನ್ನಡೆ.

ಎ.ಎನ್.ಸಿ. ಸಾಧನೆಗಳು:

ಕಳೆದ ಐದು ವರ್ಷಗಳಲ್ಲಿ ದಕ್ಷಿಣ ಆಫ್ರಿಕಾ ಮಹತ್ವದ ಮುನ್ನಡೆ ಸಾಧಿಸಿದೆ. ಜಗತ್ತಿನ ಯಾವುದೇ ಇತರ ದೇಶದಲ್ಲಿ ಕಂಡರಿಯದ ಕೇಳರಿಯದ ಕ್ರೂರವರ್ಣ ಭೇದ ವ್ಯವಸ್ಥೆಯನ್ನು ಕಿತ್ತು ಹಾಕಲಾಗಿದೆ. ಹಲವು ದಶಕಗಳ ವರ್ಣದ್ವೇಷದ ಕಹಿಯನ್ನು ಆಶ್ಚರ್ಯಕರ ರೀತಿಯಲ್ಲಿ ಮರೆತಿದೆ. ವರ್ಣಭೇದ ರಹಿತ ದಕ್ಷಿಣ ಆಫ್ರಿಕಾ ಕರಿಯರ ಪಾಲಿಗೆ ಬಂದ ದಶಕಗಳ ದಟ್ಟದರಿದ್ರತೆ, ಹಿಂದುಳಿಯುವಿಕೆಯನ್ನು ಹೋಗಲಾಡಿಸುವತ್ತ ಅತ್ಯಂತ ಕಷ್ಟದ ಸಂದರ್ಭದಲ್ಲಿಯೂ ದೃಢ ಹೆಜ್ಜೆಗಳನ್ನಿಟ್ಟಿದೆ. ಪ್ರಜಾಸತ್ತೆಯನ್ನು ವ್ಯಾಪಕವಾಗಿ ಸ್ಥಾಪಿಸಿದೆ. ಶಿಕ್ಷಣ ಮನೆ, ಕುಡಿಯುವ ನೀರು, ವಿದ್ಯುತ್- ಮುಂತಾದ ಮೂಲಭೂತ ಸೌಕರ್ಯಗಳನ್ನು ಎಲ್ಲಾ ಶೋಷಿತ ಕರಿಯರಿಗೆ ಒದಗಿಸುವ ಅಗಾಧ ಕೆಲಸವನ್ನು ಮುತುವರ್ಜಿಯಿಂದ ಕೈಗೆತ್ತಿಕೊಂಡಿದೆ.

ಕಳೆದ ಐದು ವರ್ಷಗಳಲ್ಲಿ ಎ.ಎನ್.ಸಿ. ಸರ್ಕಾರದ ಸಾಧನೆಗಳಿಗೆ ಬಾಕ್ಸ್ ನೋಡಿ, ಸೈನ್ಯ ಅಧಿಕಾರ ಶಾಹಿಯಲ್ಲಿ ಭಾರಿ ಬದಲಾವಣೆಗೆ ಅವಕಾಶವಿಲ್ಲದೆ ಅಧಿಕಾರಕ್ಕೆ ಬಂದ ಎ.ಎನ್.ಸಿ. ಬದಲಾವಣೆಗೆ ಬಿಳಿಯರ ಅಸಹಾಯಕ ಪ್ರತಿರೋಧ ಒಂದೆಡೆ, ಕರಿಯರ ಆತುರ ಇನ್ನೊಂದೆಡೆ ಇವೆರಡನ್ನೂ ಸಮರ್ಥವಾಗಿ ನಿಭಾಯಿಸಿದೆ. 'ನಾವೆಲ್ಲರೂ ಸೇರಿ ಬದಲಾವಣೆಯನ್ನು ತೀವ್ರಗೊಳಿಸೋಣ' ಎನ್ನುವುದೇ ಚುನಾವಣೆಯಲ್ಲಿ ಎ.ಎನ್.ಸ್ಸಿಯ ಘೋಷಣೆಯಾಗಿತ್ತು. ಕಳೆದ ಐದು ವರ್ಷಗಳಲ್ಲಿ ಗಮನಾರ್ಹ ಬದಲಾವಣೆ ಸಾಧಿಸಿದ್ದೇವೆ. ಅದನ್ನು ತೀವ್ರಗೊಳಿಸುವುದು ಮುಂದಿನ ಐದು ವರ್ಷಗಳ ಮುನ್ನೋಟ ಎಂದಿದೆ.

ಎಎನ್‌ಸಿ ವಿರುದ್ಧ ಅಪಪ್ರಚಾರ:

ಎ.ಎನ್.ಸಿ. ಅಧಿಕಾರದಲ್ಲಿದ್ದರೂ ಕಳೆದ ಐದು ವರ್ಷಗಳಲ್ಲಿ ಅದರ ಕಾರ್ಯಕರ್ತರ ಮೇಲೆ ವಿರೋಧ ಪಕ್ಷಗಳ ಹಿಂಸಾತ್ಮಕ ದಾಳಿ ಅಪಪ್ರಚಾರ ನಡೆದೇ ಇತ್ತು. ಅದು ಚುನಾವಣಾ ಕಾಲದಲ್ಲಿ ಅತ್ಯಂತ ತೀವ್ರವಾಗಿತ್ತು. ಎ.ಎನ್.ಸಿ. ಬಹುಮತ ಪಡೆಯುವುದು ಅದರ ಅತ್ಯಂತ ಕೆಟ್ಟ ವಿರೋಧಿಗಳು ಒಪ್ಪುವ ಮಾತೇ ಆಗಿದ್ದರೂ, ಅದಕ್ಕೆ ಈಗ ಬಂದಿರುವ ಭಾರಿ ಬಹುಮತ ಬರದಂತೆ ತಡೆಯಲು ಭಾರಿ ಪ್ರಯತ್ನ ನಡೆಯಿತು. ಬಿಳಿಯರ ಪರವಾದ ಗುತ್ತೇದಾರಿ ಪತ್ರಿಕೆಗಳು ಸಾಮ್ರಾಜ್ಯಶಾಹಿ ಮಾಧ್ಯಮಗಳು ANC ಗೆ ಮೂರನೇ ಎರಡು ಬಹುಮತ ಪಡೆದರೆ ಸಂವಿಧಾನ ಬದಲಾಯಿಸಿ ಏಕ ಪಕ್ಷೀಯ ವ್ಯವಸ್ಥೆ ಸ್ಥಾಪಿಸುತ್ತದೆ ಎಂಬ ಆಧಾರ ರಹಿತ ಅಪಪ್ರಚಾರ ಮಾಡಿದವು. ಇದಲ್ಲದೆ ದೇಶದ ನಿಜವಾದ ಸಕಲ ವರ್ಣಗಳ ಬೆಂಬಲ ವಿಶ್ವಾಸ ಗಳಿಸಿರುವ ಏಕಮಾತ್ರ ಪಕ್ಷವಾದ ANC ವರ್ಣಾಧಾರದ ಮೇಲೆ ಭೇದ ಭಾವ ತೋರುತ್ತಿದೆ ಎಂದು ಬಿಂಬಿಸಲು ಪ್ರಯತ್ನಿಸಿತು. ಭಾರತೀಯ ಮೂಲದವರ ವಿರುದ್ಧ ಕರಿಯರು ದ್ವೇಷ, ಅಸೂಯೆಯ ಪ್ರತೀಕಾರ ನಡೆಸುತ್ತಿದ್ದಾರೆ. ಆ ಬಗ್ಗೆ ANC ಏನೂ ಮಾಡುತ್ತಿಲ್ಲ ಎಂಬ ಪ್ರಚಾರ ನಡೆಯಿತು. ಆದರೂ ಅದರಿಂದ ಏನೂ ಪರಿಣಾಮವಾದಂತಿಲ್ಲ. ಇನ್ನೊಂದೆಡೆ ಕೆಲವು ಕರಿಯರ ಪಕ್ಷಗಳೂ ಈ ಅಪಪ್ರಚಾರದಲ್ಲಿ ಸೇರಿದ್ದವು. ಈ ಐದು ವರ್ಷಗಳಲ್ಲಿ ANC ಕರಿಯರಿಗೆ ಏನೂ ಮಾಡಿಲ್ಲ, ಬಿಳಿಯರ ಜತೆ ಅವರ ಪ್ರಭುತ್ವದ ಜತೆ ಶಾಮೀಲಾಗಿದೆ ಎಂದು ಆಪಾದಿಸಿ ಜನ ಬೆಂಬಲ ಪಡೆಯಲು ಪ್ರಯತ್ನಿಸಿದರು. ಇದೂ ವಿಫಲವಾಗಿದೆ.

ತ್ರಿವಳಿ ಕೂಟದ ಪಾತ್ರ:

ಇದಕ್ಕೆ ಕಾರಣ ANC ಯ ಹಿಂದಿರುವ 'ತ್ರಿವಳಿ'ಗಳ ಕೂಟ, ಜನಪರ ಸಾಧನೆಗಳು, ಜನರ ವಿಶ್ವಾಸ ಅತಿ ಮುಖ್ಯ ಕಾರಣ. ಕಮ್ಯುನಿಸ್ಟ್ ಪಕ್ಷ (SACP) ಟ್ರೇಡ್ ಯೂನಿಯನ್ ಮಂಡಳಿ (COSATU) ಮತ್ತು ANCಗಳ ತ್ರಿವಳಿ-ಕೂಟ ಅಭೇದ್ಯವಾಗಿದೆ. ಅಪಾರ ಜನ ಬೆಂಬಲ ಆಧಾರಿತವಾದದ್ದು. ಕಳೆದ ಐದು ವರ್ಷಗಳಲ್ಲಿ ಏನೇನೂ ಬದಲಾವಣೆ ಸಾಧ್ಯವಿತ್ತೊ.

ಅದನ್ನೆಲ್ಲಾ ಮಾಡಿ ಜನವಿಶ್ವಾಸ ಗಳಿಸಿದ ಕೂಟ. SACP COSATU ಗಳು ತಮ್ಮ ಸ್ವತಂತ್ರ ಅಸ್ತಿತ್ವ, ಬೆಂಬಲ ನೀತಿಗಳನ್ನುಳಿಸಿಕೊಂಡೇ ANC ಸರಿಯಾದ ದಿಕ್ಕಿನಲ್ಲಿ ಸಾಗುವಂತೆ ಜನಾನುರಾಗ ಕಳೆದುಕೊಳ್ಳದಂತೆ ಶ್ರಮವಹಿಸಿವೆ. ದೇಶೀಯ ಗುತ್ತೇದಾರಿಗಳ, ಸಾಮ್ರಾಜ್ಯಶಾಹಿಗಳ ಒತ್ತಡಗಳಿಗೆ ಮಣಿಯದಂತೆ, ಅವರ ನೀತಿಗಳಿಗೆ ಮಾರು ಹೋಗದಂತೆ ಜನಪರ ಎಚ್ಚರದ ಪಾತ್ರ ವಹಿಸಿವೆ. ಐ.ಎಂ.ಎಫ್, ಗುತ್ತೇದಾರಿ ಕಂಪನಿಗಳ ಒತ್ತಡದಿಂದ ಅನುಸರಿಸಲಾದ ಕೆಲವು ನೀತಿಗಳನ್ನು ಇವು ಬಲವಾಗಿ ವಿರೋಧಿಸಿವೆ. 'ಪ್ರಬಲ ವಿರೋಧ ಪಕ್ಷವಿಲ್ಲದಿದ್ದರೆ ಏಕ ಪಕ್ಷೀಯ ಸರ್ವಾಧಿಕಾರ' ಎಂಬ ವಿರೋಧ ಪಕ್ಷಗಳ ಪ್ರಚಾರವನ್ನು ಇವು ಹುಸಿ ಎಂದು ತೋರಿಸಿವೆ. COSATU, SACP ANC ಕೂಟದ ಸದಸ್ಯರಾಗಿರುವ ವರೆಗೆ ಬೇರೆ ವಿರೋಧ ಪಕ್ಷದ ಅಗತ್ಯವಿಲ್ಲ ಎಂದು ಜನರಿಗೆ ಮನವರಿಕೆಯಾಗಿದೆ. ಅಲ್ಲದೆ ವಿರೋಧ ಪಕ್ಷಗಳು ಎಂದು ಹೇಳಿಕೊಂಡಿರುವ ಎಲ್ಲಾ ಪಕ್ಷಗಳು ಒಂದಲ್ಲ ಒಂದು ರೀತಿಯಲ್ಲಿ ವರ್ಣಭೇಧ- ರಹಿತ ಸಮಬಾಳು ಆಧಾರಿತ ಹೊಸ ಸಮಾಜ ಕಟ್ಟುವ ಬದಲಾವಣೆಗೆ ವಿರೋಧವಾಗಿವೆ, ಅಡ್ಡಗಾಲು ಹಾಕುವಂತಹವು, ಎಂದು ಜನರಿಗೆ ಗೊತ್ತಾಗಿದೆ. SACP COSATU ಗಳು ದುಡಿಯುವ ಜನರ ಮಧ್ಯೆ ANC ಗೆಲುವಿಗೆ ಶ್ರಮವಹಿಸಿದ್ದವು. SACP ಪ್ರತ್ಯೇಕ ಪಕ್ಷವಾಗಿ ಚುನಾವಣೆಯಲ್ಲಿ ಏಕೆ ಭಾಗವಹಿಸಬಾರದು, ಕಾರ್ಮಿಕರಿಗೆ ಸೋಶಲಿಸ್ಟ್‌ರಿಗೆ ANC ಬೆಂಬಲಿಸುವುದು ಏಕೆ ಅಗತ್ಯ- ಎಂಬುದರ ಬಗ್ಗೆ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟರಿಗೆ ಸೈದ್ಧಾಂತಿಕ ಸ್ಪಷ್ಟತೆ, ಖಚಿತತೆ ಇದೆ. ಈ ಬಗ್ಗೆ ಕಳೆದ ವರ್ಷ ನಡೆದ 10ನೇ ಮಹಾಧಿವೇಶನದಲ್ಲೇ ನಿರ್ಧರಿಸಲಾಗಿತ್ತು. ("ಪ್ರತಿಯೊಬ್ಬ ಕಾರ್ಮಿಕ, ಸೋಶಲಿಸ್ಟ್‌ರ ಮತ ANC ಗೆ -ಬಾಕ್ಸ್ ನೋಡಿ) ಈಗಿನ ಪ್ರಜಾಪ್ರಭುತ್ವ ಕ್ರಾಂತಿಯ ಘಟ್ಟದ ಕರ್ತವ್ಯಗಳನ್ನು ಪೂರ್ತಿ ಮಾಡುವುದರ ಜತೆ ಸಮಾಜವಾದ ಕಟ್ಟುವ ತಂತ್ರಗಳ ಬಗ್ಗೆ ಮರೆಯದೆ ಎಚ್ಚರಿಸಿದೆ.

ಮುಂದಿನ 5 ವರ್ಷಗಳಲ್ಲಿ ಪ್ರಜಾಸತ್ತಾತ್ಮಕ ಸಾಮಾಜಿಕ ವ್ಯಾಪಾರ ಬದಲಾವಣೆಯನ್ನು ತೀವ್ರಗೊಳಿಸುವ 'ತ್ರಿವಳಿ ಕೂಟ'ದ ಪ್ರಯತ್ನ ಯಶಸ್ವಿಯಾಗಲಿ ಎಂದು ಇಡೀ ವಿಶ್ವದ ಪ್ರಗತಿಪರರು ಹಾರೈಸಬೇಕಾಗಿದೆ. ○

ಫಲಿತಾಂಶದ ವಿವರಗಳು

ದಕ್ಷಿಣ ಆಫ್ರಿಕಾದ ಪಾರ್ಲಿಮೆಂಟಿನ 400 ಸೀಟುಗಳಲ್ಲಿ ಪಕ್ಷಗಳ ಬಲಾಬಲ ಹೀಗಿವೆ

ಪಕ್ಷ	ಸೀಟುಗಳು	ಮತ	ಶೇಕಡಾ(%)
ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ (ANC)	-266	66.5	
ಡೆಮೊಕ್ರಾಟಿಕ್ ಪಾರ್ಟಿ(DP)	-38	10.0	
ನ್ಯೂ ನೇಶನಲ್ ಪಾರ್ಟಿ (NNP)	-28	7.7	
ಇಂಕಾತಾ ಫ್ರೀಡಂ ಪಾರ್ಟಿ (IFP)	-34	7.5	
ಯುನೈಟೆಡ್ ಡೆಮೊಕ್ರಾಟಿಕ್ ಮೂವ್‌ಮೆಂಟ್ (UDM)	14	3.3	
ಇತರ	-20	5.0	



ಒಟ್ಟಿಗೆ ನಾವು ಬದಲಾವಣೆಯನ್ನು ತೀವ್ರಗೊಳಿಸಬಹುದು

ಇದು ANCಯ ಮುಖ್ಯ ಚುನಾವಣಾ ಘೋಷಣೆಯಾಗಿತ್ತು. ಕಳೆದ 5 ವರ್ಷಗಳಲ್ಲಿ ಬದಲಾವಣೆಗೆ ಜತೆಗೆ ದುಡಿದಿದ್ದೇವೆ. ಈಗ ಬದಲಾವಣೆಯನ್ನು ತೀವ್ರಗೊಳಿಸಬೇಕಾಗಿದೆ, ಎಂದು. ತನ್ನ ಪ್ರಾಮಾಣಿಕತೆ, ನಿಜವಾದ ಕಳಕಳಿ ಕಳೆದ ಐದು ವರ್ಷಗಳ ಸಾಧನೆಯನ್ನು ANC ಪಣಕ್ಕಿಟ್ಟು ಯಶಸ್ವಿಯಾಗಿದೆ. ಪೋಸ್ಟರುಗಳಲ್ಲಿ, ಭಾಷಣಗಳಲ್ಲಿ, ಪ್ರಚಾರದಲ್ಲಿ ಕೆಳಗಿನ ಸಾಧನೆಗಳನ್ನು ANC ಎತ್ತಿಹಿಡಿಯುತ್ತಿತ್ತು.

- ತಲೆಯ ಮೇಲೆ ಸೂರು ಇಲ್ಲದ 7 ಲಕ್ಷ ಜನರಿಗೆ ಮನೆ ಕಟ್ಟಿಕೊಡಲಾಗಿದೆ- ಅವರ ಸ್ವಂತದ್ದು. ಪ್ರತಿ ತಿಂಗಳ 15 ಸಾವಿರ ಮನೆ ಕಟ್ಟುವ ಯೋಜನೆ ಪ್ರಗತಿಯಲ್ಲಿದೆ.
- 30 ಲಕ್ಷ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿದೆ.
- 15 ಲಕ್ಷ ಹೆಚ್ಚಿಗೆ ಮಕ್ಕಳು ಸ್ಕೂಲ್ ಸೇರಿದ್ದಾರೆ 10 ಸಾವಿರ ಕ್ಲಾಸು ರೂಂಗಳು 50 ಲಕ್ಷ ರ್‍ಯಾಂಡ್ ವೆಚ್ಚದಲ್ಲಿ ಕಟ್ಟಲಾಗಿದೆ. 50 ಲಕ್ಷ ಮಕ್ಕಳ ಮಧ್ಯಾಹ್ನದ ಊಟ ಸ್ಕೂಲಲ್ಲಿ ದೊರಕಿಸುವ ಯೋಜನೆಯ ಪ್ರಯೋಜನ ಪಡೆದಿದ್ದಾರೆ.
- 20 ಲಕ್ಷ ಮನೆಗಳಿಗೆ ವಿದ್ಯುತ್ ಒದಗಿಸಲಾಗಿದೆ-ಪ್ರತಿ ದಿನ 1300 ಮನೆಗಳ ದರದಲ್ಲಿ. ವಿದ್ಯುತ್ ಸೌಲಭ್ಯ ಇರುವ ಮನೆಗಳ ಸಂಖ್ಯೆ ಈಗ ಶೇಕಡಾ 63 ಆಗಿದೆ.
- 30 ಲಕ್ಷ ಹೊಸ ಫೋನ್ ಕನೆಕ್ಷನ್ ಕೊಡಲಾಗಿದೆ-ಹೆಚ್ಚಾಗಿ ಬಡ ಮನಗಳಿಗೆ
- ಮುಷ್ಕರ ಹೂಡುವ ಯೂನಿಯನ್ನುಗಳನ್ನು ಕಟ್ಟಿಕೊಳ್ಳುವ ಹಕ್ಕು ಕೊಡುವ ಕಾನೂನು ರಚಿಸಿದ್ದು.

"ಪ್ರತಿಯೊಬ್ಬ ಸೋಶಲಿಷ್ಟರ, ಕಾರ್ಮಿಕರ ಓಟು ANC ಗೆ"

ಇದು ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಚುನಾವಣಾ ಪ್ರಚಾರದ ಘೋಷಣೆಯಾಗಿತ್ತು. ಚುನಾವಣೆಯ ಕೆಲವು ದಿನಗಳ ಮೊದಲು ಮೇ 20 ರಂದು 'ಕೆಂಪು ಗುರುವಾರದ' ಪ್ರಚಾರ- ಪ್ರಕ್ಷೋಭೆಗೆ ಪಕ್ಷ ಕರೆ ನೀಡಿತು. ಆದಿನ ಪ್ರಧಾನ ಕಾರ್ಯದರ್ಶಿ ಹಿಡಿದು ಪ್ರತಿ ಶಾಖಾ ಸದಸ್ಯನ ವರೆಗೆ ಕೈಗಾರಿಕಾ ಕಾರ್ಮಿಕರನ್ನು ಇತರ ದುಡಿಯುವ ವರ್ಗದವರನ್ನು ನೇರವಾಗಿ ಭೇಟಿ ಮಾಡಿ ANC ಗೆ ಓಟು ಹಾಕಲು ನಿರ್ಧರಿಸಿತ್ತು. ಇದು ದೊಡ್ಡ ಪ್ರಮಾಣದಲ್ಲಿ ಕಾರ್ಯಗತ ವಾಯಿತು. ಒಂದೇ ದಿನದಲ್ಲಿ 4 ಲಕ್ಷ ಕಾರ್ಮಿಕರನ್ನು ಭೇಟಿಮಾಡಿ ANC ಗೆ ಓಟು ಹಾಕಲು ಪ್ರಚಾರ ಮಾಡಲಾಯಿತು. ಆ ಮೇಲೆ ಅದನ್ನು ಚುನಾವಣೆಯ ವೇಳೆ ಮುಂದುವರೆಸಲಾಯಿತು.

ಕಮ್ಯುನಿಸ್ಟ್ ಪಕ್ಷ ಚುನಾವಣೆಯಲ್ಲಿ ನೇರವಾಗಿ ಭಾಗವಹಿಸದಿದ್ದರೂ ದೊಡ್ಡ ಪ್ರಮಾಣದಲ್ಲಿ ಅದರ ಸದಸ್ಯರು ANC ಅಭ್ಯರ್ಥಿಗಳಾಗಿ ಗೆದ್ದು ಬಂದಿದ್ದಾರೆ. ANC ಸಂಘಟನೆಯ ಕಾರ್ಯದಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಿದ್ದಾರೆ. 1994 ರಿಂದ ವರ್ಣಭೇದವನ್ನು ಅಂತ್ಯಗೊಳಿಸಿ ಜನತೆಯ ಪ್ರಜಸತ್ತಾತ್ಮಕ ಮುನ್ನಡೆಗೆ ಅವಕಾಶ ಮಾಡಿಕೊಟ್ಟ ಘಟ್ಟವನ್ನು ಪಕ್ಷ ಹೊಸ ಪ್ರಜಾಸತ್ತಾತ್ಮಕ ಕ್ರಾಂತಿ ಎಂದು ತಿಳಿಯುತ್ತದೆ. ಈ ಕ್ರಾಂತಿಯನ್ನು ಆಳ, ಅಗಲ ಗೊಳಿಸಿ ಮುಂದಕ್ಕೆ ಒಯ್ಯಲು ANC ನಂತಹ ವಿಶಾಲ ರಂಗದ ಅಗತ್ಯ ಇದೆ ಎಂದು ಅದರ ತಿಳುವಳಿಕೆ, ಈ ಪ್ರಜಾಸತ್ತಾತ್ಮಕ ಅವಕಾಶ ಬಳಸಿ ಈ ಕ್ರಾಂತಿಯಲ್ಲಿ ದುಡಿಯುವ ವರ್ಗದ ಅಧಿಪತ್ಯ ಸ್ಥಾಪಿಸುವುದು ಪಕ್ಷದ ಕಾರ್ಯ ಯೋಜನೆ. 1994 ರಲ್ಲಿ ಆದ ಭಾರಿ ಬದಲಾವಣೆಯ ನ್ಯೂನ್ಯತೆಗಳ ಮಿತಿಯೊಳಗೆ 'ಪ್ರಜಾಪ್ರಭುತ್ವ ಕ್ರಾಂತಿ'ಯನ್ನು ಸಮಾಜವಾದಿ ಬದಲಾವಣೆಗೆ ಮುಂದೊಯ್ಯುವ ಕಾರ್ಯಯೋಜನೆ, ತಂತ್ರಗಳನ್ನು ಪಕ್ಷ ಹೊಂದಿದೆ

ಕಥೆ

ಜಗದ್ವಿಖ್ಯಾತ ಜರ್ಮನ್ ಕವಿ, ನಾಟಕಕಾರ, ನಿರ್ದೇಶಕ, ವಿಚಾರವಾದಿ ಬರ್ಟೋಲ್ಟ್ ಬ್ರೆಕ್ಟ್(1898-1956) ಕಥೆಗಾರನೂ ಆಗಿದ್ದರೆಂಬುದು ಬಹಳ ಮಂದಿಗೆ ತಿಳಿದಿರಲಿಕ್ಕಿಲ್ಲ. ಎರಡನೇ ಮಹಾಯುದ್ಧದಲ್ಲಿ ಸೋವಿಯತ್ ಕೆಂಪು ಸೇನೆಹಿಟ್ಲರನ ನಾಝೀ ಪಡೆಗಳನ್ನು ಹಿಮ್ಮೆಟ್ಟಿಸುತ್ತಾ ಜರ್ಮನಿಯ ರಾಜಧಾನಿ ಬರ್ಲಿನ್‌ವರೆಗೂ ಬಂದಿದ್ದ ಸಂದರ್ಭದ ಕಥೆ ಇದು. ಪ್ರೊ. ಎಲ್.ಕೆ.ರಾಮಚಂದ್ರಮೂರ್ತಿ ಇದನ್ನು ಕನ್ನಡಕೆ ಅನುವಾದಿಸಿದ್ದಾರೆ. ಕೃಪೆ: ಬೆಂಗಳೂರಿನ `ಅಂಕಣ' ಪ್ರಕಾಶನ ಪ್ರಕಟಿಸಿದ 'ಬ್ರೆಕ್ಟ್‌ನ ಕಥೆಗಳು'

ಇಬ್ಬರು ಮಕ್ಕಳು

1945 ಜನವರಿ ಹೊತ್ತಿಗೆ ಹಿಟ್ಲರನ ಯುದ್ಧ ಮುಗಿಯುತ್ತ ಬಂದಿತ್ತು.

ಒಮ್ಮೆ ತುರಿಂಗಿಯಾ ಪ್ರದೇಶದ ರೈತನ ಹೆಂಡತಿಯೊಬ್ಬಳಿಗೆ ಒಂದು ಕನಸು ಬಿತ್ತು. ಅದರಲ್ಲಿ ಯುದ್ಧದ ಮುಂಚೂಣಿಯಲ್ಲಿದ್ದ ತನ್ನ ಮಗ ತನ್ನನು ಕರೆಯುತ್ತಿದ್ದ ಹಾಗೆ ಅವಳಿಗೆ ಭಾಸವಾಯಿತು. ನಿದ್ದೆ ಕಣ್ಣಿನಲ್ಲೆ ಎದ್ದು ಅಂಗಳಕ್ಕೆ ಹೋದಳು. ಕೊಳಾಯಿ ಬಳಿ ನೀರು ಕುಡಿಯುತ್ತಿದ್ದವನು ತನ್ನ ಮಗನೇ ಎಂದು ಭ್ರಮಿಸಿದಳು. ಆದರೆ ಆ ಯುವಕನ ಜತೆ ಮಾತನಾಡುವಾಗ ಅವನು ಹೊಲದಲ್ಲಿ ಬಲವಂತವಾಗಿ ದುಡಿಯುತ್ತಿದ್ದ ರಷ್ಯನ್ ಯುದ್ಧ ಖೈದಿಗಳಲ್ಲೊಬ್ಬನೆಂದು ತಿಳಿಯಿತು. ಕೆಲವು ದಿನಗಳಾದ ಮೇಲೆ ಅವಳಿಗೆ ಒಂದು ವಿಚಿತ್ರ ಅನುಭವವಾಯಿತು. ಹತ್ತಿರದ ತೋಪಿನಲ್ಲಿ ಕೆಲಸ ಮಾಡುತ್ತಿದ್ದ ಖೈದಿಗಳಿಗೆ ಅವಳು ಊಟ ತಂದು ಕೊಡುತ್ತಿದ್ದ ಸಂದರ್ಭ. ಖೈದಿಗಳು ತೋಪಿನಲ್ಲಿದ್ದ ಮರದ ಮೋಟುಗಳನ್ನು ಬೇರು ಸಹಿತ ಕಿತ್ತು ಹಾಕುವ ಕೆಲಸದಲ್ಲಿದ್ದರು. ಊಟ ತಂದು ಕೊಟ್ಟು ಅವಳು ಹಿಂತಿರುಗಿ ನೋಡಿದಾಗ ಅದೇ ಯುವಕ ಖೈದಿ ಕಾಣಿಸಿದ. ಅನಾರೋಗ್ಯದ ಚಿಹ್ನೆಗಳಿದ್ದ ಮುಖ. ಅವತ್ತು ಯಾರೋ ಕೊಟ್ಟ ಒಂದು ಬಟ್ಟಲು ಸೂಪನ್ನು ಅವನು ನಿರಾಸೆಯಿಂದ ನೋಡುತ್ತಿದ್ದ. ಇದ್ದಕ್ಕಿದ್ದಂತೆ ಅವಳಿಗೆ ಅವನ ಮುಖ ತನ್ನ ಮಗನ ಮುಖದಂತೆ ಕಾಣಿಸಿತು. ಮುಂದೆ ಕೆಲವು ಬಾರಿ ಮತ್ತೆ ಅವಳಿಗೆ ಅದೇ ಅನುಭವವಾಯಿತು. ರಷ್ಯನ್ ಯುವಕನ ಮುಖ ಸರ್ರನೆ ಸರಿದು ತನ್ನ ಮಗನ ಮುಖವಾಗಿ ಕಾಣಿಸಿಕೊಳ್ಳುವುದು. ಆಮೇಲೆ ಆ ಹುಡುಗ ಕಾಯಿಲೆ ಬಿದ್ದ. ಯಾರೂ ಕೇಳುವವರಿಲ್ಲದೆ ಕೊಟ್ಟಿಗೆಯ ಒಳಗೆ ಬಿದ್ದುಕೊಂಡಿದ್ದ. ರೈತ ಹೆಂಗಸಿಗೆ ಕರುಳು ಚುರಕ್ ಎಂದು ಅವಳು ರೋಗಿಗೆ ಏನಾದರೂ ಪೌಷ್ಟಿಕಾಂಶದ ಆಹಾರ ಕೊಡೋಣ ಅನಿಸಿತು. ಆದರೆ ಅವಳ ತಮ್ಮ ಅದಕ್ಕೆ ಅಡ್ಡ ಬಂದ. ಅವನು ಯುದ್ಧದಲ್ಲಿ ಅಂಗವಿಕಲನಾಗಿ ಈಗ ಜಮೀನಿನ ಉಸ್ತುವಾರಿಯಲ್ಲಿದ್ದ. ಅವನು ಅಲ್ಲಿ ಕೆಲಸ ಮಾಡುವ ಖೈದಿಗಳ ಬಗ್ಗೆ ನಿಷ್ಕರುಣೆಯಿಂದ ವರ್ತಿಸುತ್ತಿದ್ದ, ಜತೆಗೆ ಈಚೆಗೆ ಎಲ್ಲವೂ ಅಸ್ತವ್ಯಸ್ತಗೊಂಡು, ಹಳ್ಳಿಯವರಿಗೆ ಖೈದಿಗಳನ್ನು ಕಂಡರೆ ದಿಗಿಲಾಗುತ್ತಿತ್ತು. ಅವನ ಆಕ್ಷೇಪಣೆಗಳನ್ನು ಅವಳು ಕಡೆಗಣಿಸುವಂತಿರಲಿಲ್ಲ. ಈ ಖೈದಿಗಳು ನಡೆಸುವ ಭೀಕರ ಕೃತ್ಯಗಳ ವಿಷಯವಾಗಿ ಅವಳೂ ಕೇಳಿದ್ದಳು. ಆ ದುಷ್ಟರಿಗೆ ಸಹಾಯ ಮಾಡಬಾರದೆಂದು ಅವಳಿಗೂ ಅನ್ನಿಸುತ್ತಿತ್ತು. ಏತನ್ಮಧ್ಯೆ, ಯುದ್ಧಕ್ಷೇತ್ರದಲ್ಲಿದ್ದ ತನ್ನ ಮಗನನ್ನು ಶತ್ರುಗಳು ಏನು ಮಾಡುವರೋ ಎಂಬ ಭಯದಿಂದ ಅವಳು ನಡುಗುತ್ತಿದ್ದಳು. ದಿಕ್ಕಿಲ್ಲದ ಕಾಯಿಲೆ (ಖೈದಿ) ಸೈನಿಕನಿಗೆ ಸಹಾಯ ಮಾಡಬೇಕೋ ಬೇಡವೋ ಎಂಬ ಅನಿಶ್ಚಿತ ಮನಸ್ಸಿನಲ್ಲಿದ್ದ ಅವಳು ಒಂದು ಖೈದಿಗಳ ಗುಂಪು ಏನೋ ಗುಟ್ಟಾಗಿ ಮಾತಾಡಿಕೊಳ್ಳುತ್ತಿದ್ದುದನ್ನು ನೋಡಿದಳು. ಹಿಮ ಕವಿದ ಹಣ್ಣಿನ ತೋಟದಲ್ಲಿ ಅವರು ಯಾರಿಗೂ ಕೇಳಿಸದಂತೆ ಕಾತರ[illegible]ಗಿ ಚರ್ಚಿಸುತ್ತಿದ್ದರು. ಕಾಯಿಲೆ ಖೈದಿಯೂ ಅವರ ಜೊತೆ ಇದ್ದ. ಅವನು ಚಳಿಜ್ವರದಿಂದ, ಬಹುಶಃ ನಿಶ್ಯಕ್ತಿಯಿಂದ ಬಳಲಿ ನಡುಗುತ್ತಿದ್ದ. ರೈತರ ಹೆಂಗಸನ್ನು ಕಂಡ ಕೂಡಲೇ ಅವನು ಬೆಚ್ಚಿ ಬಿದ್ದ. ಭಯದಲ್ಲಿ ಅವನ ಮುಖ ಮತ್ತೆ ವಿಚಿತ್ರವಾಗಿ ಮಾರ್ಪಾಡಾಯಿತು. ಅದನ್ನು ಅವಳು ಗಮನಿಸಿದಳು. ಅವಳಿಗೂ ಕಳವಳವುಂಟಾಯಿತು. ಆ ಹೊತ್ತಿಗೆ ಖೈದಿ ಅವಳ ಮಗನೇನೋ ಎನ್ನುವಷ್ಟು ಅವಳಿಗೆ ವಾತ್ಸಲ್ಯ ಬೆಳೆದಿತ್ತು. ಆದರೂ ಕರ್ತವ್ಯ ದೃಷ್ಟಿಯಿಂದ ಅವಳು ತಾನು ಹಣ್ಣಿನ ತೋಟದಲ್ಲಿ ಕಂಡದನ್ನು ತನ್ನ ತಮ್ಮನಿಗೆ ತಿಳಿಸಿದಳು. ಮೊದಲೇ ಯೋಚಿಸಿದ್ದಂತೆ ಅವಳು ಖೈದಿಗೆ ಯಾರಿಗೂ ಕಾಣಿಸದಂತೆ ಒಂದಿಷ್ಟು ಮಾಂಸದ ಚರಟ ಕೊಡುವುದಾಗಿ ನಿರ್ಧರಿಸಿದ್ದಳು. ಥರ್ಡ್‌ರೀಕ್(ಹಿಟ್ಲರ್ ಆಳ್ವಿಕೆಯ ಕಾಲ) ನಲ್ಲಿ ಇಂಥ ಉಪಕಾರದ ಕೆಲಸ ಅಪಾಯಕರವಾಗಿತ್ತು. ಸಾಲದಕ್ಕೆ, ಅವಳ ತಮ್ಮನೇ ಅವಳ ವಿರೋಧಿ. ಈ ಎಲ್ಲ ತಾಕಲಾಟದ ನಡುವೆ ಹೇಗೋ ಒಂದು ತೀರ್ಮಾನಕ್ಕೆ ಬಂದಳು. ಖೈದಿ ತಪ್ಪಿಸಿಕೊಂಡು ಹೋಗಲು ರಹಸ್ಯವಾಗಿ ಅವನಿಗೆ ಸಹಾಯ ಮಾಡುವಂತಾಯಿತು. ಕೆಂಪು ಸೈನ್ಯ ಮುನ್ನುಗ್ಗಿ ಬರುತ್ತಿತ್ತು. ಹಿಟ್ಲರ್‌ನ ಕಡೆಯವರು ಖೈದಿಗಳನ್ನು ಇನ್ನೂ ದೂರ ಸಾಗಿಸುವ ಯೋಚನೆ ಮಾಡುತ್ತಿದ್ದರು. ಅವರನ್ನೆಲ್ಲಾ ಕೊಂದು ಹಾಕುವ ಸಾಧ್ಯತೆಯೂ ಹೆಚ್ಚಾಗಿತ್ತು. ಖೈದಿ ತರುಣ ರೈತ ಹೆಂಗಸನ್ನು ಮೂಕ ಸಂಜ್ಞೆಗಳಿಂದ, ಹರಕು ಮುರುಕು ಜರ್ಮನ್ ಭಾಷೆಯಲ್ಲಿ ಅಂಗಲಾಚಿ ಬೇಡುತ್ತಿದ್ದ. ಕೊನೆಗೆ ಅವಳು ಒಪ್ಪಿದಳು. ಒಂದು ನಡುವಂಗಿ, ದೊಡ್ಡ ಉಣ್ಣೆಗುತ್ತರಿ ತಂದು ಕೊಟ್ಟಳು. ಒಂದು ದಿನ ಅವನು ಅಲ್ಲಿಂದ ಪರಾರಿಯಾದ.

ಫೆಬ್ರವರಿ ಕೊನೆಯ ಒಂದು ಬೆಳಿಗ್ಗೆ ಅವಳ ಮನೆಯ ಕಿಟಕಿ ಬಾಗಿಲನ್ನು ಯಾರೋ ತಟ್ಟಿದಂತಾಯಿತು. ಭಯದಿಂದ ತಲ್ಲಣಿಸಿದಳು. ಕಿಟಕಿ ಗಾಜಿನಾಚೆ ಬೆಳಗಿನ ಮಬ್ಬಿನಲ್ಲಿ ಅವಳ ಮಗನ ಮುಖ ಕಾಣಿಸಿತು. ಈ ಸಲ ನಿಜವಾಗಿ ಅವಳ ಮಗನೇ ಬಂದಿದ್ದ. ಅವನು ಎಸ್. ಎಸ್.(ನಾಜಿ ಸ್ವಯಂ ಸೇವಕ) ಗುಂಪಿನ ಸಮವಸ್ತ್ರ ಧರಿಸಿದ್ದ. ಅವನ ದಳದವರನ್ನು ಶತ್ರುಗಳು ಕಡಿದು ಹಾಕಿದ್ದರು. ರಷ್ಯನ್ ಸೇನೆ ನಾಜಿಗಳನ್ನು ಅಟ್ಟಿಸಿಕೊಂಡು ಬರುತ್ತಾ ಆ ಹಳ್ಳಿಯಿಂದ ಕೆಲವೇ ಕಿಲೋ ಮೀಟರ್ ದೂರದಲ್ಲಿದೆಯೆಂದು ಅವನು ತಾಯಿಗೆ ತಿಳಿಸಿದ. ಅವನು ಮನೆಗೆ ಬಂದಿರುವುದು ಯಾರಿಗೂ ತಿಳಿಯಕೂಡದೆಂದು ಹೇಳಿದ.

ರೈತ ಹೆಂಗಸು, ಅವಳ ಮಗ ಮತ್ತು ತಮ್ಮ ಮೂವರೂ ಅಟ್ಟದ ಮೂಲೆಯಲ್ಲಿ ಸೇರಿ ಸಮಾಲೋಚನೆ ನಡೆಸಿದರು. ರಷ್ಯನ್ ಸೈನಿಕರು ಆಗಲೇ ಎಸ್. ಎಸ್. ಸ್ವಯಂ ಸೇವಕನನ್ನು ನೋಡಿರಬಹುದು. ಆದ್ದರಿಂದ ಅವರು ಇವನ ವಿರುದ್ಧ ಸಾಕ್ಷಿ ಹೇಳುವುದು ಖಂಡಿತ. ಆದ್ದರಿಂದ ಅವರನ್ನು ಮುಗಿಸಿಬಿಡುವುದು ಅತ್ಯಗತ್ಯವೆಂದು ಮೂವರೂ ನಿರ್ಧರಿಸಿದರು. ಹತ್ತಿರದ ಕಲ್ಲುಬಂಡೆ ಗಣಿಯ ಬಳಿಗೆ ರಷ್ಯನ್ ಖೈದಿಗಳನ್ನು ಒಬ್ಬೊಬ್ಬರನ್ನಾಗಿ ಆಸೆ ತೋರಿಸಿ ಸೆಳೆದೊಯ್ದು ಕೊಲ್ಲಬೇಕೆಂದು ಎಸ್.ಎಸ್. ಮನುಷ್ಯ ಹಟ ಹಿಡಿದ. ಹೆಣಗಳನ್ನು ಕಲ್ಲು ಕುಳಿಯೊಡಕ್ಕೆ ಒಗೆದುಬಿಡಬಹುದೆಂದು ಅವನ ಎಣಿಕೆ. ಪ್ರಾರಂಭದಲ್ಲಿ ಖೈದಿಗಳಿಗೆ ತಲಾ ಇಷ್ಟೆಂದು ಕುಡಿತದ ಪಡಿತರ ನೀಡುವುದು ; ಈಚೆಗೆ ತಾನು (ಎಸ್.ಎಸ್. ಮನುಷ್ಯ) ಹಾಗೂ ಹೊಲದ ಕೆಲಸದಾಳುಗಳು ಖೈದಿಗಳ ಜತೆ ತುಂಬಾ ಸ್ನೇಹದಿಂದಿರುವುದರಿಂದ ಅವರಿಗೆ ಹಾಗೆ ಕುಡಿತಕ್ಕೆ ಕೊಡುವುದು ಸಹಜವಾಗಿ ತೋರಿ ಯಾರೂ ಅನುಮಾನಿಸುವುದಿಲ್ಲ. ಎಲ್ಲರಿಗೂ ತಮ್ಮ ಬಗ್ಗೆ ಸದಭಿಪ್ರಾಯವುಂಟಾಗುತ್ತದೆ ಎಂದು ಮುಂತಾಗಿ ಅವನು ಸಲಹೆ ಕೊಟ್ಟ. ಅವನು ಹಾಗೆ ತನ್ನ ತಂತ್ರವನ್ನು ವಿವರಿಸುತ್ತಿದ್ದಾಗ ತನ್ನ ತಾಯಿ ಗಡಗಡನೆ ನಡುಗುವುದನ್ನು ಅವನು ಒಮ್ಮೆ ಗಮನಿಸಿದ. ಏನೇ ಆಗಲಿ ಅವಳು ಮತ್ತೆ ಕೊಟ್ಟಿಗೆಯ ಒಳಕ್ಕೆ ಹೋಗದಂತೆ ಅವನು ಮತ್ತು ಅವಳ ತಮ್ಮ ತಡೆದರು. ತುಂಬಾ ಭೀತಿಯಿಂದ ಅವಳು ಕತ್ತಲಾಗುವುದನ್ನೇ ಎದುರು ನೋಡುತ್ತಿದ್ದಳು.

ರಷ್ಯನ್ ಖೈದಿಗಳು ಕೃತಜ್ಞತೆಯಿಂದ ಅವನು ಕೊಟ್ಟ ಬ್ರಾಂಡಿಯನ್ನು ತೆಗೆದುಕೊಂಡು ರಾತ್ರಿಯೆಲ್ಲಾ ಕುಡಿದರು. ವಿಷಾದ ಭರಿತ ಹಾಡುಗಳನ್ನು ಹಾಡುತ್ತಿದ್ದುದು ಅವಳಿಗೆ ಕೇಳಿಸಿತು. ರಾತ್ರಿ ಹನ್ನೊಂದರ ವೇಳೆಯಲ್ಲಿ ಅವನು ಕೊಟ್ಟಿಗೆ ಒಳಕ್ಕೆ ಹೋಗಿ ನೋಡಿದಾಗ ಖೈದಿಗಳು ಪರಾರಿಯಾಗಿದ್ದರು. ಅವರು ಕುಡಿದ ಹಾಗೆ ನಟಿಸಿದ್ದರು. ರೈತರು ತಮ್ಮ ಬಗ್ಗೆ ಎಲ್ಲೂ ಇಲ್ಲದ ಸ್ನೇಹ ತೋರಿಸಿದ್ದರಿಂದ ಅವರಿಗೆ ಅನುಮಾನ ಬಂದಿತ್ತು. ರಷ್ಯನ್ ಸೈನ್ಯ ತೀರಾ ಹತ್ತಿರಕ್ಕೆ ಬರುತ್ತಿದೆ ಎಂದು ಊಹಿಸಲು ಅವರಿಗೆ ಕಷ್ಟವಾಗಲಿಲ್ಲ.

ರಾತ್ರಿ ಸರಿ ಹೊತ್ತಿನ ಮೇಲೆ ರಷ್ಯನ್ ಸೈನ್ಯ ಬಂತು. ರೈತ ಹೆಂಗಸಿನ ಮಗ, ತಮ್ಮ ಇಬ್ಬರೂ ಕುಡಿದುಬಿದ್ದಿದ್ದರು. ಅತ್ಯಂತ ಗಾಬರಿಯಿಂದ ಅವಳು ಮಗನ ಎಸ್.ಎಸ್. ಸಮವಸ್ತ್ರವನ್ನು ಸುಟ್ಟುಬಿಡಲು ನೋಡಿದಳು. ರಷ್ಯನ್ ಸೈನ್ಯವನ್ನು ಸ್ವಾಗತಿಸಿ ಅವರಿಗೆ ಊಟೋಪಚಾರ ನಡೆಸುವ ಕೆಲಸ ಅವಳ ಮೇಲೆಯೇ ಬಿತ್ತು. ಎಲ್ಲವನ್ನು ಕಠೋರ ನಿರ್ಭಾವುಕತೆಯಿಂದಲೇ ಮಾಡಿದಳು. ಸೈನ್ಯ ಬೆಳಿಗ್ಗೆ ಹೊರಟು ಬರುತ್ತಿತ್ತು. ನಿದ್ರೆ ಇಲ್ಲದೆ ಕಂಗಾಲಾಗಿದ್ದ ಮಗ ಇನ್ನಷ್ಟು ಕುಡಿಯಲು ಕೇಳಿದ. ತಾನು ಪುನಃ ಜರ್ಮನ್ ಸೈನ್ಯಕ್ಕೆ ಸೇರಿ ಹೋರಾಡುವುದಾಗಿ ಹೇಳಿದ. ಹಾಗೆ ಮಾಡಿದರೆ ಅವನು ಸರ್ವನಾಶವಾಗುತ್ತಾನೆಂದು ವಿವರಿಸುವ ಗೋಜಿಗೆ ಅವಳು ಹೋಗಲಿಲ್ಲ, ಅವನನ್ನು ತಡೆಯಲು ಯತ್ನಿಸಿದಾಗ ಅವನು ಅವಳನ್ನು ಕೊಟ್ಟಿಗೆಯೊಳಕ್ಕೆ ತಳ್ಳಿದ. ಅವಳು ಒಂದು ಮರದ ತುಂಡನ್ನು ಎತ್ತಿ ಜೋರಾಗಿ ಬೀಸಿ ಅವನಿಗೆ ಹೊಡೆದಳು. ಅವನು ಕೆಳಕ್ಕೆ ಬಿದ್ದ.

ಅವತ್ತು ಬೆಳಿಗ್ಗೆ ಅವಳು ಗಾಡಿ ಹೊಡೆದುಕೊಂಡು ಪಕ್ಕದ ಹಳ್ಳಿಯಲ್ಲಿ ಬೀಡು ಬಿಟ್ಟಿದ್ದ ರಷ್ಯನ್ ಸೈನ್ಯದ ಕಚೇರಿಗೆ ಹೋದಳು. ಹಗ್ಗದಿಂದ ಕೈಕಾಲು ಕಟ್ಟಿ ಗಾಡಿಯಲ್ಲಿ ತಂದಿದ್ದ ತನ್ನ ಮಗನನ್ನು ಅವರ ವಶಕ್ಕೆ ಒಪ್ಪಿಸಿದಳು. ಯುದ್ಧ ಖೈದಿಯಾದ ಅವನ ಜೀವವುಳಿಸಲು ಬೇರೆ ಉಪಾಯ ತೋಚದೆ ತಾನು ಹಾಗೆ ಮಾಡಬೇಕಾಯಿತೆಂದು ಅವಳು ದುಭಾಷಿಯೊಬ್ಬನಿಗೆ ವಿವರಿಸಿದಳು.

7ನೇ ವಿಶ್ವಕಪ್‌ನಿಂದ ಭಾರತ ತಂಡ ಹೊರಗೆ




ದಾಖಲೆಗಳ ಸೃಷ್ಟಿ, ಶತಕಗಳ ಸುರಿಮಳೆ, ಮಾರಕ ಬೌಲಿಂಗ್, ಪ್ರಚಂಡ ಪ್ರದರ್ಶನದ ನಡುವೆಯೂ ಅಜರ್ ನೇತೃತ್ವದ ಭಾರತ ಕ್ರಿಕೆಟ್ ತಂಡ 7ನೇ ವಿಶ್ವಕಪ್‌ಗೆ ವಿದಾಯ ಹೇಳಿತು.

ಸೂಪರ್ ಸಿಕ್ಸ್‌ನ ಎರಡನೇ ಪಂದ್ಯದಲ್ಲಿ ತನ್ನ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು ತನ್ನ ಮಾರಕ ಬೌಲಿಂಗ್‌ನಿಂದ ಚಿಂದಿ ಮಾಡಿದ ಭಾರತ ತಂಡ, ಜಿಂಬಾಬ್ವೆ ಎದುರಿನ ಪಾಕಿಸ್ತಾನದ ಗೆಲುವಿನಿಂದಾಗಿ ಎಲ್ಲಾ 'ರೇ' ಗಳಿಂದ ಹೊರ ಬಂದು ಅನಿವಾರ್ಯವಾಗಿ ವಿದಾಯ ಹೇಳಬೇಕಾಯಿತು.

ಈ ವಿಶ್ವಕಪ್‌ನಲ್ಲಿ ಬಂದ 7 ಶತಕಗಳಲ್ಲಿ ದ್ರಾವಿಡ್ 2, ಸಚಿನ್, ಗಂಗೂಲಿ ಹಾಗೂ ಜಡೇಜಾ ತಲಾ ಒಂದು ಶತಕಗಳೊಂದಿಗೆ 5 ಶತಕ ಸಿಡಿಸಿದರೆ, ವೆಂಕಟೇಶ ಪ್ರಸಾದ್ ಹಾಗೂ ರಾಬಿನ್‌ಸಿಂಗ್ ಪಂದ್ಯವೊಂದರಲ್ಲಿ 5 ವಿಕೆಟ್ ಪಡೆದು ವಿಕ್ರಮ ಸಾಧಿಸಿದರು. ಗಂಗೂಲಿ ಹಾಗೂ ದ್ರಾವಿಡರ ವಿಶ್ವ ದಾಖಲೆ ಜೊತೆಯಾಟ ಹೊರಹೊಮ್ಮಿದ್ದರೂ ಲೀಗ್ ಪಂದ್ಯಗಳಲ್ಲಿನ ಜಿಂಬಾಬ್ವೆ ಎದುರಿನ ಸಣ್ಣ ಸೋಲು ಭಾರತ ತಂಡವನ್ನು ಹೊರದಬ್ಬಿತು.

ಸೂಪರ್‌ಸಿಕ್ಸ್‌ನ ತನ್ನ ಕೊನೆಯ ಪಂದ್ಯದಲ್ಲಿ ನ್ಯೂಜಿಲ್ಯಾಂಡ್ ವಿರುದ್ಧ ಭಾರೀ ಅಂತರದಿಂದ ಗೆದ್ದರೂ ಭಾರತ 4 ಅಂಕ ಗಳಿಸುತ್ತದೆ. ಹಾಗೂ ಈಗಾಗಲೇ 4 ಅಂಕಗಳಿಸಿರುವ ಆಸ್ಟ್ರೇಲಿಯ ಭಾರತವನ್ನು ಮಣಿಸಿರುವುದರಿಂದ ಹೊಸ ನಿಯಮದ ರೀತಿ ಸೆಮಿಫೈನಲ್ ತಲುಪಬಹುದು.

ಭಾರತ ಈ ಬಾರಿಯ ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದರೂ ಜಿಂಬಾಬ್ವೆ ಹಾಗೂ ಆಸ್ಟ್ರೇಲಿಯ ಎದುರಿನ ಸೋಲುಗಳಿಂದಾಗಿ (ವಿಶ್ವಕಪ್‌ನ ಹೊಸ ನಿಯಮದಂತೆ) ಈ ಬಾರಿ ವಿಶ್ವಕಪ್‌ಗೆ ವಿದಾಯ ಹೇಳಲೇಬೇಕಾಯಿತು. ಆದರೂ ಮುಂದಿನ ಪಂದ್ಯಗಳು ರೋಚಕತೆಯಿಂದ ಕೂಡಿರುವುದರಲ್ಲಿ ಸಂಶಯವಿಲ್ಲ.



ನಮ್ಮ ದೇಶದ ಟೆನ್ನಿಸ್ ಜೋಡಿ - ಲಿಯಾಂಡರ್ ಪಾಯಸ್ ಮತ್ತು ಮಹೇಶ್ ಭೂಪತಿ - ವಿಶ್ವದ ಪ್ರತಿಷ್ಠೆಯ ಫ್ರೆಂಚ್ ಓಪನ್‌ನ ಡಬಲ್ಸ್‌ನಲ್ಲಿ ಫೈನಲ್ ಪಂದ್ಯದಲ್ಲಿ ಐತಿಹಾಸಿಕ ಗೆಲುವು ಸಾಧಿಸಿದ್ದಾರೆ. ಆದರೆ ವಿಶ್ವ ಕ್ರಿಕೆಟ್ ಕಪ್‌ನ ಭರಾಟೆಯಲ್ಲಿ ಈ ವಿಜಯ ದೇಶದ ಗಮನವನ್ನು ಅಷ್ಟಾಗಿ ಸೆಳೆಯಲಿಲ್ಲ. ಯುರೋಪಿಯನ್ನರದೇ ಪ್ರಾಬಲ್ಯವಿರುವ ಈ ಆಟದಲ್ಲಿ ಇತ್ತೀಚೆಗೆ ಈ ಜೋಡಿ ಹಲವಾರು ಡಬಲ್ಸ್ ಪ್ರಶಸ್ತಿಗಳನ್ನು ಗೆದ್ದಿದ್ದರು ಈ ಕ್ಷೇತ್ರದಲ್ಲಿ ಅತ್ಯಂತ ಪ್ರತಿಷ್ಠೆಯ 'ಗ್ರಾನ್‌ಸ್ಲಾಂ' ಪಂದ್ಯಗಳಲ್ಲಿ ಗೆಲ್ಲುವುದು ಇದೇ ಮೊದಲು. ಕೆಲವು ತಿಂಗಳ ಹಿಂದೆ ಇನ್ನೊಂದು ಗ್ರಾನ್ ಸ್ಲಾಂ ಪಂದ್ಯವಾದ ಆಸ್ಟ್ರೇಲಿಯನ್ ಓಪನ್ಸ್ ನ ಡಬಲ್ಸ್ ಫೈನಲ್ ನಲ್ಲಿ ಈ ಜೋಡಿ ತೀವ್ರ ಸೆಣಸಾಟದ ನಂತರವಷ್ಟೇ ಸೋತಿದ್ದು. ಈಗ ಈ ಪಾಯಸ್-ಭೂಪತಿ ಜೋಡಿ ಯು.ಎಸ್.ಓಪನ್ ಹಾಗೂ ವಿಂಬಲ್ಡನ್ ಗ್ರಾನ್ ಸ್ಲಾಂಗಳ ಮೇಲೆ ಕಣ್ಣಿಟ್ಟಿದೆ. ದೇಶದ ಹಾರ್ದಿಕ ಅಭಿನಂದನೆಗಳು ಮತ್ತು ಶುಭಾಶಯಗಳು ಜಾಹೀರಾತುಗಳ ಗದ್ದಲಗಳನ್ನೂ ಮೀರಿ ಅವರ ಜೊತೆಗಿವೆ.

Reg.No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ